ಫೆಬ್ರವರಿ
2026

ಸಂಪುಟ 41
ಸಂಚಿಕೆ 2

# ಪ್ರಸಾದ

ಮಾಸಿಕ




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಜೆಎಸ್ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಏರೋ ಮೆಡಿಕಲ್ ಸೈನ್ಸ್ ಫೆಲೋಶಿಪ್ ಪೂರ್ಣಗೊಳಿಸಿದ ಫೆಲೋಗಳ ಪದವಿ ಪ್ರದಾನ ಸಮಾರಂಭವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಅಲೆನ್ ಮ್ಯಾಕ್ ಹೆನ್ರಿ ಸ್ಯಾಮುಯೆಲ್, ಡಾ. ಶಾಲಿನಿ ನಾಲ್ವಾಡ್, ಡಾ. ನಾರಾಯಣಪ್ಪ. ಡಾ. ಹೆಚ್. ಬಸವನಗೌಡಪ್ಪ, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ನೀಲ್ ದುರ್ಗೆ, ಡಾ. ರಾಹುಲ್ ಸಿಂಗ್ ಸರ್ದಾರ್, ಡಾ. ಫ್ಲೋರಾ ಲುಸಿ ಬರ್ಡ್, ಡಾ. ಸಾರ್ಸ್ಲಾ ಅಬ್ರಾಹಂ, ಡಾ. ಜೇಮ್ಸ್ ಕ್ಯಾಂಪೆಲ್ ಮೂನಿಯವರುಗಳೊಂದಿಗೆ ಪದವಿ ಪುರಸ್ಕೃತ ಫೆಲೋಗಳಿದ್ದಾರೆ (13 ಫೆಬ್ರವರಿ 2026)

# ಪ್ರಸಾದ

**ಸಂಪುಟ 41 : ಸಂಚಿಕೆ 2** **ಫೆಬ್ರವರಿ 2026**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 49




**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಮಾರಿಷಸ್‌ನಲ್ಲಿ ಜೆಎಸ್‌ಎಸ್ ಸ್ಕೂಲ್ ಆಫ್ ಮೆಡಿಸಿನ್ ಅನ್ನು ಮಾರಿಷಸ್ ಗಣರಾಜ್ಯದ ಘನತೆವೆತ್ತ ಅಧ್ಯಕ್ಷರಾದ ಶ್ರೀ ಧರ್ಮಬೀರ್ ಗೋಖೂಲ್‌ರವರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿದರು. ಡಾ. ಬಿ. ಸುರೇಶ್, ಡಾ. ಕವಿರಾಜ್ ಶರ್ಮಾ ಸುಕೋನ್, ಶ್ರೀ ಅನಿಲ್‌ಕುಮಾರ್ ಬಜ್ಜೂ, ಶ್ರೀಮತಿ ಬೃಂದಾ ಗೋಖೂಲ್ ಹಾಗೂ ಶ್ರೀ ಅನುರಾಗ್ ಶ್ರೀವಾತ್ಸವ್‌ರವರುಗಳಿದ್ದಾರೆ (4 ಫೆಬ್ರವರಿ 2026)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ

ಗುರುವಾಣಿ 5

ಸಂಪಾದಕೀಯ 7

ಭೂಮಾಚಿಂತನ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಕರುಣಾಮಯಿ 16
ನಿ.ಪ್ರ.ಸ್ವ. ಶ್ರೀ ಶಿವರುದ್ರ ಸ್ವಾಮಿಗಳು
ಶ್ರೀ ಬೇಲಿ ಮಠ, ಬೆಂಗಳೂರು

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 19
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವ 25
ಸದಾನಂದ ಕನವಳ್ಳಿ

ಘನಲಿಂಗದೇವರು : ಆತ್ಮಾವಲೋಕನದ ಶರಣ 36
ಡಾ. ಎ. ನಿರಂಜನ

ಮಾದಾರ ಚೆನ್ನಯ್ಯ: ಬಸವಣ್ಣ ಮತ್ತು ಹರಿಹರನ ದೃಷ್ಟಿಯಲ್ಲಿ... 41
ಡಾ. ರಾಜಶೇಖರ ಜಮದಂಡಿ

ವಾರ್ತಾ ವಿಹಾರ 51
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ನಿನ್ನೊಡನೆ ಮರೆಯಿಲ್ಲದೆ ಆಡುತಿಪ್ಪೆನಯ್ಯ

ಎನ್ನ ಅಂತರಂಗದಲ್ಲಿಕುಮಂತ್ರ ಕುಡಿವರಿದ ಭೇದವ
ನಿನ್ನೊಡನೆ ಮರೆಯಿಲ್ಲದೆ ಆಡುತಿಪ್ಪೆನಯ್ಯ–ಒಡೆಯನೇ!

ಜಾಗ್ರದವಸ್ಥೆಯಲ್ಲಿ ಲೋಕೋಪಚಾರ ಬಿಡದು
ಜಿಹ್ವಾಲಂಪಟತನ ಉಡುಗದು
ಸುಖ-ದುಃಖಕ್ಕೆ ಎನ್ನ ಮನ ಮರುಗುತಿರ್ದ ಬಳಿಕ
ಎನಗೆ ಇಷ್ಟಲಿಂಗದ ಪೂಜೆಯೆಲ್ಲಿಯದೋ?!

ಸ್ವಪ್ನಾವಸ್ಥೆಯಲ್ಲಿ ಬ್ರಹ್ಮಾಂಡದೊಳಗುಳ್ಳ
ಕಡೆಮೊದಲಿಲ್ಲದ ದುರ್ವಿಕಾರದಲ್ಲಿ ಹರಿದಾಡುವ ಜೀವಂಗೆ
ಪ್ರಾಣಲಿಂಗದ ಪೂಜೆಯೆಲ್ಲಿಯದೋ?!

ಸುಷುಪ್ತ್ಯವಸ್ಥೆಯಲ್ಲಿ –
ಲಿಂಗವ ಕೂಡಿ ಮೈಮರೆದಿರದೆ
ಕನಸಿನ ಸ್ತ್ರೀಯ ಕೂಡಿ
ಇಂದ್ರಿಯಂಗಳ ಬಿಟ್ಟು ಆನಂದಿಸುವ ಕಾಮವಿಕಾರಿಗೆ
ಭಾವಲಿಂಗದ ಪೂಜೆಯೆಲ್ಲಿಯದೋ ?!

ಈ ಪ್ರಕಾರದ
ದುರ್ಗುಣಂಗಳ ನಾನು ಮರೆಮಾಡಿಕೊಂಡು
ಶರಣನೆಂದು ವಚನಂಗಳ ಹಾಡಿದರೆ–
ತಿಂಗಳ ಬೆಳಕಿನ ಸಿರಿಯಂ ಕಂಡು
ನಾಯಿ ಹರುಷಂಗೊಂಡು ಬಳ್ಳಿಟ್ಟು ಬೊಗುಳಿದಂತಾಯಿತ್ತು!

ಅದೇನು ಕಾರಣವೆಂದರೆ –
ನೀ ಎನ್ನ ಅಂಗದ ಮೇಲಕ್ಕೆ ಬಂದೆ ಎಂಬ ಸಂತೋಷಕ್ಕೆ
ಉಬ್ಬಿ ಕೊಬ್ಬಿ ಅಹಂಕರಿಸಿ ಹಾಡಿದೆನಲ್ಲದೆ
ನುಡಿದಂತೆ ನಡೆಯಲಿಲ್ಲ, ನಡೆದಂತೆ ನುಡಿಯಲಿಲ್ಲ!

ಇದು ಕಾರಣ
ಎನ್ನ ಮನದ ಕಾಳಿಕೆಯ ಕರುಣದಿಂದ ಕಳೆದು,
ಅವಸ್ಥಾತ್ರಯಂಗಳಲ್ಲಿ ನಿನ್ನನಪ್ಪಿ ಅಗಲದಿಪ್ಪಂತೆ
ಎನ್ನನು ಪರಮಕಾಷ್ಠಿಯ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

ಅದ್ಭಿರ್ಗಾತ್ರಾಣಿ ಶುದ್ಧ್ಯಂತಿ ಮನಃ ಸತ್ಯೇನ ಶುದ್ಧ್ಯತಿ ।
ವಿದ್ಯಾತಪೋಭ್ಯಾಂ ಭೂತಾತ್ಮ ಬುದ್ಧಿರ್ಜ್ಞಾನೇನ ಶುದ್ಧ್ಯತಿ ॥

ಮನುಸ್ಮೃತಿಯ 5ನೇ ಅಧ್ಯಾಯದ 109ನೇ ಶ್ಲೋಕವು "ಕೈಕಾಲು ಮೊದಲಾದ ಅವಯವಗಳು ನೀರಿನಿಂದ ಸ್ವಚ್ಛವಾಗುತ್ತವೆ. ಮನಸ್ಸು ಸತ್ಯವಚನದಿಂದ ಶುದ್ಧವಾಗುತ್ತದೆ. ವಿದ್ಯೆ ಮತ್ತು ತಪಸ್ಸುಗಳಿಂದ ಜೀವಾತ್ಮನು ಶುದ್ಧನಾಗುತ್ತಾನೆ. ಸರಿಯಾದ ಜ್ಞಾನದಿಂದ ಬುದ್ಧಿಯು ಶುದ್ಧವಾಗುತ್ತದೆ" ಎಂದು ಶುದ್ಧಿಯ ವಿವಿಧ ಹಂತಗಳನ್ನು ವಿವರಿಸುತ್ತದೆ.

ದೇಹವನ್ನು ನೀರಿನಿಂದ ಶುದ್ಧ ಮಾಡಿಕೊಳ್ಳಬಹುದು. ಈ ನೀರು ಯಾವ ಬಗೆಯದ್ದಾದರೂ ಆಗಬಹುದು. ಅಂದರೆ ಆ ನೀರು ಪವಿತ್ರವಾಗಿರಬಹುದು, ತೀರ್ಥವಾಗಿರಬಹುದು, ಶುದ್ಧವಾಗಿರಬಹುದು. ನೀರಿನ ಯೋಗ್ಯತೆ ಆಯಾ ಸ್ಥಳ, ಕ್ಷೇತ್ರಗಳ ಮೇಲೆ ನಿರ್ಧಾರವಾಗುತ್ತದೆ. ನೀರು ಒಂದೇ ಆದರೂ ಅದಕ್ಕೆ ಹಲವಾರು ಹೆಸರುಗಳಿರುತ್ತವೆ. ಆದರೆ ಯಾವ ನೀರು ಪವಿತ್ರ, ಶುದ್ಧ? ತೀರ್ಥದಿಂದ ಸ್ಥೂಲ ದೇಹವನ್ನು, ಭೌತಿಕ ಶರೀರ ಸ್ವಚ್ಛವಾಗಬಹುದೇ ಹೊರತು ಸೂಕ್ಷ್ಮ ಶರೀರವಲ್ಲ; ಸೂಕ್ಷ್ಮ ಶರೀರವನ್ನು ಯಾವ ನೀರೂ ಸ್ವಚ್ಛಗೊಳಿಸಲಾರದು, ಪವಿತ್ರಗೊಳಿಸಲಾರದು. ಏಕೆಂದರೆ ಭೌತಿಕ ನೀರಿಗೆ ಅಭೌತಿಕ ಮನಸ್ಸನ್ನು ಶುದ್ಧಗೊಳಿಸುವ ಶಕ್ತಿ ಇರುವುದಿಲ್ಲ.

ಸೂಕ್ಷ್ಮ ಶರೀರವಾದ ಮನಸ್ಸನ್ನು ಹಿತವೂ, ಪ್ರಿಯವೂ ಆದ ಮಾತಿನಿಂದ ಪವಿತ್ರಗೊಳಿಸಬಹುದು. ಆದುದರಿಂದಲೇ ಮಹಾಭಾರತದಲ್ಲಿ "ಸಾವಿರ ಅಶ್ವಮೇಧ ಯಾಗಕ್ಕಿಂತಲೂ ಸತ್ಯವಾದ ಒಂದು ಮಾತು ಶ್ರೇಷ್ಠ" ಎಂದು ಹೇಳಲಾಗಿದೆ. ಈ ಕುರಿತಂತೆ ಅಲ್ಲಮಪ್ರಭುಗಳು ಹೀಗೆ ಹೇಳಿದ್ದಾರೆ –

ಉದಕ ಮಜ್ಜನವಲ್ಲ, ಪತ್ರೆ ಪೂಜೆಯಲ್ಲ
ಧೂಪ ಪರಿಮಳವಲ್ಲ, ಕಂಚು ಬೆಳಗಲ್ಲ
ಸಯಧಾನ ಅರ್ಪಿತವಲ್ಲ!
ಅದೆಂತೆಂದಡೆ:
ಸಜ್ಜನವೆ ಮಜ್ಜನ, ಸತ್ಯಸದಾಚಾರವೆ ಪತ್ರ ಪುಷ್ಪ
ಅಷ್ಟಮದಂಗಳ ಸುಟ್ಟುದೆ ಧೂಪ
ನಯನವೆ ಸ್ವಯಂಜ್ಯೋತಿ
ಪರಿಣಾಮವೆ ಅರ್ಪಿತ ಕಾಣಾ ಗುಹೇಶ್ವರಾ !

ದೇಹದ ಹೊರಗಿನ ಕೊಳೆಯನ್ನು ಎಷ್ಟೇ ಸ್ವಚ್ಛಗೊಳಿಸಿದರೂ ಅದರಿಂದ ಪ್ರಯೋಜನವಿಲ್ಲ. ವಚನಕಾರರು ಬಹಿರಂಗದ ಶುದ್ಧತೆಗಷ್ಟೇ ಪ್ರಾಮುಖ್ಯತೆ ನೀಡದೆ, ಅಂತರಂಗ ಮತ್ತು ಬಹಿರಂಗ ಶುದ್ಧತೆಯ ಬಗ್ಗೆ ಪದೇಪದೇ ಪ್ರಸ್ತಾಪ ಮಾಡುವುದು ಈ ಕಾರಣದಿಂದಲೇ. ಮನಸ್ಸಿನೊಳಗಿನ ಅಷ್ಟಮದಗಳು, ಅರಿಷಡ್ವರ್ಗಗಳು ಹೋದ ಬಳಿಕ ನಿರ್ಮಲವೂ, ಪಾರದರ್ಶಕವೂ ಆಗುವ ಮನಸ್ಸಿನಿಂದ ಮಾತ್ರ ಭಗವಂತನನ್ನು ಕಾಣಲು ಸಾಧ್ಯ. ಮನಸ್ಸು ಸತ್ಯದಿಂದ ಶುದ್ಧವಾದಾಗ ಪರಮಾತ್ಮನನ್ನು ಅರಿಯಲು ಜೀವಾತ್ಮರಿಗೆ ಸಹಾಯವಾಗುತ್ತದೆ. ಈ ಮಾರ್ಗದಲ್ಲಿ ಪರಮಾತ್ಮನ ಕಡೆ ಸಾಗಬಹುದಾದರೂ ಅದನ್ನು ಅನುಸರಿಸಲು ವಿಶೇಷ ಸಾಧನೆಯ ಅಗತ್ಯವಿರುತ್ತದೆ.

ಲೌಕಿಕ ವಿದ್ಯೆಯಲ್ಲಿ ಪರ, ಅಪರ ಎಂದು ಎರಡು ವಿಧ. ಇದು ಭೌತಿಕ–ಅಭೌತಿಕ ಲೋಕಗಳ ಜ್ಞಾನವನ್ನು ಕುರಿತಾಗಿರುತ್ತದೆ. ಮನುಷ್ಯನಿಗೆ ಈ ಎರಡೂ ಜ್ಞಾನಗಳು ಬೇಕೇಬೇಕು. ಕೇವಲ ಒಂದೇ ಒಂದು ಜ್ಞಾನವು ಪರಿಪೂರ್ಣವಾಗುವುದಿಲ್ಲ; ವಿದ್ಯೆಯನ್ನು ಕೇವಲ ಅರಿವಿನ ಒಂದು ತಂತ್ರವಾಗಿ ಬಳಸಬಾರದು. ತಂತ್ರವೆಂಬುದು ಯಾವಾಗಲೂ ಯಾಂತ್ರಿಕವೆ. ಕೆಲವರು ದೇವರ ಪೂಜೆಯನ್ನು ಯಾಂತ್ರಿಕವಾಗಿ ಮಾಡುತ್ತಾರೆ. ಅದರ ಅಂತರಾರ್ಥವನ್ನು ಅರಿಯುವುದು ಅಗತ್ಯ. ಅಂಥ ಪೂಜೆಯಲ್ಲಿ ಕೇವಲ ಮಂತ್ರ, ಆಡಂಬರ ಇತ್ಯಾದಿಗಳು ವಿಜೃಂಭಿಸುತ್ತವೆ. ನಿಜವಾದ ಅರ್ಥದಲ್ಲಿ ವಿದ್ಯೆ ಎಂಬುದು ಒಂದು ತಪಸ್ಸಾಗಬೇಕು. ಅದು ಅಂತರಾತ್ಮನನ್ನು ಅರಿಯಲು ನೆರವಾಗುವುದು ಮಾತ್ರವಲ್ಲ, ಅದರಲ್ಲಿಯೇ ತಲ್ಲೀನತೆಯನ್ನು ಹೊಂದಬೇಕು. ಆಗ ಮಾತ್ರ ಪರಮಾತ್ಮ ಗೋಚರವಾಗುತ್ತಾನೆ. ಅಂಥ ಸ್ಪಷ್ಟವಾದ ಜ್ಞಾನ ದೊರೆತಾಗ ಬುದ್ಧಿಯು ಪರಿಶುದ್ಧವಾಗುತ್ತದೆ. 'ಸ್ಪಷ್ಟವಾದ' ಎನ್ನುವ ಮಾತನ್ನು ಒಮ್ಮೆ ಗಮನಿಸಬೇಕು. ಜ್ಞಾನದ ಹಾಗೆ ತೋರುವ ಅಜ್ಞಾನವನ್ನು ಅರಿಯುವುದು ಅಷ್ಟು ಸುಲಭವಲ್ಲ. ಚೆನ್ನಾಗಿ ಕಾಣುವುದೆಲ್ಲವೂ ಸರಿಯಾಗಿಯೇ ಇರಬೇಕೆಂದಿಲ್ಲ. ಇವುಗಳ ನಡುವಣ ಪ್ರಮುಖ ವ್ಯತ್ಯಾಸವನ್ನು ಅರಿಯುವುದು ಅತ್ಯಂತ ಅಗತ್ಯ. ಇದನ್ನೇ ಅಲ್ಲಮಪ್ರಭುಗಳು "ಕತ್ತಲೆಯ ಒಳಗೆ ಹೊಳೆಯುವ ಬೆಳಕಿನಂತೆ" ಎಂದಿದ್ದಾರೆ.

"ನಿನ್ನ ಒಡವೆಯೆಂಬುದು ಜ್ಞಾನರತ್ನ" ಎಂದು ಅಲ್ಲಮಪ್ರಭುಗಳು ವಚನದಲ್ಲಿ ತಿಳಿಸಿದಂತೆ 'ಜ್ಞಾನ' ಎನ್ನುವುದು ಪ್ರಖರ ಶಲಾಕೆಯ ಬೆಳಕಿನಂತೆ. ಅದು ಎಲ್ಲವನ್ನೂ ಕಾಣಿಸುವ ಶಕ್ತಿಯುಳ್ಳದ್ದು. ಅದು ಈ ಭೌತಿಕ ಜೀವನಕ್ಕೆ ಒಂದು ಬಂಧುರ ಸಾಧನವಾಗಿ, ಸಲಕರಣೆಯಾಗಿ ಒದಗಿಬರುತ್ತದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಕೃಷಿ ಮೊದಲು ಸರ್ವಕ್ಕೆ ಕೃಷಿಯಂ
ಪಸರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ ।
ವಸು ತೆರಳುವುದು ವಸುವಿನಿಂ ಸಾ
ಧಿಸುವಡಾವುದಸಾಧ್ಯವದರಿಂ
ಕೃಷಿವಿಹೀನನ ದೇಶವದು ದುರ್ದೇಶ ಕೇಳೆಂದ (ಸಭಾಪರ್ವ, 1–64)

ಕುಮಾರವ್ಯಾಸ ಭಾರತದ ಸಭಾಪರ್ವದಲ್ಲಿ ಬರುವ ಪ್ರಸಂಗ. ರಾಜಸೂಯಯಾಗಕ್ಕೆ ಮೊದಲು ನಾರದರು ಧರ್ಮರಾಜನಿಗೆ ಮಾಡಿದ ಉಪದೇಶ ಈಗಲೂ ಎಷ್ಟು ಸಾಂದರ್ಭಿಕವಾಗಿದೆ ಮತ್ತು ಸಾರ್ವತ್ರಿಕವಾಗಿದೆ ಎಂಬುದು ಬೆರಗು ಮೂಡಿಸುತ್ತದೆ. ಗಾಂಧೀಜಿಯವರು "ಭಾರತ ಹಳ್ಳಿಗಳ ದೇಶ, ಹಾಗೂ ಅಲ್ಲಿ ವಾಸಿಸುವ ರೈತ ದೇಶದ ಬೆನ್ನೆಲುಬು ಎಂದರು. ದೇಹಕ್ಕೆ ಬೆನ್ನುಮೂಳೆಯೇ ಆಧಾರ" ಎಂದಿದ್ದರು. ಆದರೆ ಇಂದಿನ ರಾಜಕಾರಣಿಗಳಿಗೆ, ಆರ್ಥಿಕ ತಜ್ಞರಿಗೆ, ವಿಜ್ಞಾನಿಗಳಿಗೆ, ಬುದ್ಧಿಜೀವಿಗಳಿಗೆ ಬೃಹತ್ ಕೈಗಾರಿಕೆಗಳು, ಮಹಾನಗರಗಳು, ವಿಜ್ಞಾನದ ಹೊಸ ಆವಿಷ್ಕಾರಗಳಿಂದ ಮಾತ್ರ ದೇಶ ಅಭಿವೃದ್ಧಿ ಹೊಂದುತ್ತದೆ ಎಂಬ ಬಲವಾದ ನಂಬಿಕೆ; ಮತ್ತು, ಜನತೆಯನ್ನೂ ಆ ನಿಟ್ಟಿನಲ್ಲಿ ನಂಬಿಸುತ್ತಿದ್ದಾರೆ. ಆದುದರಿಂದಲೇ ಸರ್ಕಾರವು ರೂಪಿಸುವ ಎಲ್ಲ ಬಗೆಯ ಶಿಕ್ಷಣವೂ ಅಭಿವೃದ್ಧಿಯ ಈ ಪರಿಕಲ್ಪನೆಗೆ ಅನುಗುಣವಾಗಿಯೇ ಇದೆ. ಉದಾಹರಣೆಗೆ, ರಾಜಕಾರಣಿಗಳು ವಿಧಾನಸಭೆಯಲ್ಲಿ ಮಾತನಾಡುವಾಗ ಪಕ್ಷಭೇದಗಳನ್ನು ಮರೆತು ಒಂದೇ ದನಿಯಲ್ಲಿ "ರಾಜ್ಯದ ಹೆಮ್ಮೆ ಎಂದರೆ ಬೆಂಗಳೂರು ನಗರ, ಅಲ್ಲಿ IT ಮತ್ತು BTಗಳಿಂದಲೇ ರಾಜ್ಯಕ್ಕೆ ಗೌರವ ಮತ್ತು ಆದಾಯ ಹಾಗೂ ರಾಜ್ಯದ ಶೇ.40 ರಷ್ಟು ಆದಾಯ ಬೆಂಗಳೂರು ನಗರವೊಂದರಿಂದಲೇ ಬರುತ್ತಿದೆ. ಹಾಗಾಗಿ ಬೆಂಗಳೂರು ನಗರದ ಅಭಿವೃದ್ಧಿಯೇ ಸರ್ಕಾರದ ಆದ್ಯತೆಯಾಗಬೇಕು. ಅಷ್ಟೇ ಅಲ್ಲ, ಬೆಂಗಳೂರಿನಂತೆ ಕೆಲವು ಉಳಿದ ನಗರಗಳನ್ನೂ ಮಾರ್ಪಡಿಸಬೇಕು" ಎಂದೆಲ್ಲ ಮಾತನಾಡುತ್ತಾರೆ. ಹೊಸ ಕೈಗಾರಿಕಾ ನೀತಿಯನ್ನು ರೂಪಿಸಲು ಎಲ್ಲರೂ ಆತುರ, ಅವಸರ ತೋರಿಸುತ್ತಾರೆ. ರಾಜಕಾರಣಿಗಳು ನೀಡುವ ಅಂಕಿಅಂಶಗಳು, ಹೇಳುವ ಮಾತುಗಳೆಲ್ಲವೂ ಮೊದಲ ನೋಟಕ್ಕೆ ನಿಜದಂತೆ ತೋರುತ್ತವೆ. ಆದರೆ ತೋರಿಕೆಯ ಮಾತೇ ನಿಜವಲ್ಲವಲ್ಲ! ರಾಜಕಾರಣಿಗಳಿಗೆ ನಮ್ಮನ್ನು

ನಡೆಸುವ ವ್ಯವಸ್ಥೆಯ ಕುರಿತು ಒಂದು ಒಳನೋಟ ಅಥವಾ ಸೂಕ್ಷ್ಮ ನೋಟವಿಲ್ಲದಿದ್ದಾಗ ಆಗುವ ಪರಿಣಾಮವಿದು. ಅವರಾರಿಗೂ ಭವಿಷ್ಯತ್ತಿನ ಕುರಿತ ಕಾಳಜಿ, ಮುನ್ನೋಟವಿಲ್ಲ. ಅವರೆಲ್ಲರೂ ತತ್ಕಾಲೀನ ವರ್ತಮಾನದ ಜಗತ್ತಿನಲ್ಲೇ ಇರಲು ಅಪೇಕ್ಷಿಸುತ್ತಾರೆ. ಈ ಅಪೇಕ್ಷೆಯ ಹಿಂದೆ ಅವರ ಅಧಿಕಾರವ್ಯಾಮೋಹ ಮಾತ್ರ ಕಾಣುತ್ತದೆ.

ನಿಜವಾಗಿ ಹೇಳಬೇಕೆಂದರೆ, ಭೂತಕಾಲದಿಂದ ಕಲಿತ ಪಾಠದಿಂದ ವರ್ತಮಾನದ ತಲ್ಲಣವನ್ನು ಅರಗಿಸಿಕೊಂಡು ಭವಿಷ್ಯದ ಕನಸನ್ನು ಕಟ್ಟುವುದು ರಾಜ್ಯವನ್ನು ಮುನ್ನಡೆಸುವವರಿಗೆ ಇರಬೇಕು. ಅದಕ್ಕಾಗಿಯೇ ಗಿರೀಶ್ ಕಾರ್ನಾಡರು "ಕತ್ತಲೆಯ ದಾರಿಯಲ್ಲಿ ಬೇಕಾದರೂ ನಡೆಯಬಹುದು, ಆದರೆ ಕನಸುಗಳಿಲ್ಲದ ದಾರಿಯಲ್ಲಿ ನಡೆಯಲಾಗುವುದಿಲ್ಲ" ಎಂದದ್ದು. ಅಂಥ ಕನಸು ಕೂಡ ಕೇವಲ ಭ್ರಮೆಯಾಗಿರಬಾರದು, ಅದೊಂದು ದೂರದೃಷ್ಟಿಯಾಗಿರಬೇಕು. ಅದರಲ್ಲಿ ಸಮಷ್ಟಿಯ ಹಿತ ಅಡಗಿರಬೇಕು.

ಈ ಮಾತುಗಳನ್ನು ಹೇಳಲು ಕಾರಣವೇನೆಂದರೆ ಯಾವುದೇ ಪ್ರಭುತ್ವ ಕೃಷಿಯನ್ನು, ಹಳ್ಳಿಗಳನ್ನು, ರೈತರನ್ನು ನಿರ್ಲಕ್ಷಿಸಿದರೆ ಅದು ಮುಂದೆ ದೊಡ್ಡ ಅವಘಡಗಳಿಗೆ ಕಾರಣವಾಗುತ್ತದೆ. ಆಳುವವರ ದಿವ್ಯ ನಿರ್ಲಕ್ಷದಿಂದ ಜನರು ಇಂಥ ದುರ್ದೆಶೆ ಮತ್ತು ದುರ್ಭಿಕ್ಷದ ಜಾಲದಲ್ಲಿ ಸಿಲುಕಿದ್ದಾರೆ. ಹಳ್ಳಿಗಳು ವೃದ್ಧಾಶ್ರಮಗಳಾಗಿವೆ. ಜನರು ತತ್ಕಾಲೀನ ಲಾಭಗಳನ್ನು ಅರಸಿ ನಗರಗಳತ್ತ ಗುಳೇ ಹೊರಟಿದ್ದಾರೆ. ನಮ್ಮ ಶಿಕ್ಷಣವೂ ಅದಕ್ಕೇ ಪ್ರೇರೇಪಿಸುತ್ತಿದೆ ಮತ್ತು ಉತ್ತೇಜನ ನೀಡುತ್ತಿದೆ. ಇದರಿಂದ ಉಂಟಾಗಿರುವ ಸಾಮಾಜಿಕ, ಆರ್ಥಿಕ ಪರಿಣಾಮಗಳ ಬಗ್ಗೆ ಯಾರೂ ಗಂಭೀರವಾಗಿ ಯೋಚಿಸಿದಂತೆ ಕಾಣುತ್ತಿಲ್ಲ. ಯಾವುದೇ ಪ್ರಗತಿಯು ಮಾನವ ಕಲ್ಯಾಣಕ್ಕೆ ಅನುಕೂಲಕರವಾಗಿರಬೇಕು ಎಂಬುದನ್ನು ಎಲ್ಲರೂ ಮರೆತಂತಿದೆ.

ಈಗ ವಿಜ್ಞಾನದಲ್ಲಿ ಆಗಿರುವ ಪ್ರಗತಿಯನ್ನೇ ನೋಡಿ. AI, OIಗಳು ಮುನ್ನೆಲೆಗೆ ಬಂದಿರುವುದರಿಂದ ಮಾನವಸಂಪನ್ಮೂಲದ ಮೇಲೆ ಎಷ್ಟು ಗಾಢವೂ ಪ್ರತಿಕೂಲವೂ ಆದ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ ಎಂಬುದನ್ನು ಊಹಿಸಬಹುದು. IT ಮತ್ತು BT ಕಂಪನಿಗಳು ನಮ್ಮ ಹೆಮ್ಮೆ ಎಂದು ಬೀಗುತ್ತಿರುವ ಜಗತ್ತು ಮಾನವಸಂಪನ್ಮೂಲ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವ ಬಗ್ಗೆ ಯೋಚಿಸುತ್ತಿಲ್ಲ. ಇನ್ನು ಕೇವಲ ಒಂದು ದಶಕದಲ್ಲಿ ಈ ವಿಜ್ಞಾನದ ಪ್ರಗತಿ ಊಹಿಸಲೂ ಆಗದ ರೀತಿಯಲ್ಲಿ ನಮ್ಮನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತದೆ. ಹಾಗೆಂದ ಮಾತ್ರಕ್ಕೆ ಅವುಗಳನ್ನು ನಿಲ್ಲಿಸಿಬಿಡಿ ಅಂತಲ್ಲ. ಆದರೆ ಅದಕ್ಕೆ ಪರ್ಯಾಯವನ್ನು ಸೃಷ್ಟಿಸುವ ಮುಂದಾಲೋಚನೆ ಇರಬೇಕು. ಇಂದು ಅಂತಹ ಪರ್ಯಾಯ ಕೇವಲ ಕೃಷಿಯಲ್ಲಿ ಇದೆ. ಏಕೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನ ಎಷ್ಟೇ ಮುಂದುವರೆದರೂ, ಆಹಾರವನ್ನು ಉತ್ಪಾದಿಸುವ ಭೂಮಿಯ ಸಾಮರ್ಥ್ಯವನ್ನು ಬೇರಾವ ಶಕ್ತಿಯೂ ಸೃಷ್ಟಿಸಲಾರದು. ಪ್ರಕೃತಿಯು ನೀಡುವ ಯಾವುದನ್ನೂ ವಿಜ್ಞಾನ ಸೃಷ್ಟಿಸಲಾರದು.

ಈ ಹಿನ್ನೆಲೆಯಲ್ಲಿ ನಿರುದ್ಯೋಗಿ ಯುವಕರಿಗೆ ಇಂದು ಮರಳಿ ಮಣ್ಣಿಗೆ ಬರುವುದೊಂದೇ ದಾರಿ. ವಿಜ್ಞಾನ ಎಷ್ಟೇ ಮುಂದುವರೆದರೂ ಕೃಷಿಗೆ ಪರ್ಯಾಯವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಕೃಷಿ ಮಾತ್ರವೇ ಜಗತ್ತನ್ನು ಸದಾಕಾಲ ಸಶಕ್ತವಾಗಿರಿಸಬಲ್ಲದು. ಮಾನವನು ಬೇಕಾದರೆ ವಿಜ್ಞಾನವಿಲ್ಲದೆಯೂ ಬದುಕಬಲ್ಲ; ಆದರೆ ಆಹಾರವೇ ಇಲ್ಲದೆ ಜೀವಿಸಲಾರ. ಕೃಷಿ– ಸಂಸ್ಕೃತಿ ಮಾತ್ರ ಮಾನವನಿಂದ, ಮಾನವನಿಗಾಗಿ ಇರುವಂಥ ಜೀವನಪ್ರೀತಿಯ ಸಂಕೇತ. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಎಫ್.ಆರ್. ಲೀವಿಸ್ "ಯಂತ್ರನಾಗರಿಕತೆ" ಎಂಬ ಪ್ರಬಂಧವನ್ನು ಬರೆದ. ಅದರಲ್ಲಿ ಅವನು ಹೇಳುವ ಮಾತು ಇಂದಿಗೂ ಪ್ರಸ್ತುತ ಎಂದು ತೋರುತ್ತದೆ. ನಾಗರಿಕತೆಯಿಂದ ಮಾನವ ಸಮಾಜದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ದಿಗಿಲುಗೊಂಡ ಲೀವಿಸ್ "ಮರಳಿ ಮಣ್ಣಿಗೆ ತೆರಳಿ" ಎನ್ನುತ್ತಾರೆ. ಈಗ ಅದೇ ಮಾತು ಮತ್ತೆ ಮುನ್ನೆಲೆಗೆ ಬರಬೇಕಾಗಿದೆ.

**ಡಾ. ಎಂ.ಎನ್. ನಂದೀಶ್ ಹಂಚೆ**

ಬ್ರಹ್ಮವೆನಲು ಪರಬ್ರಹ್ಮವೆನಲು
ಪರಮನೆನಲು ಪರಮೇಶ್ವರನೆನಲು
ಪರಮಾತ್ಮನೆನಲು ಪರತತ್ವವೆನಲು
ಪರಂಜ್ಯೋತಿಯೆನಲು ಪರವಸ್ತುವೆನಲು ಪರಾಪರವೆನಲು
ಇಂತಿವೆಲ್ಲಾ ನಾಮದಲ್ಲಿಯೂ ಪ್ರಕಾಶಿಸುತ್ತಿಪ್ಪಾತನು ಪರಶಿವನು
ಪರಶಿವನೆಂದರೆ ಪರಮಾತ್ಮ
ಪರಮಾತ್ಮನೆಂದರೆ ಮಹಾಲಿಂಗ
ಆ ಮಹಾಲಿಂಗ ತಾನೆ ಪ್ರಸಾದಲಿಂಗವಾಗಿ ಉದ್ಭವಿಸಿತ್ತು
ಪ್ರಸಾದಲಿಂಗದಲ್ಲಿ ಜಂಗಮಲಿಂಗ ಹುಟ್ಟಿತ್ತು
ಜಂಗಮಲಿಂಗದಲ್ಲಿ ಶಿವಲಿಂಗ ಹುಟ್ಟಿತ್ತು
ಶಿವಲಿಂಗದಲ್ಲಿ ಗುರುಲಿಂಗ ಜನಿಸಿತ್ತು
ಗುರುಲಿಂಗ ಆಚಾರಲಿಂಗ ಉತ್ಪತ್ಯವಾಯಿತ್ತು
ಇಂತೀ ಷಡ್ವಿಧಲಿಂಗವೂ ಒಂದರಿಂದೊಂದಾದವು
ಒಂದನೊಂದ ಕೂಡಿಹವು
ಇಂತೀ ಷಟ್‌ಸ್ಥಲವೂ ಏಕವೆಂದರಿವುದಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ

**ತೋಂಟದ ಸಿದ್ಧಲಿಂಗ ಶಿವಯೋಗಿಗಳು**

ಪ್ರವಚನಸಾರ

# ಭೂಮಾಚಿಂತನ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ವಸ್ತುವಿನ ಗುಣಲಕ್ಷಣಗಳನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವುದು, ಮನಸ್ಸನ್ನು ಆ ಲಕ್ಷಣಾರ್ಥದಲ್ಲಿ ಹರವಿಕೊಳ್ಳುವುದು ಚಿಂತನ. ಅದರಿಂದ ಮನಸ್ಸು ವಿಶಾಲವಾಗುತ್ತದೆ. ಮನಸ್ಸನ್ನು ಆನಂದವು ತುಂಬಿಕೊಳ್ಳುತ್ತದೆ. ಆದ್ದರಿಂದಲೇ ಸಂತರು, ಶರಣರು ಈ ಚಿಂತನೆಗೆ ಬಹಳಷ್ಟು ಮಹತ್ವ ಕೊಟ್ಟರು. ಭಗವಂತನನ್ನು ಹಗಲು ರಾತ್ರಿ ಶರಣರು ತಮ್ಮ ಅಂತರಂಗದಲ್ಲಿ ಬಹಿರಂಗದಲ್ಲಿ ಭಾವಿಸಿದ್ದರು. ಕಣ್ಣು ಬಿಟ್ಟು ನೋಡಿದಲ್ಲೆಲ್ಲಾ ಭಗವಂತನ ಅಸ್ತಿತ್ವವನ್ನು ಹೊಂದಿಸಿದರು. ಹೊರಗೆ ಜಗತ್ತಿನ ವೀಕ್ಷಣ: ಅಂತರಂಗದಲ್ಲಿ ಅನುಭವ. ಕಣ್ಣು ಯಾವುದನ್ನು ನೋಡಿ ಅರಳುತ್ತದೆಯೋ ಮನಸ್ಸು ಅದನ್ನು ತುಂಬಿಕೊಂಡು ಸುಖಿಸುತ್ತದೆ. ಹಾಗೆ ತುಂಬಿಕೊಂಡು ಸುಖಿಸುವುದೇ ಅನುಭಾವ!

ಮರುಳುಶಂಕರದೇವರನ್ನೇ ನೋಡಿ. ದೂರದ ದೇಶದಿಂದ ಬಂದವರು. ಅಲ್ಲಿಂದ ಬಂದು ಕಲ್ಯಾಣದೊಳಗೆ ನೆಲೆಸಿದರು. ಅನೇಕ ವರ್ಷಗಳ ಕಾಲ ಶರಣರ ಮಧ್ಯದಲ್ಲಿಯೇ ಓಡಾಡಿದರೂ ಯಾರಿಗೂ ಗೊತ್ತಾಗದಂತಿದ್ದರು. ಕಳ್ಳನಲ್ಲೂ ದೇವನನ್ನು ಗುರುತಿಸುವ ಬಸವಣ್ಣನಿಗೂ ಗೊತ್ತಾಗದಂತೆ ಇದ್ದರು! ಅಷ್ಟು ಆತ್ಮಾರಾಮರು! ಸ್ವಲೀಲಾನಂದಿಗಳು! ಮಹಾಪ್ರಸಾದಿಗಳು! ಅವರು ಕೇಳಿದುದೆಲ್ಲ ಪ್ರಸಾದ, ಲಿಂಗಪ್ರಸಾದ. ನೋಡಿದ್ದೆಲ್ಲ ಶಿವಲಿಂಗಪ್ರಸಾದ. ರುಚಿಸಿದುದೆಲ್ಲಾ ಗುರುಲಿಂಗಪ್ರಸಾದ. ಸುಗಂಧಿಸಿದುದೆಲ್ಲ ಆಚಾರಲಿಂಗಪ್ರಸಾದ.

ಗುರುಗಳ ಹತ್ತಿರ ಹೋಗುತ್ತೇವೆ. ಹಣ್ಣು ಕೊಡುತ್ತೇವೆ. ಅದನ್ನು ಅವರು ಸ್ಪರ್ಶಿಸಿ ಕೊಡುತ್ತಾರೆ. ಆಗ ಅದು ನಮಗೆ ಪ್ರಸಾದ. ಮೊದಲಿನಂತೆ ಕೇವಲ ಹಣ್ಣಲ್ಲ. ಅದರ ಬಗೆಗಿರುವ ನನ್ನದು ಎನ್ನುವ ಭಾವನೆ ಇಲ್ಲ ಈಗ. ಅದು ಗುರುವಿನದು, ದೇವನದು ಎಂಬ ಭಾವ. ಅದು ಸ್ವೀಕಾರಾರ್ಹ. ಭಾವ ಬದಲಾಗಿದೆ; ದೃಷ್ಟಿ ಬದಲಾಗಿದೆ. ಈಗ ಅದು ಕೇವಲ ವಸ್ತುವಲ್ಲ.

ಮರುಳುಶಂಕರದೇವರು ಮಹಾಪ್ರಸಾದಿ! ಎಲ್ಲವನ್ನೂ ದೇವನದೆಂಬ ನಿರ್ಮಲ ಭಾವದೃಷ್ಟಿಯಿಂದ ನೋಡಿದರು! ಅವರ ಇಂದ್ರಿಯ ಪವಿತ್ರ, ಮನಸ್ಸು ಪವಿತ್ರ, ಸಮಗ್ರ ಜೀವನವೇ ಪವಿತ್ರ.

ಜನ ಊಟ ಮಾಡಿ ಎಲೆ ಬಿಟ್ಟು ಹೋಗುತ್ತಾರೆ. ಎಲೆ ತೆಗೆದುಹಾಕುವ ಕೆಲಸ ಮರುಳುಶಂಕರದೇವರದು. ಪ್ರಸಾದನಿಲಯದಲ್ಲಿ ಶೇಷವನ್ನು ಸೇವಿಸಿ ದಿವ್ಯಪ್ರಸಾದಿ ಯಾಗಿದ್ದರು. ಅಲ್ಲಮಪ್ರಭುವಿನಂತಹ ಜಂಗಮಸಾಮ್ರಾಟ, ವಿಮಲಜ್ಞಾನಿ, ವೈರಾಗ್ಯಚಕ್ರವರ್ತಿ ವಂದಿಸಿದ ಮರುಳುಶಂಕರದೇವರಿಗೆ! ಅವರದು ಮಲಗಿದಾಗ, ಎದ್ದಾಗ, ನಡೆವಾಗ, ನುಡಿವಾಗ ಸದೈವ ದೇವ ಭಾವ! ನಮಗೆ ಸದಾ ಪ್ರಪಂಚಭಾವವಿರುವಂತೆ.

ಅಂತಹ ಬದುಕಿಗಾಗಿ ಭಗವತ್ ಚಿಂತನ. ಯಾವ ವಸ್ತು ಎಲ್ಲಾ ಕಡೆ ಇದೆಯೊ ಅಂತಹ ವಸ್ತುವನ್ನು ಚಿಂತಿಸುವುದು. ಅಲ್ಪಸ್ಥಲದಲ್ಲಿರುವ ವಸ್ತುವನ್ನು ಚಿಂತಿಸುವುದರಿಂದ ತೃಷ್ಣೆ ತಲೆದೋರುತ್ತದೆ. ಮನಸ್ಸು ಅಸಮಾಧಾನಗೊಳ್ಳುತ್ತದೆ. "ನಾಲ್ಪೇ ಸುಖಮಸ್ತಿ ಯೋ ವೈ ಭೂಮಾ ತತ್ ಸುಖಂ." ಅಲ್ಪದರಲ್ಲಿ ಸುಖವಿಲ್ಲ, ಭೂಮದಲ್ಲಿ ಸುಖ. ಹೀಗೆ ಸನತ್ಕುಮಾರ ನಾರದನಿಗೆ ಬೋಧಿಸಿದ.

ನಾರದ ಸುಖವನ್ನು ಬಯಸಿದ್ದ. ಸಮಾಧಾನವನ್ನು ಬಯಸಿದ್ದ. ಜಗತ್ತಿನ ಏನೆಲ್ಲವನ್ನು ಆತ ಕಂಡವ. ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ತಿರುಗಾಡಿದ. ಯಾವುದಕ್ಕೆ ಏನು ಕೊರತೆ ಇಲ್ಲದಂತಹ ಅನುಭವ. ಇಂತಹ ನಾರದನಿಗೆ ಸಮಾಧಾನ ಪಡೆಯಬೇಕಿತ್ತು. ಅದು ಕೈಲಾಸದಲ್ಲಿ ಸಿಕ್ಕಿರಲಿಲ್ಲ. ಭೂಲೋಕದಲ್ಲಿ, ಅಧೋಲೋಕದಲ್ಲಿ ಸಿಕ್ಕಿರಲಿಲ್ಲ. ನಾರದನೆಷ್ಟು ತಿರುಗಾಡಿದರೂ ಸಮಾಧಾನ ಎಲ್ಲೂ ಸಿಕ್ಕಿರಲಿಲ್ಲ. ಆಗ ಅವನಿಗೆ ಸನತ್ಕುಮಾರ ಹೇಳುತ್ತಾನೆ, "ನೀನು ಏನೇನು ನೋಡಿದೆಯೋ ಅದು ಅಲ್ಪ, ಬಹಳ ಸಣ್ಣದು. ಯಾವುದು ಸಣ್ಣದೋ ಅದನ್ನು ನಾವು ಸಂಗ್ರಹ ಮಾಡುವುದರಿಂದ ಸುಖ ಆಗುತ್ತದೆ! ಆದರೆ ಸಮಾಧಾನ ಆಗುವುದಿಲ್ಲ!" ಸಮಾಧಾನ ಆಗುವುದು ಬೇರೆ, ಸುಖ ಆಗುವುದು ಬೇರೆ. ತುರಿಕೆಯಾದಾಗ ತುರಿಸಿದರೆ ಉಂಟಾಗುವುದು ಸುಖ. ತುರಿಕೆಯಿಲ್ಲದಾಗ ಆರೋಗ್ಯವಿದೆ, ಸಮಾಧಾನವಿದೆ. ಸುಖದ ಕೆರೆಯುವಿಕೆ ದುಃಖದಲ್ಲಿ ಪರ್ಯಾವಸಾನ. ಸಮಾಧಾನ ಹಾಗಲ್ಲ, ಅದು ಸದಾ ಹಾಗೆಯೇ.

ನಾವು ಸಣ್ಣ ಸಣ್ಣ ವಸ್ತುವನ್ನು ಪಡೆದಾಗ ಒಂದಿಷ್ಟು ಸುಖವಾಗುತ್ತದೆ. ಈಗ ಸುಖವಾದುದು ಕೆಲಕಾಲದ ನಂತರ ದುಃಖವಾಗುತ್ತದೆ. ಯಾವ ಪ್ರಪಂಚ ಸುಖ ಎಂದು ತಿಳಿಯುತ್ತೇವೆಯೋ ಕೆಲವು ವರ್ಷಗಳ ನಂತರ ಅದೇ ಬೇಡವೆನಿಸುತ್ತದೆ. ಯಾವ ಮಡದಿಯ ಮುಖ ರಾಮನಿಗೆ ಮೊದಲು ಬೇಕಾಗಿತ್ತೋ, ನಂತರ ಅದೇ ಮುಖ ರಾಮನಿಗೆ ಬೇಡ ಅನ್ನಿಸಿತು. ಆದ್ದರಿಂದ ಸೀತಾದೇವಿಯನ್ನು ಅರಣ್ಯದಲ್ಲಿ ತ್ಯಜಿಸಿದ!

ಅದು ರಾಮನ ಕಥೆಯಲ್ಲ. ಅದು ನಮ್ಮೆಲ್ಲರ ಕಥೆ! ವಾಲ್ಮೀಕಿ ಸೂಚ್ಯವಾಗಿ ಕಥೆಯನ್ನು ರಚಿಸಿದ್ದಾನೆ. ರಾಮನದಲ್ಲ ಅದು. ನಮಗೂ ಹಾಗೆ ಅನ್ನಿಸುತ್ತದೆ. ಮೊದಮೊದಲು ಬಹಳ ಹಿಡಿಸುತ್ತದೆ ಸಂಸಾರ. ನಂತರ ರಾಮಾಯಣ! ಬಳಿಕ ಸಂಸಾರ ಬೇಡವೆನಿಸುತ್ತದೆ. ಸಮಾಧಾನಕ್ಕಾಗಿ ಮನಸ್ಸು ಹಾತೊರೆಯುತ್ತದೆ. ಆ ಸಮಾಧಾನವು ಭೂಮಾ ಚಿಂತನೆಯಲ್ಲಿದೆ.

'ಭೂಮಾ' ಎಂದರೆ ಅನಂತ. ಯಾವುದರಲ್ಲಿ ಬೇರೆ ಏನನ್ನೂ ಬೇರಾಗಿ ಕೇಳಲಾಗುವುದಿಲ್ಲವೋ, ನೋಡಲಾಗುವುದಿಲ್ಲವೋ, ಚಿಂತಿಸಲಾಗುವುದಿಲ್ಲವೋ ಅದು ಭೂಮಾ. ಹಾಗಲ್ಲದುದು ಅಲ್ಪ. ಈ ಹೂ ಅಲ್ಪ. ಜಗತ್ತಿನ ಎಲ್ಲ ವಸ್ತುಗಳೂ ಅಲ್ಪ! ಭಿನ್ನತೆಗೆ ಅಲ್ಲಿ ಅವಕಾಶವಿದೆ. ಅವು ಒಂದು ಸ್ಥಾನದಲ್ಲಿವೆ; ಮತ್ತೊಂದು ಸ್ಥಾನದಲ್ಲಿ ಇಲ್ಲ; ಒಂದು ಕಾಲದಲ್ಲಿವೆ; ಇನ್ನೊಂದು ಕಾಲದಲ್ಲಿ ಇಲ್ಲ.

ಪರಮಾತ್ಮ ಹೇಗಿದ್ದಾನೆ? ವಸ್ತುವಿನಿಂದ ಪರಿಮಿತ ಅಲ್ಲ, ದೇಶದಿಂದ ಪರಿಮಿತ ಅಲ್ಲ, ಕಾಲದಿಂದ ಪರಿಮಿತ ಅಲ್ಲ. ಭಾವದಿಂದಲೂ ಪರಿಮಿತ ಅಲ್ಲ. ಅವನು ನಿಜವಾದ ಭೂಮಾ. ಸರ್ವವ್ಯಾಪಕ! ನಾವು ಪೂಜಿಸುವ ದೇವರು ಕಾಲ, ದೇಶ ಸೀಮಿತವಾಗಿದ್ದರೆ ಅದು ದೇವರೇ ಅಲ್ಲ! ಪರಮಾತ್ಮ ಅಲ್ಲ. ಈ ದೇಶ ಅವನನ್ನು ಕಟ್ಟಿಹಾಕಬಾರದು. ದೇಗುಲ ಭಗವಂತನನ್ನು ಕಟ್ಟಿಹಾಕಬಾರದು. ಹಾಗೆ ಕಟ್ಟಿಹಾಕಿತು ಎಂದರೆ ಭಗವಂತ ಅಲ್ಪನಾಗಿ ಬಿಡುತ್ತಾನೆ. ಭಾರತೀಯ ದೇವರು ಯೂರೋಪ್‌ನೊಳಗೆ ಹೋಗದು. ಯೂರೋಪ್‌ನ ದೇವರು ಭಾರತೀಯ ಗುಡಿಯೊಳಗೆ ಬರದು. ಬರಲು ಹೆದರುತ್ತದೆ. ಏಕೆ? ಈ ದೇವರೆಲ್ಲ 'ಅಲ್ಪ'! 'ಭೂಮಾ' ದೇವರಿಗೆ ಭಾರತವೇನು? ಯೂರೋಪ್ ಏನು?

ಒಂದು ದೇಶದಲ್ಲಿ ಇದ್ದು ಇನ್ನೊಂದು ದೇಶದಲ್ಲಿ ಇರದಿದ್ದರೆ ಅದು ಪರಿಮಿತ. ನಾರಾಯಣನ ಗುಡಿಯೊಳಗೆ 'ಶಿವ' ಇರುವುದಿಲ್ಲ ಎಂದು ಕೆಲವರು; ಶಿವನ ಗುಡಿಯೊಳಗೆ 'ನಾರಾಯಣ' ಇರುವುದಿಲ್ಲ ಎಂದು ಕೆಲವರು. ನಿಜವಾದ 'ಶಿವ', ನಾರಾಯಣ ಇಬ್ಬರೂ ಒಂದೇ. ಆತ ನಮ್ಮ ಅಲ್ಪತೆಯ ಮೂರ್ಖತನ ಕಂಡು ನಗುತ್ತಾನೆ. ಮನುಷ್ಯ ತನ್ನ ಅಲ್ಪತನವನ್ನು ದೇವರ ಮೇಲೆ ಹೇರುತ್ತಾನೆ. ತಿಳಿದ ಸಂತರು ಹಾಗಲ್ಲ. ಅವರು ಅವನಷ್ಟೇ ಅನಂತಭಾವಿಗಳು.

ಶ್ರೇಷ್ಠ ಸಂತರು, ಮಹಂತರು ಯಾವ ಜಾತಿಗೆ ಸಂಬಂಧಪಟ್ಟವರು? ಯಾವುದಾದರೂ ದೇಶಕ್ಕೆ ಸಂಬಂಧಪಟ್ಟವರೆ? ಯಾವುದಾದರೂ ಭಾಷೆಗೆ ಸಂಬಂಧಪಟ್ಟವರೆ? ಎಮ್ಮ ಶರಣರು ದೇಶ ಭಾಷಿಕರಲ್ಲ. ದೇಶಾಭಿಮಾನಿಗಳಲ್ಲ, ದೇಶಾಂತರ ಮಾಡುವರು. ಇಂತಹ ಶರಣರ ತಂದು ಮನೆಯೊಳಗೆ ಇಟ್ಟು ಕೀಲಿ ಹಾಕಿದ್ದೇವೆ, ಇವರು ನಮ್ಮವರು, ಅವರು ನಿಮ್ಮವರು ಎಂದು. 'ಜಗದಗಲ, ಮುಗಿಲಗಲ' ಎಂದು ಹೇಳಿಕೊಂಡ ಬಸವಣ್ಣನವರನ್ನು ನಮ್ಮ ಸಂಕುಚಿತ ಚೌಕಟ್ಟಿನಲ್ಲಿ ಬಂಧಿಸಿದ್ದೇವೆ. ಯಾವುದೇ ಶರಣರು ಸಣ್ಣವರಾಗಿರುವುದು ಹೇಗೆ ಸಾಧ್ಯ? ಅವರು ಎಲ್ಲವನ್ನೂ ಮೀರಿರುತ್ತಾರೆ. ಯಾವುದರಲ್ಲೂ ಸಿಲುಕಿಕೊಂಡಿರುವುದಿಲ್ಲ.

ನಮಗೆ ಬಸವಣ್ಣ, ಶಂಕರ ಯಾಕೆ ಪ್ರಿಯ ಹೇಳಿ? ಯಾಕೆ ಅಂದರೆ ಎಲ್ಲವನ್ನೂ ಮೀರಿದ್ದಾರೆ ಅವರು. ಭೂಮಾವನ್ನರಿತವರು. ಅವರು ಯಾವ ಮಿತಿಯೊಳಗೂ ಸಿಕ್ಕಿಲ್ಲ. ಅಂತಹ ವಸ್ತುವನ್ನು ಅನುಭವಿಸಿದ್ದಾರೆ! ಎಂತಲೇ ಅಂಥವರಿಗೆ ಜಗತ್ತೆಲ್ಲಾ ತಲೆಬಾಗುತ್ತದೆ.

ಸಾಗರವನ್ನು ಕಂಡ ಬಳಿಕ, ಸಣ್ಣ ಪುಟ್ಟ ಕೊಳಗಳ ಬಗೆಗೆ ಅಭಿಮಾನ ಇರುವುದಿಲ್ಲ. ಬಳಸುವುದಿಲ್ಲವೆಂದಲ್ಲ, ಬಳಸುತ್ತಾನೆ. ಆದರೆ ಅಭಿಮಾನ ಉಳಿಯುವುದಿಲ್ಲ. ಕೊಳದ ನೀರನ್ನು ಬಳಸಿದರೂ ಅಭಿಮಾನವಿಲ್ಲ. ಏಕೆಂದರೆ ಸಾಗರದ ದರ್ಶನವಾಗಿರುತ್ತದೆ! ಹಾಗೆ ಭಗವಂತನನ್ನು ಇಷ್ಟ ಲಿಂಗ, ಇಷ್ಟದೇವ ಅಥವಾ ಮತ್ತೆ ಇನ್ನೇನಾಗಿಯಾದರೂ ಪೂಜಿಸಿ! ಅವುಗಳ ಅಭಿಮಾನ ಮಾತ್ರ ಬೇಡ.

ದೇವರು ಹಿಂದಕ್ಕೆ ಇದ್ದ. ಈಗಿಲ್ಲ! ಈತ ಜಾಗ್ರತ ದೇವರು. ಈತ ಅಜಾಗ್ರತ ದೇವರು, ಎನ್ನುತ್ತೇವೆ! ದೇವರು ಸಹಿತ ಜಾಗ್ರತ ಅಜಾಗ್ರತ! ನಮ್ಮದು ತಪ್ಪು ತಿಳುವಳಿಕೆ. ನಮ್ಮದು ಸಮಲ ದೃಷ್ಟಿ! ಏಕೆ ಹೀಗೆ? ನಾವು ಸತ್ಯದ ಚಿಂತನೆ ಮಾಡಿಲ್ಲ. ನಮ್ಮ ಬದುಕಿನಲ್ಲಿ ಕಾಣುವಂಥದು ಅವನಿಗೂ ಅನ್ವಯಿಸುವುದೆಂಬ ಕಲ್ಪನೆ! ನಮಗೆ ಮಿತಿ. ಅವನಿಗೂ ಮಿತಿ ಹಾಕುವ ಯತ್ನ!

ದೇವರ ವಿಷಯದಲ್ಲಿ ಭಿನ್ನವಾದ, ಭಗ್ನವಾದ, ಒಡೆದುಹೋದ, ಹೀಗೆಲ್ಲಾ ಭಾಷೆ ಬಳಸುತ್ತೇವೆ. ದೇವರೆಂದಾದರೂ ನಾಶವಾಗಬಹುದೆ? ಒಡೆವ ವಸ್ತುವಿನೊಳಗಿದ್ದು ಒಡೆದುಹೋಗಬಲ್ಲನೆ? ಹಿಂದಿದ್ದು ಇಂದು ಇಲ್ಲದಾಗಬಹುದೆ? ಎಲ್ಲ ನಮ್ಮ ಅಜ್ಞಾನ!

ದೇವನು ಹೇಗೆ ಕಾಲ ದೇಶ ಮಿತನಲ್ಲವೋ ಹಾಗೆ ವಸ್ತುಮಿತನೂ ಅಲ್ಲ. ಆತ ಈ ವಸ್ತುವಿನಲ್ಲಿದ್ದಾನೆ, ಈ ವಸ್ತುವಿನಲ್ಲಿ ಇಲ್ಲ ಎನ್ನುತ್ತೇವೆ. ಸುಂದರವಾಗಿ ಕೆತ್ತಿದ ಮೂರ್ತಿಯಲ್ಲಿ ದೇವರಿಲ್ಲ ಎಂದು ತಿಳಿದು ಅದರಲ್ಲಿ ಹಲವಾರು ಧಾರ್ಮಿಕ ಕ್ರಿಯೆಗಳಿಂದ ಪ್ರಾಣಪ್ರತಿಷ್ಠಾಪನೆ ಮಾಡುತ್ತೇವೆ. ಕಲ್ಲು ಕೆತ್ತುವ ಮೊದಲೂ ದೇವರು ಇತ್ತು. ಕಲ್ಲನ್ನು ಕೆತ್ತಿ ಸುಂದರ ಮಾಡಿದಾಗಲೂ ದೇವರು ಇತ್ತು. ಈಗ ಗುರುಗಳು ಹಸ್ತ ಇಟ್ಟ ಕೂಡಲೇ ದೇವರು ನಮ್ಮ ಭಾವದಲ್ಲಿ ಕಾಣತೊಡಗಿತಷ್ಟೇ. ಮೊದಲು ನೋಡಿದಾಗ ದೇವರು ಕಂಡಿರಲಿಲ್ಲ. ದೃಷ್ಟಿ ಬದಲಾಗಿತ್ತು! ಆ ವಸ್ತುವನ್ನು ಸುಂದರಗೊಳಿಸಿ ಇಟ್ಟಾಗಲೂ ದೇವರು ಕಂಡಿರಲಿಲ್ಲ. ಸಂತರು, ಮಹಂತರು ಸ್ಪರ್ಶ ಮಾಡಿದ ಕೂಡಲೇ ದೇವರು ಕಾಣಬಂದ ಎಂದು ಭಾವಿಸುತ್ತೇವೆ. ನಿಜವಾಗಿಯೂ ಆ ಕಲ್ಲಿನಲ್ಲಿ ದೇವರಿದ್ದ. ಈ ನಮ್ಮ ಕಣ್ಣಿನೊಳಗೆ ದೇವರಿರಲಿಲ್ಲ ಎನ್ನಿ! ಗುರುವಿನಿಂದ ಶಕ್ತಿಪಾತವಾದುದು ಕಲ್ಲೊಳಗಲ್ಲ, ನಮ್ಮ ಭಾವದೊಳಗೆ.

ಕೆಲವು ವಸ್ತುಗಳಲ್ಲಿ ದೇವರ ಅಂಶ ಹೆಚ್ಚು, ಕೆಲವು ವಸ್ತುಗಳಲ್ಲಿ ದೇವರ ಅಂಶ ಕಡಿಮೆ, ಇಂತಹ ಕಲ್ಪನೆ ಅತಾತ್ವಿಕ. ಎಲ್ಲಾ ವಸ್ತುಗಳಲ್ಲಿ ದೇವನಿದ್ದಾನೆ ಸಮನಾಗಿ. ಯಾವುದೇ ಸಂಖ್ಯೆ ತೆಗೆದುಕೊಳ್ಳಿ. ಪ್ರತಿಯೊಂದು ಸಂಖ್ಯೆಯಲ್ಲಿ 'ಒಂದು' ಇದೆ. + ೧ ಆದಾಗ ಎರಡು ಆಗುತ್ತದೆ. +೧ ಆದಾಗ ೩ ಆಗುತ್ತದೆ. ಯಾವುದೇ ಸಂಖ್ಯೆ ಇರಲಿ. ಅದರಲ್ಲಿ ಒಂದು, ಒಂದು ಕಳೆದರೆ ಉಳಿಯುವುದು ಶೂನ್ಯ. ವಿಶ್ವದ ವಸ್ತುಗಳು ಸಂಖ್ಯೆಯಂತೆ. ಪ್ರತಿ ಸಂಖ್ಯೆಯ ಅಂತರಂಗದಲ್ಲಿ, ಆದ್ಯಂತದಲ್ಲಿ ಶೂನ್ಯವಿರುವಂತೆ ವಿಶ್ವದ ಅಂತರಂಗದಲ್ಲಿ, ಆದ್ಯಂತದಲ್ಲಿ ಪರಬ್ರಹ್ಮ. ಅದು ಭೂಮಾ. ಸಂಖ್ಯೆಯೇ ಅಂದರೆ ಒಂದು ಎನ್ನುವುದೇ 'ಅಲ್ಪ.' ಅದು

ಮೂಲಪ್ರಕೃತಿ. ಸಂಖ್ಯೆಯು ಪರಿಮಿತ. ಶೂನ್ಯ 'ಅಪರಿಮಿತ'. ಹಾಗೆ ಜಗತ್ತು ಹಾಗೂ ಜಗತ್ತಿನ ವಸ್ತು ಪರಿಮಿತ. ದೇವನು ಅಪರಿಚ್ಛಿನ್ನ! ಅಪರಿಮಿತ!

'ಭಾವಪರಿಮಿತಿ' ಕೂಡ ದೇವನಿಗಿಲ್ಲ. ಯಾವುದೇ ಭಾವ ಮನಸ್ಸಿನ ಮಧ್ಯ ಮೂಡಿದರೂ ಆ ಭಾವದ ಅಂತರಂಗದಲ್ಲಿ ಅದೇ ವಸ್ತು ತುಂಬಿಕೊಂಡಿರುತ್ತದೆ. 'ಇಲ್ಲ' ಎನ್ನುವ ಭಾಷೆಯೊಳಗೆ ದೇವರು ಇದ್ದಾನೆ. 'ಇದೆ' ಎನ್ನುವ ಭಾವದೊಳಗೂ ದೇವರು ಇದ್ದಾನೆ. ಇಲ್ಲ ಎನ್ನುವಾಗಲೂ ಅಸ್ತಿತ್ವ ಇದೆ. ಇದೆ ಎನ್ನುವಾಗಲೂ ಅಸ್ತಿತ್ವ ಇದೆ. ಈ ಅಸ್ತಿತ್ವ 'ಇಲ್ಲ'ಕ್ಕೂ ಆಧಾರ, 'ಇದೆ'ಗೂ ಆಧಾರ. ಏಕೆಂದರೆ 'ಇಲ್ಲ' ಎನ್ನುವುದೂ ಒಂದು ಭಾವವೇ. 'ಇದೆ' ಎನ್ನುವುದೂ ಒಂದು ಭಾವವೇ. ಭಾವಕ್ಕೆ ಅಸ್ತಿತ್ವ ಇದೆ. ಆ ಅಸ್ತಿತ್ವವೇ ದೇವರು. ಯಾವುದು ಭಾವದಿಂದ ಮಿತವಾಗುತ್ತದೆ, ಅದು ದೇವರಲ್ಲ. ಪುರುಷ ಭಾವದಿಂದ ದೇವರು ಮಿತನಾದರೆ ಸ್ತ್ರೀ ದೇವರಲ್ಲ. ಸ್ತ್ರೀ ಭಾವದಿಂದ ದೇವರು ಮಿತನಾದರೆ ಪುರುಷನು ದೇವರಲ್ಲ. ನಿಜವಾದ ದೇವರು ಭಾವಮಿತನಲ್ಲ. ಸ್ತ್ರೀಭಾವನೆಗೂ ಆಧಾರ, ಪುರುಷಭಾವನೆಗೂ ಆಧಾರ. ಭಾವಪರಿಚ್ಛಿನ್ನತೆ ಅವನಲ್ಲಿಲ್ಲ.

ಇಂತು ನಾಲ್ಕು ಪರಿಚ್ಛಿನ್ನತೆಗಳನ್ನು ತೆಗೆದೊಗೆದ ಬಳಿಕ ಏನುಳಿದಿರುತ್ತದೆ ಅದು ದೇವರು! ನಾಲ್ಕನ್ನು ಹಾಕಿದಾಗ ಏನು ಕಾಣಿಸುತ್ತದೆ ಅದು ಜಗತ್ತು! ಇದು ಅಲ್ಪ. ಅದು 'ಭೂಮಾ'! ಈ 'ಅಲ್ಪ'ದ ಮಧ್ಯ ಇರುವ 'ಭೂಮಾ'ವನ್ನು ಚಿಂತಿಸಬೇಕು. ಬಂಧುಬಾಂಧವರ ಮಧ್ಯೆ ಬಾಳಬೇಕು. ವಸ್ತುಗಳ ಸಂಚಯದ ಮಧ್ಯೆ ಜೀವನವನ್ನು ಕಟ್ಟಿಕೊಳ್ಳಬೇಕು. ಆದರೆ ಅಂತರಂಗದ ತುಂಬಾ ಕಣ್ಣಿನಲ್ಲೆಲ್ಲಾ ಒಂದು ವಸ್ತು ಸ್ಪಷ್ಟವಾಗಿ ಇರಬೇಕು. ಅದು 'ಭೂಮಾ'! ಹೀಗೆ 'ಭೂಮಾ'ವನ್ನು ದೃಷ್ಟಿಯೊಳಗೆ ಇಟ್ಟುಕೊಳ್ಳುವುದಕ್ಕೆ ಭಗವತ್ ಚಿಂತನ ಎನ್ನಬೇಕು. ಹೀಗೆ ಚಿಂತನ ಮಾಡಿದರೆ ನಾನು ನೀವು ಬೇರೆ ಬೇರೆಯಾಗಿ ಕಾಣದು. ಜಾತಿಭೇದ, ಲಿಂಗಭೇದ ತೋರದು.

ನಾನು ಪುರುಷನೂ ಅಲ್ಲ, ಸ್ತ್ರೀಯೂ ಅಲ್ಲ. ನನ್ನಷ್ಟಕ್ಕೆ ನಾ ನನ್ನೊಳಗೆ ನಾ ನೋಡಿಬಿಟ್ಟರೆ ಅಲ್ಲಿ ಪುರುಷ ಇಲ್ಲ, ಸ್ತ್ರೀ ಇಲ್ಲ! ಯಾವಾಗ ದೇಹದ ಕಲ್ಪನೆ ಬಂತೋ ಪುರುಷಭಾವ ಬಂತು, ಸ್ತ್ರೀಭಾವ ಬಂತು. ಆ ದೇಹದ ಕಲ್ಪನೆ ಬಿಟ್ಟು ಉಳಿದ 'ನಾ' ಅನ್ನುವುದಕ್ಕೆ ಲಿಂಗ ಇಲ್ಲ! ಸ್ತ್ರೀ ಇದ್ದರೂ ಸರಿ, ಪುರುಷ ಇದ್ದರೂ ಸರಿ. ಅದೆಲ್ಲಾ ವ್ಯಾವಹಾರಿಕ. ಪಾರಮಾರ್ಥಿಕವಲ್ಲ.

'ಭೂಮಾ' ಚಿಂತನೆ ಮಾಡಿದರೆ ನಾವು ನಿಶ್ಚಲರೂ ನಿಶ್ಚಿಂತರೂ ಆಗುತ್ತೇವೆ. ಕಂಡದ್ದಕ್ಕೆಲ್ಲಾ ಚಿಂತಿಸುವುದಿಲ್ಲ. ಆಗದುದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ. ಬಾಹ್ಯ ಜಗತ್ತಿನ ದ್ವಂದ್ವಗಳನ್ನು, ಸುಖ-ದುಃಖಗಳನ್ನು ಅನುಭವಿಸುತ್ತೇವೆ. ಆದರೆ ಅದೆಲ್ಲಾ ಮೇಲೆ ಮೇಲೆ. ಒಳಗೆಲ್ಲಾ ಪ್ರಶಾಂತ. ಹೊರಗೆ ಜಗತ್ತು. ಒಳಗೆ ದೇವರು!

ಸೌಂದರ್ಯಕ್ಕೆ ಆಳ ಇಲ್ಲ. ಮೇಲಿನ ಚರ್ಮದ ಹೊದಿಕೆ ತೆಗೆದರೆ ಆ ದೇಹ ಕಂಡು ಮರುಳಾಗುವವರು ಯಾರಿದ್ದಾರೆ? ಹಾಗೆ ಜಗತ್ತು. ಮೇಲೆ ಮೇಲೆ ಮಾತ್ರ. ಅದಕ್ಕೆ ಆಳವಾದ ಅಸ್ತಿತ್ವವಿಲ್ಲ. ನೋಡಲು ಮಾತ್ರ ಇದೆ. ಅದರ ಅಂತರಂಗದಲ್ಲಿ ಘನವಾಗಿರುವುದು 'ದೇವ'! ಅದನ್ನು ನೋಡಿದರೆ ಮರುಳಾಗುವ ಪ್ರಮೇಯವಿಲ್ಲ. ಅದನ್ನು ನೋಡಲು 'ಚಿಂತನ' ಅವಶ್ಯ.

ಯಾರ ಪ್ರಪಂಚ ಎಷ್ಟು ದೊಡ್ಡದಾಗಿ ಕಂಡರೂ ಅದಕ್ಕೆ ಆಳ ಇರುವುದಿಲ್ಲ. ಹೀಗೆ ತಿಳಿದುಕೊಂಡರೆ ಎಷ್ಟು ಆನಂದಪೂರ್ಣವಾಗುತ್ತದೆ! ರಾಜಮಹಾರಾಜರ ಪ್ರಪಂಚ ಭವ್ಯವಾಗಿ ಕಾಣುತ್ತದೆ. ಆದರೆ ಅವರ ಸಮೀಪ ಹೋದರೆ ಅದರ ಆಳ, ಅಲ್ಪತೆ ಗೊತ್ತಾಗುತ್ತದೆ. ಹೊರಗೆ ಹೊಳಪು! ಒಳಗೆಲ್ಲಾ ಚಿಂತೆ! ಎಷ್ಟು ರಾಜರು ಆತ್ಮಹತ್ಯೆ ಮಾಡಿಕೊಂಡಿಲ್ಲ? ಎಷ್ಟು ಸಿರಿವಂತರು ಹುಚ್ಚರಾಗಿಲ್ಲ? ಆದ್ದರಿಂದ ಹೊರವೈಭವ ಕಂಡು ಮರುಳಾಗಬಾರದು ಅಲ್ಲವೆ? ಪ್ರಾಪಂಚಿಕ ವೈಭವವೆಂದರೆ ತಗಣೆಗಳಿಂದ ತುಂಬಿದ 'ರಾಜಗದ್ದಿಗೆ'! ಕುಳಿತವನಿಗೆ ಅದರ ತಾಪ ತಿಳಿಯುತ್ತದೆ, ನೋಡುವವರಿಗೆ ಭವ್ಯವಾಗಿ ತೋರುತ್ತದೆ.

ಇದನ್ನು ಅರಿತರೆ ಜೀವನ ಆಪ್ಯಾಯಮಾನ. ದೂರದ ಗುಡ್ಡ ನೋಡಲು ಸುಂದರ. ನೋಡಿಯೇ ಹರ್ಷಿಸಬೇಕು! ತಾನಿರುವ ಗುಡ್ಡ ತ್ಯಜಿಸಿ ಮೃಗಜಲದ ಶೋಧ ಮಾಡಬೇಕಿಲ್ಲ. 'ಅಲ್ಪ'ವಾದುದೆಲ್ಲ ಅಷ್ಟೇ. ಸುಖ ದುಃಖ ಎರಡೂ ಅದರಲ್ಲಿವೆ. 'ಭೂಮಾ' ಚಿಂತಿಸಿ, ಭಾವಿಸಿ. ಅದು ಸತ್ಯ. ಸಮಾಧಾನವೀಯುತ್ತದೆ.

□

ಹೊರಗನೆ ಹಾರೈಸಿ ಹೊರಗಣ ಸದಾಚಾರ ಕ್ರಿಯೆಗಳ
ಮನಮುಟ್ಟಿ ಮಾಡುತ್ತಿರಲು;
ಇದೆಲ್ಲಿಯ ಹೊರಗಣಸುಖವೆಂದು, ಸುವಿಚಾರ ಕಣ್ದೆರೆದು ನೋಡಲು
ಕನ್ನಡಿಯೊಳಗಣ ರೂಪ ತಾನೆಂದರಿವಂತೆ
ಮೆಲ್ಲಮೆಲ್ಲನೆ ಒಳಗೆ ಅಡಗಿತ್ತಯ್ಯಾ
ಲಿಂಗಸುಖದ ಸುಗ್ಗಿಯಲ್ಲಿ ಎನ್ನ ಪ್ರಾಣ ಮನ ಕರಣಂಗಳು
ಮೇರೆದಪ್ಪಿದ ಸುಖಸಮುದ್ರದೊಳಗೋಲಾಡಿದಂತಾದೆನಯ್ಯಾ
ಮುಳುಗಿದೆನಯ್ಯಾ, ಸ್ವಾನುಭಾವವೆಂಬ ಗುರುವಿನ ಕರುಣದಲ್ಲಿ
ಇಂತಾದ ಬಳಿಕ ಕೂಡಲಚೆನ್ನಸಂಗಯ್ಯನೆ ಪ್ರಾಣವಾಗಿದ್ದನಯ್ಯಾ

**ಚನ್ನಬಸವಣ್ಣ**

# ಕರುಣಾಮಯಿ

**ನಿ.ಪ್ರ.ಸ್ವ. ಶ್ರೀ ಶಿವರುದ್ರ ಸ್ವಾಮಿಗಳು**
ಶ್ರೀ ಬೇಲಿ ಮಠ, ಬೆಂಗಳೂರು

ಪರಮಪೂಜ್ಯ ರಾಜಗುರುತಿಲಕ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ನೆನೆಯುವುದು ಅಂದರೆ ಒಂದು ಚಿರನೂತನ ಅದ್ಭುತ ಅನುಭವ. ಹುಣ್ಣಿಮೆಯ ಚಂದ್ರನಂತೆ ಸದಾ ಹಸನ್ಮುಖಿಗಳು. ಮನ ಮಲ್ಲಿಗೆಯಂತೆ ಸದಾ ಇತರರ ನೋವು-ನಲಿವುಗಳ ಬಗ್ಗೆಯೇ ಗಮನ. ಸಾಮಾನ್ಯರಿಂದ ಮಹಾಪ್ರಭುಗಳವರೆಗೆ ಎಲ್ಲರನ್ನೂ ಸಮಾನವಾಗಿ ಎದೆಗಪ್ಪಿ ಹಿಡಿಯುವ ಮಾತೃವಾತ್ಸಲ್ಯದ ಖನಿ. ನಿಂದಿಸಿದವರಿಗೆ, ವಿನಾಕಾರಣ ವಿರೋಧಿಸಿದವರಿಗೂ ಮಮತೆಯ ಮಹಾಪೂರದಲ್ಲಿ ಮೀಯಿಸುವ ಭಾವಜೀವಿ. ಒಂದು ಗಂಟೆಯಾಗಲೀ-ವರ್ಷವಾಗಲೀ-ಅನಂತಕಾಲವಾಗಲೀ ಅವರ ಸಂಪರ್ಕಕ್ಕೆ ಬಂದವರು ಅವರನ್ನು ಮರೆಯಲು ಸಾಧ್ಯವೇ ಇಲ್ಲ.

ಅಹಂ ಮಮಕಾರಗಳು ಅವರತ್ತ ಸುಳಿಯಲಿಲ್ಲ. ದೈವಶಕ್ತಿ, ತಪೋನಿಷ್ಠೆ, ಆಧ್ಯಾತ್ಮ ಜೀವನದಲ್ಲಿ ಬಾನೆತ್ತರ ತಲುಪಿದರೂ ಅಲ್ಲಿ ನೆಲೆ ನಿಲ್ಲದೆ, ದೀನ-ಅನಾಥರ ಮುರುಕು ಮನೆ-ಮನಗಳನ್ನು ಮೇಲೆತ್ತಲು ಭುವಿಗಿಳಿಯುವ ಕಾರುಣ್ಯಮೂರ್ತಿ. ಸುತ್ತೂರು ಗುರುಪರಂಪರೆಯ ಮಹಾವೃಕ್ಷದಲ್ಲಿ ಮೂಡಿದ ಅಮೃತಫಲ. ಒಂದು ಮಾತಿನಲ್ಲಿ ಹೇಳುವುದಾದರೆ ಅವರಂತಹವರು ಹಿಂದೆ ಇದ್ದದ್ದು ಗೊತ್ತಿಲ್ಲ. ಅವರ ಸಮಕಾಲೀನರಾಗಿ ಅವರೊಬ್ಬರೇ ಅವರಿಗೆ ಸಮ. ವಿಶ್ವದ ಎಲ್ಲಾ ಮಾನವೀಯತೆಯ ಸದ್ಗುಣಗಳನ್ನು ರಾಶಿ ಸುರಿದರೆ ಪೂಜ್ಯರಿಗೆ ಸರಿಸಾಟಿಯಿಲ್ಲ. ಈ ಮಾತು ಹೊಗಳಿಕೆಯಲ್ಲ. ಸಹಜ ಸತ್ಯ. ಅಂತಹವರ ಸಂಪರ್ಕವನ್ನು ಬಾಲ್ಯದಿಂದಲೂ ಪಡೆದ ಭಾಗ್ಯಶಾಲಿಗಳಲ್ಲಿ ನಾನೂ ಒಬ್ಬ. ನಮ್ಮ ಗುರುಗಳು ಅವರ ಹಿಂದಿನ ಗುರುಗಳು ಪರಮಪೂಜ್ಯರಾದ ಮಂತ್ರಮಹರ್ಷಿ ಶಿವರಾತ್ರಿ ಜಗದ್ಗುರುಗಳ ಕಾಲದಿಂದಲೂ ಮೂರು ತಲೆಮಾರುಗಳ ನಿಕಟ ವಿಶ್ವಾಸ ಶ್ರೀ ಬೇಲಿಮಠ ಮಹಾಸಂಸ್ಥಾನಕ್ಕೂ ಶ್ರೀ ಸುತ್ತೂರು ಮಹಾ ಜಗದ್ಗುರು ಪೀಠಕ್ಕೂ ಬೆಳೆದು ಬಂದಿದೆ.

ಹಿರಿಯ ಗುರುಗಳು ನಮ್ಮ ಗುರುಗಳ ಗುರುಗಳಾದ ಲಿಂಗೈಕ್ಯ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು ಅತೀವ ಆತ್ಮೀಯರು. ಹೀಗೆ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ತಮ್ಮ ಬಾಲ್ಯದಿಂದಲೂ, ನಮ್ಮ ಹಿರಿಯ ಗುರುಗಳ ಹಾಗೂ ಗುರುಗಳ ಒಡನಾಟ ಉಳ್ಳವರಾದ್ದರಿಂದ ನಮ್ಮ ಮನದಲ್ಲಿ ಪರಿಪೂರ್ಣರಾಗಿ ಆವರಿಸಿದ್ದಾರೆ. ನಮ್ಮ ಹಿರಿಯ ಗುರುದ್ವಯರಿಗೆ ಪೂಜ್ಯರು ಬರೆದ ಪತ್ರಗಳು ನಮ್ಮ ಶ್ರೀಮಠದ ಸಂಪತ್ತಾಗಿವೆ.

ಮಂತ್ರಮಹರ್ಷಿಗಳಾದ ಹಿರಿಯ ಜಗದ್ಗುರುಗಳು ನಮ್ಮ ಹಿರಿಯ ಗುರುಗಳು ರಚಿಸಿದ ವಿದ್ಯಾರ್ಥಿ ನಿಲಯದ ಧರ್ಮದರ್ಶಿಗಳಾಗಿ ಅನುಗ್ರಹಿಸಿದ್ದಾರೆ. ರಾಜೇಂದ್ರ ಗುರುಗಳ ಬಳಿ ಕುಳಿತರೆ ಕಾಲ ನಿಂತುಹೋಗುತ್ತಿತ್ತು. ಈ ಎಲ್ಲಾ ಹಿರಿಯರ ವಿಶ್ವಾಸದ ರಸಕ್ಷಣಗಳನ್ನು ತಮ್ಮ ನೆನಪಿನ ಗಣಿಯಿಂದ ಮೊಗೆದು ಉಣಬಡಿಸುತ್ತಿದ್ದರು. ಅವರ ಬಳಿ ಹೋಗುವುದೆಂದರೆ ನನಗೆ ಬಹಳ ಉತ್ಸಾಹ. ಅವರ ಜೊತೆ ಕಳೆದ ಪ್ರತಿ ಕ್ಷಣವೂ ನನ್ನ ವಿಕಾಸಕ್ಕೆ ಎರೆದ ಸಂಜೀವಿನಿ. ನನ್ನ ಹತ್ತು ಜನ್ಮಗಳಿಗೆ ಸಾಲುವಷ್ಟು ವಾತ್ಸಲ್ಯವನ್ನು ಎರೆದು ಪೋಷಿಸಿದ್ದಾರೆ.

ಉದಾಹರಣೆಗೆ ಒಂದು ದಿನ–ಕಾರ್ಯಾರ್ಥವಾಗಿ ಜಗದ್ಗುರು ಸನ್ನಿಧಿಗೆ ಮೈಸೂರಿಗೆ ಬಂದೆ. ಒಂದು ಗಂಟೆಯ ಕೆಲಸ. ನಂತರ ವಾಪಾಸಾಗಲು ಮಾತ್ರ ನಿಶ್ಚಯಿಸಿದ್ದೆ; ಕೆಲಸವಾಯಿತು. ಹೋಗಲು ಅಪ್ಪಣೆ ಕೇಳಿದರೆ, 'ಏನಿದೆ ಅಂತಹ ತುರ್ತು?' ಎಂದು ಪ್ರಶ್ನಿಸಿದರು. 'ಇಲ್ಲ ನಾಳೆ ಬೆಳಿಗ್ಗೆ ಒಂದು ಕಾರ್ಯಕ್ರಮವಿದೆ' ಎಂದು ಅರಿಕೆ ಮಾಡಿ ಕೊಂಡೆ. 'ಆಯಿತು ಸಂಜೆ ನೋಡೋಣ' ಎಂದು ತಮ್ಮ ಬಿಡುವಿಲ್ಲದ ಕಾರ್ಯದಲ್ಲಿ ಮಗ್ನರಾದರು. ನಾಲ್ಕು ಗಂಟೆಗೆ ಕೇಳಹೋದರೆ, ಸನ್ನಿಧಿಯವರ ಉತ್ತರ : 'ಬೆಂಗಳೂರಿಗೆ ದೂರವಾಣಿ ಮಾಡಿ ಕಾರ್ಯಕ್ರಮಕ್ಕೆ ಬೇರೆ ವ್ಯವಸ್ಥೆ ಮಾಡಿದ್ದೇನೆ. ನಾನು ಕಳಿಸಿದಾಗ ಹೋಗಬೇಕು. ಆತುರವಿಲ್ಲ' ಎಂದು ಆದೇಶ ನೀಡಿದರು. ಹೇಗೆ ಎದುರು ಹೇಳುವುದು? ಸುಮ್ಮನಾದೆ. ಸ್ವಲ್ಪ ಸಮಯದ ನಂತರ ಮತ್ತೆ ಕರೆದು ವಾತ್ಸಲ್ಯದಿಂದ ನೋಡುತ್ತಾ ಸಂಜೆ ಸುತ್ತೂರಿಗೆ ಹೋಗಿ ಬರೋಣ ಎಂದು ಅಪ್ಪಣೆ ಕೊಡಿಸಿದರು. ರಾತ್ರಿ ಸುತ್ತೂರಿನಲ್ಲಿ ಬೆಳಿಗ್ಗೆ ಪೂಜೆಯ ನಂತರ ಮೈಸೂರಿಗೆ ಬಂದು ಹೊರಡಲು ಅಪ್ಪಣೆ ಕೇಳಿದರೆ, 'ನಮ್ಮ ಕಾಲೇಜುಗಳನ್ನು ಸುತ್ತಿಬನ್ನಿ. ನಂತರ ನೋಡೋಣ' ಎಂದು ಕ್ಯಾತನಹಳ್ಳಿ ಬುದ್ಧಿಯವರೊಂದಿಗೆ ಕಳಿಸಿದರು. ಬೆಳಗಿನಿಂದ ಸಂಜೆಯವರೆಗೆ ಮಹಾವಿದ್ಯಾಪೀಠದ ಕಿರುಪರಿಚಯ ಪಡೆಯುತ್ತಾ, ಸಂಜೆ ಬಂದರೆ 'ನಿಮಗೆ ಬೇಜಾರಾಗಿದೆಯೇ ? ನಾನು ತುಂಬಾ ಬಿಡುವಿಲ್ಲದ ಕೆಲಸಗಳಲ್ಲಿ ತೊಡಗಿಕೊಂಡೆ ನಿಮ್ಮನ್ನು ಗಮನಿಸಲಿಲ್ಲ' – ಎಂದು ಪೇಚಾಡಿಕೊಳ್ಳುತ್ತಾ, 'ಬನ್ನಿ ವಾಕಿಂಗ್ ಹೋಗೋಣ' ಎಂದು ಕಾರಿನಲ್ಲಿ ತಾವೇ ಕರೆದುಕೊಂಡು ಚಾಮುಂಡಿ ಬೆಟ್ಟದ ತಪ್ಪಲಿಗೆ ಕರೆದೊಯ್ದರು. ಈಗಿನ ಮಠ ಇರುವ ನಿವೇಶನ ತೋರುತ್ತಾ ಚಾಮುಂಡಿ ಬೆಟ್ಟದ ಮೇಲೆ ಹೋಗಲು ಚಾಲಕನಿಗೆ ಅಪ್ಪಣೆ ಕೊಡಿಸಿದರು.

ಚಾಮುಂಡೇಶ್ವರಿ ದೇವಾಲಯದ ಹೆಬ್ಬಾಗಿಲಿಗೆ ಜಗದ್ಗುರುಗಳವರು ದಯಮಾಡಿಸಿದ್ದನ್ನು ಕಂಡ ಅರ್ಚಕವೃಂದದವರು, ಅಧಿಕಾರಿಗಳು, ತಬ್ಬಿಬ್ಬಾಗಿ ಸುತ್ತ ನೆರೆದು ಸಡಗರಿಸಿದರು. ಪೂಜ್ಯರ ಅಪ್ಪಣೆಯಂತೆ ನನ್ನನ್ನು ಒಳಗೆ ಕರೆದೊಯ್ದು ತಾಯಿಯ ದರ್ಶನ ಮಾಡಿಸಿದರು. ಅಲ್ಲಿಂದ ಬೆಟ್ಟದ ಮೇಲಿನ ರಾಜೇಂದ್ರವಿಲಾಸ ಅರಮನೆ ತೋರಿಸಿಕೊಂಡು ವಾಪಸ್ ಮಠಕ್ಕೆ ದಯಮಾಡಿಸಿದರು. ಮಾರನೇ ದಿನ ಪೂಜೆ ಮುಗಿದ ನಂತರ ಏಳಿ ಹೋಗೋಣ ಎಂದು ಕರೆದರು. ಎಲ್ಲಿಗೆ ಎಂದು ಕೇಳದೆ ಅವರ ಜೊತೆ ಹೊರಟರೆ,

ಸನ್ನಿಧಿಯವರು ಚಾಮರಾಜೇಂದ್ರ ಮೃಗಾಲಯಕ್ಕೆ ಸ್ವತಃ ಕರೆದೊಯ್ದರು. ಅಲ್ಲಿನ ಡೈರೆಕ್ಟರ್ ಅವರಿಗೆ ಸಂಭ್ರಮಾಶ್ಚರ್ಯಗಳು! ಮಹಾದ್ವಾರ ತೆಗೆದು ಗುರುಗಳನ್ನು ವಾಹನ ಸಮೇತ ಬರಮಾಡಿಕೊಂಡರು. ಇಡೀ ಮೃಗಾಲಯಕ್ಕೆ ವಿದ್ಯುತ್ ಸಂಚಾರ. ಎಲ್ಲಾ ಸಿಬ್ಬಂದಿಗಳೂ ಅಲ್ಲಿ ಸೇರಿದರು. ಪೂಜ್ಯರೊಂದಿಗೆ ವಿಐಪಿಯಂತೆ ನಾನೂ ಮೃಗಾಲಯ ನೋಡಿದೆ. ನಂತರ ವಾಪಸ್ ಬಂದು ಮಧ್ಯಾಹ್ನ ಹೋಗಲು ಅಪ್ಪಣೆ ಕೇಳಿದರೆ, 'ಹೋಗಲೇಬೇಕೆ?' ಎಂದು ಕೇಳಿದರು. ಅವರ ಕಣ್ಣಲ್ಲಿ ನೀರು. ನಾನು ತಲೆ ತಗ್ಗಿಸಿ ನಿಂತೆ. ಏನೋ ಈ ಒತ್ತಡಗಳ ನಡುವೆ ನಿಮ್ಮೊಂದಿಗೆ ಕಾಲ ಕಳೆಯುವ ಇಚ್ಛೆ. 'ಈ ದಿನ ಇದ್ದುಬಿಡಿ. ನಾಳೆ ನಾನೂ ಬೆಂಗಳೂರಿಗೆ ಬರಬೇಕಿದೆ. ಜೊತೆಗೆ ಹೋಗೋಣ' ಎಂದು ಅಪ್ಪಣೆ ಕೊಡಿಸಿದರು.

ಇಂತಹ ಅನೇಕ ದಿನಗಳು ಪೂಜ್ಯರೊಂದಿಗೆ ಕಳೆದು ಅನೇಕ ಘಟನೆಗಳ ಸಾಕ್ಷಿಯಾಗಿ ನನ್ನ ನೆನಪಿನಲ್ಲಿ ಸದಾ ಸ್ಪಂದನೆಗೊಳ್ಳುತ್ತಿದೆ. ಇಹದ ಬದುಕನ್ನು ಸಮಷ್ಟಿ ಹಿತಕ್ಕೆ ಧಾರೆ ಎರೆದು ತಮ್ಮ ಕೃತಿಗಳಲ್ಲಿ ಚಾರಿತ್ರ್ಯದಲ್ಲಿ ಚಿರಂಜೀವಿಯಾಗಿರುವ ರಾಜೇಂದ್ರ ಗುರುಗಳು ಯುಗಾವತಾರಿಗಳು. ಅವರನ್ನು ಕಂಡು-ಕೇಳಿದ ಒಡನಾಡಿದ ನಾವೇ ಧನ್ಯರು.

**ಕೃಪೆ : 'ಘನ–ಮನ' (ಜೆಎಸ್ಎಸ್ ಗ್ರಂಥಮಾಲೆ ಪ್ರಕಟಣೆ)**

ಮರವೆಯ ತಮವ ಕಳೆಯಯ್ಯ
ಅರುಹಿನ ಜ್ಯೋತಿಯ ಬೆಳಗಯ್ಯ
ಅರುಹಿನ ಜ್ಯೋತಿಯ ಬೆಳಗಿ
ನಿಮ್ಮ ಕುರುಹ ಕಂಡು ಕೂಡುವ
ತುರ್ಯಾವಸ್ಥೆಯ ಸುಖವನೆ ಕೊಡು ಕಂಡ ಮಹಾಲಿಂಗ ತಂದೆ
ಕೊಡದಿರ್ದಡೆ ನಿನಗೆ ಪ್ರಮಥರಾಣೆ, ಬಸವಣ್ಣನಾಣೆ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ

**ತೋಂಟದ ಸಿದ್ಧಲಿಂಗ ಶಿವಯೋಗಿಗಳು**

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

**ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು**

(ಮುಂದುವರಿದಿದೆ)

ಕಂ॥ ಪಳುಕುಗೊಡದೊಳಪೊರಗೆ ಪ ।
ಜ್ಜಳಿಪಂತಜ್ಯೋತಿಯೆಂತಿರೊಳಪೊರಗೆ ಸಮು ॥
ಜ್ವಲಿಪಂತಶ್ಚಿಜ್ಯೋತಿಯ ।
ಬೆಳಗೆನೊಳೊಡೆವೆರದು ಬೆರಸಿ ಬೆಜ್ಜವೊಲಿರ್ದಂ ॥ ೧೦೨ ॥

**ಟೀಕ ॥** ಪಳುಕುಗೊಡದೆ – ಸ್ಫಟಿಕದ ಕಲಶದಲ್ಲಿ, ಒಳಪೊರಗೆ – ಒಳಗು ಹೊರಗು, ಪಜ್ಜಳಿಪ – ಏಕರೂಪವಾಗಿ ಬೆಳಗುತ್ತಿರುವ, ಅಂತಜ್ಯೋತಿಯಂತೆ – ಒಳಗಿನ ದೀವಿಗೆಯ ಹಾಗೆ, ಇರೆ – ಲಕ್ಷ್ಯಾನುಸಂಧಾನದಿಂದಿರಲು, ಭ್ರಮರಕೀಟನ್ಯಾಯದಿಂದ – ಭಾವನಾಸಿದ್ಧಿಯಾಗಿ, ಒಳಪೊರಗೆ – ಅಂತರ್ಬಹಿರಾವರಣಗಳಲ್ಲಿ, ಸಮುಜ್ವಳಿದ – ಸ್ವಯಂಪ್ರಕಾಶವಾಗಿರುವ, ಅಂತಶ್ಚಿತ್‌ಜ್ಯೋತಿಯ – ಅಂತರಾತ್ಮಪ್ರಕಾಶದ, ಬೆಳಗಿನೊಳು – ಪ್ರಭೆಯಲ್ಲಿ, ಒಡೆವೆರದು – ಸೇರಿ, ಬೆರಸಿ – ಬೆರತು, ಬೆಜ್ಜವೋಲ್ – ಯರಕಗೊಂಡಂತೆ, ಇರ್ದಂ – ಇದ್ದನು.

**ತಾ ॥** ಸ್ಫಟಿಕದ ಕೊಡದೊಳಗೆ ದೀವಿಗೆಯಿಟ್ಟರೆ ಅದು ಹೊರವೊಳಗೆ ಬೆಳಗುವಂತೆ, ಜ್ಞಾನ ತಪೋಯೋಗಗಳಿಂದ ನಿರ್ಮಲವಾದ ಅಂತಃಕರಣದಲ್ಲಿ ಪ್ರಕಾಶಿಸುವ ಅಂತರಾತ್ಮಚೈತನ್ಯದೊಳು ಸೇರಿ ಸಮರಸವಾಗಿ ಬಂಗಾರವು, ಬಂಗಾರದೊಡನೆ ಬೆರಸಿದರೆ ಎರಕಗೊಂಡು ಏಕವಾದಂತೆ ಶಿವಾತ್ಮೈಕ್ಯವಾಗಿ ಇದನ್ನು ನಿರೂಢ ಸಮಾಧಿಯೊಳಿದ್ದನೆಂದು ಭಾವವು. ಉಪಮಾಲಂಕಾರವು.

ಕಂ ॥ ಸ್ವಸ್ಥ ತುರೀಯಾತೀತಾ ।
ವಸ್ಥೆಯನೊಳಕೊಂಡು ತೊಳಪ ಶೃಂಗಾಟಕ ಪ ॥
ದ್ಮಸ್ಥಿತನೊಳನಘನೋಳ್ನಿರ ।
ವಸ್ಥನೊಳೊಡವೆರದು ಬಾಹ್ಯಮತಿಯರರಿತಿರ್ದಂ ॥ ೧೦೩ ॥

**ಟೀಕ ॥** ಸ್ವಸ್ಥ – ತಾನಾಗಿರುವ, ತುರೀಯಾತೀತ – ತ್ರಿಪುಟಗೆ ಸಾಕ್ಷಿವೃತ್ತಿ ಯಾಗಿರುವದನ್ನು ಮೀರಿದ, ಅವಸ್ಥೆಯಂ – ಕೈವಲ್ಯದೆಶೆಯನ್ನು, ಒಳಕೊಂಡು – ಪಡೆದು, ತೊಳಪ – ಹೊಳೆಯುವ, ಶೃಂಗಾಟಕ – ಭ್ರೂಮಧ್ಯಸ್ಥಾನದ, ಪದ್ಮ – ಕಮಲದಲ್ಲಿ, ಸ್ಥಿತನೊಳು – ಇರುವನಾದ, ಅನಘನೋಳ್ – ನಿರ್ದುಷ್ಟನಾದ, ನಿರಘನೋಳ್ –

ಕಾಲೋಪಾಧಿಯಿಲ್ಲದ, ಶಿವನಲ್ಲಿ ಒಡವೆರದು – ಸಂಗಾತನಾದ, ಬಾಹ್ಯಮತಿಯ – ಹೊರಗಣ ಬುದ್ಧಿಯನ್ನು, ಅರಿತಿರ್ದಂ – ಅರಿತುಬಿಟ್ಟು ಇರ್ದಂ.

ತಾ ॥ ಸಮಾಧಿಯೊಳು ವೃತ್ತಿಶೂನ್ಯನಾಗಿ ಸನ್ಮಾತ್ರದೊಳು ಸೇರಿರ್ದನು ॥

ಕಂ॥ ಮರವೊಂದದೆಚ್ಚರದ ಕ ।
ಣ್ದೆರೆಯದ ನಿದ್ರಿಸದ ಬೆರೆಯದಗಲದ ಕಣ್ಣಂ ॥
ಪೊರಸೂಸದೊಳಗಿರದ ಸೈ ।
ವೆರಗಿನ ಸಮರಸದ ಭಾವಮೇಂ ರಂಜಿಸಿತೋ ॥ ೧೦೪ ॥

**ಟೀಕ ॥** ಮರವೊಂದದ – ಮರೆತುಹೋಗದ, ಎಚ್ಚರದ – ಜಾಗೃತಿಯುಳ್ಳ, ಕಣ್ದೆರೆಯದ – ಕಣ್ಣನ್ನು ತೆರೆಯದ, ನಿದ್ರಿಸದ – ನಿದ್ದೆಮಾಡದ, ಬೆರಿಯದ – ವಿಷಯದಲ್ಲಿ ಸೇರಿಹೋಗದ, ಅಗಲದ – ಲಕ್ಷ್ಯವನ್ನು ಬಿಡದ, ಕಣ್ಣ ಪೊರಸೂಸದ – ದೃಷ್ಟಿಯನ್ನು ಹೊರಕ್ಕೆ ಬಿಡದ, ಒಳಗೆ ಇರದೆ, ಸೈವೆರಗಿನ – ಸರಿಯಾದ ಆಶ್ಚರ್ಯ ಸ್ತಬ್ಧತೆಯುಳ್ಳ, ಸಮರಸದ – ಸಮಸುಖದ, ಭಾವಂ – ಸತ್ತೆಯು, ಏಂ ರಂಜಿಸಿತೋ – ಏನು ಸುಖವನ್ನು ಕೊಟ್ಟಿತೋ ಅತಿಸುಖಕರವು.

ತಾ ॥ ಶಿವಯೋಗದ ಶಾಂಭವೀಮುದ್ರಾನುಸಂಧಾನವು ಸ್ವಭಾವ ಸುಖಕರವಾಗಿತ್ತು ॥ ೧೦೪ ॥

ಕಂ॥ ನೀನಾನೆಂಬೆರಡಳಿದುದು ।
ಮಾನಸಮಂ ಬೋಧಿಯಾರಿಕಲ್ಲಾಯ್ತು ಶಿವಂ ॥
ತಾನಾದನೋ ತಾನೇ ಶಿವ ।
ನೇನಾದನೋ ಎಂಬ ತೆರದಿನವನೊಪ್ಪಿರ್ದಂ ॥ ೧೦೫ ॥

**ಟೀಕ ॥** ನೀಂ ಆಂ ಎಂಬ – ಎರಡು ಭೇದವು, ಅಳಿದುದು – ನಾಶವಾಯಿತು, ಮಾನಸಂ – ಹೃದಯವು, ಅಂಬೋಧಿಯು – ಕಡಲಿನ, ಆರಿಕಲ್ಲಾಯ್ತು – ಕರಕವಾಯಿತು, ತಾಂ – ತಾನು, ಶಿವಂ – ಶಿವನು, ಅದನೂ ತಾನೆ ಶಿವಂ ಆದನೋ ಏನೋ ಎಂಬ ತೆರದಿಂ ಅವನು ಒಪ್ಪಿರ್ದಂ.

**ತಾ ॥** ನಿರೂಢ ನಿರ್ವಿಕಲ್ಪಕ ಸಮಾಧಿಯಲ್ಲಿ ಜೀವೇಶ್ವರ ಭೇದವು ಅಳಿದುಹೋಗುತಲೂ ಶಿವನೇ ತಾನಾದನೋ ಅಥವಾ ಶಿವನೇ ತಾನೇ ಶಿವನಾದನೋ ಎಂಬಂತೆ ವಸ್ತುದ್ವಯವಿಲ್ಲದೆ ಏಕವಸ್ತುವಾಗಿ ಅದ್ವೈತಾನಂದನಾಗಿರ್ದನು ॥ ೧೦೫ ॥

**ವ ॥** ಇಂತೆಸೆವಸದೃಶ ಶಿವಧ್ಯಾನಾನುಸಂಧಾನದಿಮುತ್ತರೋತ್ತರ ತಪಃಪ್ರಭಾವದಿಮಾ ತಪಸ್ವಿ ನಿಷ್ಕಂಪ ನಿರ್ವಿಕಾರತೆಯಿಂ ರಂಜಿಸಿರ್ಪನ್ನೆಗಂ ॥

**ಟೀಕ ॥** ಇಂತು– ಹೀಗೆ, ಎಸೆವ, ಅಸದೃಶ – ಸಮಾನವಿಲ್ಲದ, ಶಿವಧ್ಯಾನದ, ಅನುಸಂಧಾನದಿಂ – ಐಕ್ಯಭಾವನೆಯಿಂದಲೂ, ಉತ್ತರೋತ್ತರ – ಮೇಲೆಮೇಲೆ ಬೆಳಿಯುವ,

ತಪಃಪ್ರಭಾವದಿಂ – ತಪಸ್ಸಾಮರ್ಥ್ಯದಿಂದಲು, ನಿಷ್ಕಂಪ – ಚಲನವಿಲ್ಲದ ಇರುವಿಕೆಯಿಂದಲೂ, ಆ ತಪಸ್ವಿಯು ರಂಜಿಸಿ – ಸುಖಕರವಾಗಿ, ಇರ್ಪನ್ನಗಂ– ಇರುವಾಗಳ್ ॥ ೧೩ ॥

ಮ॥ ಸ್ರ॥ ಕ್ಷಿತಿಯೆಲ್ಲಂ ಕಾಯ್ದುದಾಶಾಧಿಪರಗಿದರಮರ್ತ್ಯರ್ಕಳಲ್ಲಾಡಿದರ್ಪ।
ರ್ವತವೃಂದಂ ಕಾಯ್ಪುಗೊಂಡಿತ್ತತುಳಜಳಧಿ ಮೈಗುಂದಿದತ್ತರ್ಕಚಂದ್ರೋ ॥
ನ್ನ ತತೇಜಸ್ಫೂರ್ತಿಯೆತ್ತಂ ಮಸುಳ್ದುದಮಮಮ ತತ್ತಾಪಸಪ್ರವೃದ್ಧೋ।
ಗ್ರ ತಪೋಗ್ನಿಜ್ವಾಲೆಯಿಂದಂ ನೆಗದುದೊಗೆದು ತದ್ಧೂಮದಿಂ ಮೇಘವೃಂದಂ ॥

**ಟೀಕ ॥** ಕ್ಷಿತಿಯೆಲ್ಲಂ – ಭೂಮಿಯೆಲ್ಲವೂ, ಕಾಯ್ದುದು – ಬಿಸಿಯಾಯ್ತು, ಆಶಾಧಿಪರ್ – ದಿಕ್ಪಾಲಕರು, ಅಗಿದರ್ – ಹೆದರಿದರು, ಅಮರ್ತ್ಯರ್ಕಳ್ – ದೇವತೆಗಳು, ಅಲ್ಲಾಡಿದರ್ – ನಡುಗಿದರ್, ಪರ್ವತವೃಂದಂ – ಬೆಟ್ಟಗಳ ಗುಂಪು, ಕಾಯ್ಪುಗೊಂಡಿತ್ತು – ಬಿಸಿಯೇರಿತು, ಅತುಳಜಲಧಿ – ಅಸದೃಶವಾದ ಕಡಲು, ಮೈಗುಂದಿದತ್ತು – ಬತ್ತಿತು, ಅರ್ಕಚಂದ್ರೋನ್ನತ ತೇಜಸ್ಫೂರ್ತಿ – ಸೂರ್ಯೇಂದುಗಳ ಹೆಚ್ಚಾದ ಬೆಳಕಿನ ಹೊಳಪು, ಎತ್ತಂ – ಯಾವ ಕಡೆಯಲ್ಲಿಯೂ, ಮಸುಳ್ದುದು – ಮಾಸಿತು, ಅಮಮ – ಆಶ್ಚರ್ಯವು, ತತ್ತಾಪಸ – ಆ ಮುನಿಯಿಂದ, ಆತ್ತ – ಹೊಂದಲ್ಪಟ್ಟ, ಪ್ರವೃದ್ಧ – ಹೆಚ್ಚು ಬೆಳದ, ಉಗ್ರ – ಕ್ರೂರವಾದ, ತಪೋಗ್ನಿ – ತಪವೆಂಬ ಬೆಂಕಿಯು, ಜ್ವಾಲೆಯಿಂದಂ – ಉರಿಯಿಂದ, ನೆಗದು – ಹಾರಿ, ತದ್ಧೂಮದಿಂ – ಅದರ ಹೊಗೆಯಿಂದ, ಮೇಘವೃಂದಂ – ಮೋಡಗಳ ಗುಂಪು, ಒಗೆದುದು – ಹಾರಿಹೋಯಿತು.

**ತಾ ॥** ಶಿವಯೋಗದಲ್ಲಿ ಕಾಯಶೋಧನೆ ಮಾಡಿ ತತ್ವಸಿದ್ಧಿಯಂ ಪಡೆದಿರುವ ಸಮಾಧಿನಿಷ್ಠನು ಸರ್ವಮಯನಾದ್ದರಿಂದ ಆತನ ಶರೀರವು ತಪಸ್ಸಂತಪ್ತವಾಗಲು ಪಿಂಡಾಂಡ ಬ್ರಹ್ಮಾಂಡಗಳ ಪ್ರಕೃತಿ ವಿಕೃತಿಭಾವದ ವಸ್ತ್ವೈಕ್ಯದಿಂದ ಚರಾಚರಪ್ರಪಂಚವೆಲ್ಲವೂ ತಪಸ್ಸಂತಪ್ತವಾದುದೆಂದು ಬಣ್ಣಿಸಲ್ಪಟ್ಟಿದೆ, ಅತಿಶಯೋಕ್ತ್ಯಲಂಕಾರವು ॥ ೧೦೬ ॥

**ವ ॥** ಆಗಳಾ ತಪೋವನದ ತಪೋಧನರ್ಗೆ ॥

**ಟೀಕೆ ॥** ಆಗಳ್ – ಆಕಾಲದಲ್ಲಿ, ಆ ತಪೋವನದ ತಪೋಧನರ್ಗೆ – ತಪವೇ ಧನವಾಗಿ ಉಳ್ಳ ಮುನಿಗಳಿಗೆ ॥ ೧೪ ॥

ಮ ॥ ಧೃತಿಯಳ್ಳಾಡಿದುದೇಳ್ಗೆಗುಂದಿದುದಧೀಶಧ್ಯಾನಮುದ್ಯತ್ತಪ।
ಸ್ಥಿತಿಗಂಟಾದುದು ಶಾಂತಿ ಸೋರ್ದುದು ಜಪಾನುಷ್ಠಾನಮಿಲ್ಲಾಯ್ತು ಸ ॥
ದ್ವ್ರತಮುಂ ಸೀಕರಿವೋದುದಳ್ಕಿದುದು ವೇದಾಂತೋದಿತಜ್ಞಾನಮು।
ನ್ನತಿಗೆಟ್ಟಿರ್ದುದು ಸದ್ವಿವೇಕಮಳಿದತ್ತಾನಂದದೊಂದೇಳ್ತರಂ ॥ ೧೦೭ ॥

**ಟೀಕೆ ॥** ಧೃತಿ – ಧೈರ್ಯಧಾರಣೆಯು, ಅಳ್ಳಾಡಿದುದು – ಹೆದರಿ ಚಲಿಸಿತು, ಏಳ್ಗೆ – ವೃದ್ಧಿಯು, ಕುಂದಿದುದು – ಕೊರತೆಗೊಂಡಿತು, ಅಧೀಶಧ್ಯಾನಂ – ಶಿವಧ್ಯಾನವೂ, ಉದ್ಯತ್ತಪಸ್ಥಿತಿ – ಹೆಚ್ಚಾದ ತಪಸ್ಸಿನ ಸ್ಥಿತಿಯೂ, ಗೆಂಟಾದುದು – ಕರುಟುಗೊಂಡಿತು,

ಶಾಂತಿ – ಸಮಾಧಾನವೃತ್ತಿಯೂ, ಸೋರ್ದುದು – ಸೋರಿಹೋಯಿತು, ಜಪಾನುಷ್ಠಾನಂ – ಮಂತ್ರಾವೃತ್ತಿಯ ಆಚರಣವು ಅಥವಾ ನಿಶ್ಚಲತ್ವವು, ಇಲ್ಲವಾಯ್ತು – ಇಲ್ಲವಾಯಿತು, ಸದ್ವ್ರತಮುಂ – ಸಮೀಚೀನವಾದ ನಿಯಮವೋ, ಸೀಕರಿವೋದುದು – ಸೀದು ಹೋಯಿತು, ವೇದಾಂತೋದಿತಜ್ಞಾನಂ – ಉಪನಿಷತ್ತುಗಳಿಂದ ಹುಟ್ಟಿದ ಅರುಹು, ಅಳ್ಕಿದುದು – ಹೆದರಿತು, ವಿವೇಕಂ – ಸದಸದ್ವಿಚಾರವು, ಉನ್ನತಿಗೆಟ್ಟಿರ್ದುದು – ಘನತೆ ಕೆಟ್ಟಿತು, ಆನಂದದ – ಸುಖದ ಒಂದು ಬಗೆಯಾದ, ಏಳ್ತರ – ಹೆಚ್ಚಿಕೆಯ ಬಗೆಯು, ಆಳಿದತ್ತು – ಹಾಳಾಯಿತು

**ತಾ ॥** ಸಣ್ಣ ಬೆಳಕು ದೊಡ್ಡ ಬೆಳಕಿನ ಮುಂದೆ ಬೆಳಗದೆ ಇರುವ ಹಾಗೆ – ಅರ್ಜುನನ ತಪದ ಅತಿಶಯದಿಂದ ಆ ವನದಲ್ಲಿದ್ದ ಇತರ ತಪಸ್ವಿಗಳ ತಪವು ಅಭಿಭೂತವಾಗಿ ಅವರ ಯೋಗಕ್ಕೆ ವಿಘ್ನವುಂಟಾಯಿತೆಂದು ಭಾವವು.

ಚ॥ ಅವನವನೀಶನೋ ಸುಭಟನೋ ಮುನಿಯಲ್ತು ಮುನೀಂದ್ರನಾದೊಡೇ ।
ಕವನುಡಿಯಲ್ಲಿ ಕಟ್ಟಿದ ಕಠಾರಿಯಡಾಯುಧಮಾಂತ ಶೀಸಕಂ ॥
ಸವಗಮಡರ್ಪುವೆತ್ತ ಧನು ಬೆನ್ನ ನಿಷಂಗಮುಮಂತೆ ತಾಳ್ದ ಭೂ ।
ತಿ ವಿಲಸದಕ್ಷಮಾಲೆಕುಶೆಯುಂ ಮಗುಳ್ದೇನಿದು ಯೋಗಿಧರ್ಮವೇ ॥ ೧೦೮ ॥

**ಟೀಕೆ ॥** ಅವಂ – ಆ ತಾಪಸನು, ಅವನೀಶನೋ – ರಾಜನೋ, ಸುಭಟನೋ – ವೀರನೋ (ಎಂಬ ಸಂಶಯವು) ಮುನಿಯಲ್ತು ಎಂದು ನಿಶ್ಚಯವು ಮುನಿಯಲ್ಲವೆಂಬುದಕ್ಕೆ ಕಾರಣವಾದ ಆಕ್ಷೇಪಗಳೇನಂದರೆ, – ಮುನೀಂದ್ರನಾದೊಡೆ – ಆಗಿದ್ದರೆ, ಅವನ ಉಡಿಯಲ್ಲಿ – ಟೊಂಕದೊಳು ಕಟ್ಟಿದ ಕಠಾರಿಯೂ, ಅಡಾಯುಧಂ – ಖೇಡ್ಯವೂ, ಆಂತ – ಧರಿಸಿದ, ಸೀಸಕಂ – ಗಲ್ಪಟ್ಟಿಯೂ ಅಥವಾ ಕವಚವು, ಸವಗಂ – ತನುಪ್ರಾಣವೂ (ಕಂಚುಕ), ಅಡರ್ಪುವೆತ್ತ – ಆಧಿಕ್ಯವಂ ಪಡೆದ. ಧನು – ಬಿಲ್ಲು, ಬೆನ್ನು – ಬೆನ್ನಿನಲ್ಲಿ, ಕಟ್ಟಿದ, ನಿಷಂಗಮುಂ – ಸರಳ ಬತ್ತಳಿಕೆಯೂ, ಅಂತೆ – ಹಾಗೆ, ತಾಳ್ದ – ಧರಿಸಿದ, ಭೂತಿ – ಭಸ್ಮವು, ವಿಲಸತ್ – ಶೋಭಿಸುವ, ಅಕ್ಷಮಾಲೆ – ರುದ್ರಾಕ್ಷ ಸರವೂ, ಕುಶೆಯುಂ – ದರ್ಭೆಯು, ಏಕೆ, ಮಗುಳ್ದು – ಮತ್ತೆ, ಇದು ವಿರುದ್ಧ ಲಕ್ಷಣಗಳಿರುವುದು ಯೋಗಿಧರ್ಮಮೆಯೇಂ – ಯೋಗಿಲಕ್ಷಣವೋ, ಏನೂ ಅಲ್ಲ.

**ತಾ ॥** ಅವನು ರಾಜನೋ ವೀರಭಟನೋ ಆಗಿರಬಹುದು, ಮುನಿಯಲ್ಲವು. ಏಕೆಂದರೆ ಮುನಿಯಾಗಿದ್ದರೆ ಆಯುಧಗಳಿರಬಾರದು. ಆಯುಧಪಾಣಿಯಾಗಿರುವದು ಯೋಗಿ ಧರ್ಮವಲ್ಲವು. ಇಂತು ವಿಚಾರಮಾಡಲ್ಪಟ್ಟಿದೆ. ಅನುಮಿತ್ಯಲಂಕಾರವು. ॥ ೧೦೮ ॥

ಕಂ॥ ವಿಪರೀತಮವನ ಚರಿತವು ।
ತಪಮಧಿಕಂ ತದ್ವಿಚಾರದಿಂದೆಮಗೇಂ ವಂ ॥
ದಪುದವನತ್ತಣಿನೊದವಿ ।
ರ್ದುಪಟಳಮಂ ಕಳೆದು ಕಾಯ್ವುದೆಮ್ಮನುಮೇಶಾ ॥೧೦೯ ॥

**ಟೀಕೆ ॥** ಅವನ ಚರಿತಂ – ನಡತೆಯು, ವಿಪರೀತಂ – ವಿರುದ್ಧವು, ತಪಂ –

ತಪವಾದರೋ, ಅಧಿಕಂ – ಹೆಚ್ಚಾದ್ದು, ತದ್ವಿಚಾರದಿಂ – ಅದರ ವಿಚಾರಣೆಯಿಂದ, ಎಮಗೆ – ಏಂವಂದಪುದು – ಏನು ಬರುತ್ತಿದೆ (ವಿಚಾರವು ವ್ಯರ್ಥವು), ಅವನತ್ತಣಿಂ – ಅವನ ದೆಸೆಯಿಂದ, ಒದವಿರ್ದ – ಉಂಟಾದ, ಉಪಟಳಮಂ – ಉಪದ್ರವವನ್ನು ಕಳೆದು ಉಮೇಶನೇ ಎಮ್ಮಂ, ಕಾಯ್ವುದು – ಸಲಹಬೇಕು ಎಂದು ಪ್ರಾರ್ಥನೆಯು ॥ ೧೦೯ ॥

ವೃ॥ ಮನದೊಳೆ ನಿನ್ನ ಚಿಂತನೆಯನಲ್ಲದೆ ಮಾತಿನೊಳೆಯ್ದೆ ದೇವ ನಿ ।
ಮ್ಮನುಪಮ ಪಂಚವರ್ಣಮಯ ಮಂತ್ರಮನಲ್ಲದ ಕಾಯದಲ್ಲಿ ನಿ
ನ್ನನಘಪದಾಬ್ಜಸೇವನೆಯನಲ್ಲದೆ ನೆಚ್ಚಿರೆವಾಗಳುಂ ಕೃಪಾ ।
ವನನಿಧಿ ಮಿಕ್ಕ ದುರ್ವಿಷಯಮಂ ತಿಳಿದಿರ್ದಪೆ ನೀನಿದೆಲ್ಲಮಂ ॥ ೧೧೦ ॥

**ಟೀಕೆ ॥** ಮನದೊಳೆ – ಮನಸ್ಸಿನಲ್ಲಿಯೇ, ನಿನ್ನ ಚಿಂತನೆಯನಲ್ಲದೆ – ಧ್ಯಾನವನ್ನು ಹೊರತು, ಮಾತಿನೋಳ್ – ವಚನದಲ್ಲಿ, ದೇವ – ದೇವ ಶಿವನೇ, ಎಯ್ದೆ – ಚೆನ್ನಾಗಿ, ನಿನ್ನ, ಅನುಪಮ – ಅಸದೃಶವಾದ, ಪಂಚವರ್ಣಮಯ – ಪಂಚಾಕ್ಷರ ಸ್ವರೂಪವಾದ, ಮಂತ್ರಮನಲ್ಲದೆ – ವೇದವಾಕ್ಯವನ್ನು ಹೊರತು, ಕಾಯದಲ್ಲಿ – ಮೈಯಿಂದ, ನಿನ್ನ, ಅನಘ – ಪಾಪವಿಲ್ಲದ, ಪದಾಬ್ಜಸೇವನೆಯನಲ್ಲದೆ – ಅಡಿದಾವರೆಯ ಭಜನವೇ ಹೊರತು, ಮಿಕ್ಕ ದುರ್ವಿಷಯಮಂ – ದುಷ್ಟ ವ್ಯಾಪಾರವನ್ನು, ಆಗಳುಂ – ಯಾವಾಗಲೂ, ನೆಚ್ಚಿರೆವು – ನಂಬಿರೆವು, ಕೃಪಾವನನಿಧಿ – ಕರುಣಾಸಮುದ್ರನೆ, ನೀನು ಇದೆಲ್ಲಮಂ ತಿಳಿದು, ಇರ್ದಪೆ– ಇರುವಿ.

**ತಾ ॥** ಮನಸ್ಸಿನಲ್ಲಿ ಶಿವಧ್ಯಾನ, ವಾಕ್ಕಿನಲ್ಲಿ ಪಂಚಾಕ್ಷರ ಜಪ, ಕಾಯದಲ್ಲಿ ಶಿವಲಿಂಗ ಸೇವೆ – ಹೀಗೆ ತ್ರಿಕರಣದಿಂದಲೂ ನಿನ್ನ ಭಜಿಸುತ್ತ ಇತರ ವಿಷಯಗಳನ್ನು ಬಿಟ್ಟು ನಿನ್ನನ್ನು ನಂಬಿದ್ದೇವೆ. ಇದನ್ನು ನೀನೇ ತಿಳಿದಿದ್ದೀಯೆ. ॥ ೧೧೦ ॥

ಕಂ ॥ ಪತಿಯುಂ ಗತಿಯುಂ ಹಿತನುಂ ।
ಪಿತನುಂ ದೇವೇಶ ನೀನೆ ಪೆರತೆಮಗಿಲ್ಲಿ ॥
ಲ್ಲತಿಶಯಕಿತವ ತಪಸ್ವಿಯ ।
ಕತದಿಂದಾದಳಲನೊರಸಿ ಪೊರೆ ಕರುಣಾಬ್ಧೀ ॥ ೧೧೧ ॥

**ಟೀಕೆ ॥** ಪತಿಯುಂ – ಒಡೆಯನೂ, ಗತಿಯುಂ – ಭೋಗವೂ, ಹಿತನುಂ – ಪ್ರಿಯನೂ, ಪಿತನುಂ – ತಂದೆಯೂ, ನೀನೇ, ದೇವೇಶ – ದೇವರ್ಕಳಿಗೊಡೆಯನೇ, ಎಮಗೆ – ಪೆರತು, ಬೇರೆ ಇಲ್ಲ, ಕರುಣಾಬ್ಧಿ – ದಯಾಶಿಂಧು, ಅತಿಶಯಕಿತವ – ಮಹಾವಂಚಕನಾದ, ತಪಸ್ವಿಯ – ಮುನಿಯ, ಕತದಿಂದ – ನಿಮಿತ್ತದಿಂದ ಆದ, ಅಳಲಂ – ದುಃಖವನ್ನು, ಒರಸಿ – ತೊಡದು, ಪೊರೆ – ಪಾಲಿಸು. ॥ ೧೧೧ ॥

ಕಂ॥ ಆ ಗಿರಿತಟದಿಂದವನಂ ।
ಪೋಗಿಸಿ ತದ್ವನನಿವಾಸಮಂ ಕರುಣಿಪುದಂ ॥
ತಾಗದೊಡೆಮಗೀವುದು ನೀ ।
ಡಾಗದೆ ಪೆರತೊಂದನುಚಿತನಗನಂದನಮಂ ॥ ೧೧೨ ॥

**ಟೀಕೆ ॥** ಆ ಗಿರಿಯ ತಟದಿಂದ – ಆ ಇಂದ್ರಕೀಲದ ತಪ್ಪಲಿನಿಂದ, ಅವನಂ – ಆ ಹೊಸ ಮುನಿಯುನ್ನು, ಪೋಗಿಸಿ – ಹೊರಡಿಸಿ, ತದ್ವನ ನಿವಾಸಂ – ಆ ವನದಲ್ಲಿರುವಿಕೆಯನ್ನು, ಕರುಣಿಪುದು – ನಮಗೆ ದಯಮಾಡು, ಅಂತರ್ಾದೊಡೆ – ಹಾಗಾಗದೆ ಹೋದರೆ, ನೀಡಾಗದ – ಸಮಾನವಿಲ್ಲದ, ಪೆರತೊಂದನು – ಬೇರೆ ಮತ್ತೊಂದಾದ, ಉಚಿತನಗನಂದನಮಂ – ತಕ್ಕ ಬೆಟ್ಟದವನನ್ನು, ಎಮಗೆ ಈವುದು – ನಮಗೆ ಕೊಡು.

**ತಾ ॥** ಅಲ್ಲಿಂದ ಅವನನ್ನಾದರೂ ಹೊರಡಿಸು, ಇಲ್ಲವಾದರೆ ನಮಗೆ ಬೇರೆ ಒಂದು ವನವನ್ನಾದರೂ ತೋರಿಸು.

ಕಂ ॥ ಪ್ರಣಯಣಮಿಲ್ಲದೊಡಮಾ ।
ಗುಣಿಯ ಗುಣಂಗಳನೆ ಮಸದುಸಿರ್ದ ಮುನಿಪಾ ॥
ಗ್ರಣಿ ಪಗೆಯೊಳಾದೊಡಂ ಗುಣ ।
ಗಣಮಿರೆ ತಾಂ ಗ್ರಹಿಸಿ ಪೊಗಳದಿರ್ಪನೆ ಸುಜನಂ ॥ ೧೧೩ ॥

**ಟೀಕೆ ॥** ಮುನಿಪಾಗ್ರಣಿ – ಋಷಿಶ್ರೇಷ್ಠರಲ್ಲಿ ಅಗ್ರೇಸರನಾದವನು, ಪ್ರಣಯಂ – ಸ್ನೇಹವು, ಅಣಂ – ಏನೂ, ಇಲ್ಲದೊಡಂ – ಇಲ್ಲದಿದ್ದರೂ, ಆ ಗುಣಿಯ – ಆ ಗುಣವಂತನ, ಗುಣಂಗಳನೇ – ಸುಗುಣಂಗಳನ್ನೇ, ಮಸದು – ಚರ್ಚಿಸಿ, ಉಸಿರ್ದಂ – ಹೇಳಿದನು, ಸುಜನಂ – ಸತ್ಪುರುಷನು, ಪಗೆಯೊಳಾದೊಡಂ – ಶತ್ರುವಿನೊಳಗಾದರು, ಗುಣಗಣಂ – ಸುಗುಣಪುಂಜವು, ಇರೆ – ಇದ್ದರೆ, ತಾಂ – ತಾನಾಗಿ, ಗ್ರಹಿಸಿ – ತಿಳಿದು, ಪೊಗಳದಿರ್ಪನೆ – ಶ್ಲಾಘಿಸದೆ ಇರುವನೋ?

**ತಾ ॥** ೨೬ನೆಯ ಪದ್ಯದ ಮೊದಲು ಮೇಲಿನ ಪದ್ಯದ ಕಡೆಯವರೆಗೂ ಆ ಪ್ರಗಲ್ಭ ತಾಪಸನು, ಪೊಸ ತಪಸ್ವಿಯ ಗುಣಗಳನ್ನು ಅವನಿಂದ ತನಗೆ ಪ್ರಿಯವಾವುದೂ ಇಲ್ಲದಿದ್ದರೂ ಸತ್ಪುರುಷನಾದ್ದರಿಂದಲೇ ಚನ್ನಾಗಿ ವರ್ಣಿಸಿ ಹೇಳಿದನು. ಅರ್ಥಾಂತರನ್ಯಾಸಾಲಂಕಾರವು ॥ ೧೧೩ ॥

ಎಂದು ಬಿನ್ನಪಂಗೆಯ್ದ ಮುನಿವರನುಕ್ತಿಯಂ ಕೇಳ್ದು ಪನ್ನಗಧರಂ ಮುಗುಳ್ನಗೆಯ ನಕ್ಕು –

**ಟೀಕೆ ॥** ಎಂದು – ಬಿನ್ನಪಂಗೆಯ್ದು, ವಿಜ್ಞಾಪನವಂ ಮಾಡಿದ, ಮುನಿವರನ – ಪ್ರಗಲ್ಭತಾಪಸನ, ಉಕ್ತಿಯಂ – ಮಾತನ್ನು, ಕೇಳ್ದು – ಆಲೈಸಿ, ಪನ್ನಗಧರಂ – ನಾಗಭೂಷಣನು, ಮುಗುಳ್ನಗೆಯ ನಕ್ಕು – ಕಿರುನಗೆಗೊಂಡು ॥ ೧೧೩ ॥

(ಮುಂದುವರಿಯುವುದು)

# ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವ

ಸದಾನಂದ ಕನವಳ್ಳಿ

ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವ ಪುಟಕ್ಕಿಟ್ಟ ಚಿನ್ನದಂತೆ ಪರಿಶುದ್ಧವಾಗಿತ್ತು. ಯಾವ ದೃಷ್ಟಿಯಿಂದ ನೋಡಿದರೂ, ರಾವುಗನ್ನಡಿ ಹಿಡಿದು ನೋಡಿದರೂ, ಅವರ ವ್ಯಕ್ತಿತ್ವದಲ್ಲಿ ಸಣ್ಣತನವಿರಲಿಲ್ಲ. ಅವರದು ತುಂಬು ವ್ಯಕ್ತಿತ್ವ, ಹಿರಿದಾದ ಚೇತನ.

ಪಂಚಾಕ್ಷರಿ ಗವಾಯಿಗಳು ಸಂಗೀತ ಸೇವೆಯಲ್ಲಿಯೇ ಜೀವ ಸವೆಸಿದವರು. ಉತ್ತರ ಕರ್ನಾಟಕದಲ್ಲಿ ಸಂಗೀತ ಪ್ರಸಾರಕ್ಕೆ ಬೃಹತ್ ಚಾಲನೆ ನೀಡಿದವರು. ಸುತ್ತಿ ಸುಳಿದು ನೋಡದಂತೆ ಅಂಧಕರಾಗಿ ಹುಟ್ಟಿದರೂ (ಫೆಬ್ರವರಿ 2, 1892) ಕಾಯವ ದಂಡಿಗೆಯ ಮಾಡಿ ಉರದಲೊತ್ತಿ ಬಾರಿಸಿದವರು. ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದವರು. ಅನೇಕ ಶ್ರೇಷ್ಠ ಸಂಗೀತಗಾರರನ್ನು ತಯಾರಿಸಿದವರು. ಪ್ರಾತಃಸ್ಮರಣೀಯ ಪುಣ್ಯಚರಿತರು.

**ಬತ್ತೀಸ ರಾಗವ ಹಾಡಯ್ಯಾ :** ಹಾನಗಲ್ಲ ಕುಮಾರಸ್ವಾಮಿಗಳ ಕರುಣೆಯ ಕಂದನಾಗಿ ಬೆಳೆಯುತ್ತ ಕರ್ನಾಟಕಿ ಸಂಗೀತದಲ್ಲಿ ಪರಿಣತನಾಗಿ ಗದಿಗೆಯ್ಯ ಪಂಚಾಕ್ಷರಿ ಗವಾಯಿಗಳಾದರು. ಹಿಂದೂಸ್ತಾನಿ ಸಂಗೀತ ಕಲಿಯಬೇಕೆಂಬ ಆಸೆ ಅಂಕುರಿಸಿತು. ಪಂಚಾಕ್ಷರಿ ಗವಾಯಿಗಳ ಮನಸ್ಸಿನಲ್ಲಿ ಇಚ್ಛೆ ಮೂಡುವುದೇ ತಡ, ಅದನ್ನು ಕುಮಾರಸ್ವಾಮಿಗಳು ತಕ್ಷಣ ಈಡೇರಿಸಿಬಿಡುತ್ತಿದ್ದರು. ಸುಪ್ರಸಿದ್ಧ ಗಾಯಕ ಉಸ್ತಾದ್ ಅಬ್ದುಲ್ ವಹೀದ ಖಾನರನ್ನು ಶಿವಯೋಗಮಂದಿರಕ್ಕೆ ಕರೆಯಿಸಿ ಅಂದಿನ ಸೋವಿ ಕಾಲದಲ್ಲಿ (1917–21) ತಿಂಗಳಿಗೆ 150 ರೂ.ಗಳ ಸಂಭಾವನೆ ನೀಡಿ ಪಂಚಾಕ್ಷರಿ ಗವಾಯಿಗಳ ಹಿಂದುಸ್ತಾನಿ ಸಂಗೀತ ಶಿಕ್ಷಣಕ್ಕೆ ಏರ್ಪಾಡು ಮಾಡಿದರು. ಬಳಿಕ ಪಂಚಾಕ್ಷರಿ ಗವಾಯಿಗಳು ಗ್ವಾಲಿಯರ್ ಘರಾಣೆಯ ನೀಲಕಂಠ ಬುವಾ ಮಿರಜಕರ ಅವರಲ್ಲಿ ವಿದ್ಯಾಭ್ಯಾಸಗೈದರು. ಸಂಗೀತ ಎಂಬುದು ಸಮುದ್ರವಿದ್ದಂತೆ. ಬೆಳಗಾವಿಯಲ್ಲಿ ನಾಗನೂರ ಸ್ವಾಮಿಗಳ ಮಠದಲ್ಲಿ ನಾಲ್ಕಾರು ತಿಂಗಳು ವಾಸ ಮಾಡಿದಾಗ ರಾಮಕೃಷ್ಣ ಬುವಾ ವಝೆ ಅವರಲ್ಲಿ ತಿಂಗಳಿಗೆ 200 ರೂ. ಗೊತ್ತುಮಾಡಿ ಅಭ್ಯಾಸ ಮಾಡಿದರು.

1933ರಲ್ಲಿ ಎಚ್.ಎಂ.ವಿ. ಧ್ವನಿಮುದ್ರಣಕ್ಕಾಗಿ ಮುಂಬಯಿಗೆ ಹೋದಾಗ ಆರು ತಿಂಗಳು ಅಲ್ಲಿದ್ದರು. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಮುಂಬಯಿ ಯಲ್ಲಿದ್ದ ಶ್ರೇಷ್ಠ ಗವಾಯಿಗಳ ಗಾಯನ ಕೇಳಿದರು. ಅವರು ಅನುಕೂಲ ಮಾಡಿಕೊಂಡು

ವಿನಾಯಕರಾವ್ ಪಟವರ್ಧನ, ಮಾಸ್ಟರ್ ದೀನಾನಾಥ, ನಾರಾಯಣ ರಾವ, ವ್ಯಾಸ, ಓಂಕಾರನಾಥ ಠಾಕೂರ್, ಮಾಸ್ಟರ್ ವಸಂತ್, ಮಂಜೀಖಾನ್, ಬುರ್ಜಿ ಖಾನ್, ಮೋಘುಬಾಯಿ ಕುರ್ಡಿಕರ್, ಕೇಸರಬಾಯಿ ಕೇರಕರ್ ಮೊದಲಾದವರ ಗಾನಸುಧೆ ಸವಿದರು. ಪಂಚಾಕ್ಷರಿ ಗವಾಯಿಗಳಿಗೆ ಅಬ್ದುಲ್ ಕರೀಂಖಾನ್ ಹಾಗೂ ಸವಾಯಿ ಗಂಧರ್ವರ ನಿಕಟ ಪರಿಚಯವಿತ್ತು. 1937–38ರಲ್ಲಿ ಇನಾಯತ್ ಹುಸೇನ್ ಖಾನರು ಗದಗಿನಲ್ಲಿ ವಾಸ್ತವ್ಯ ಹೂಡಿದಾಗ ಅವರಿಂದಲೂ ಕೆಲವು ತಿಂಗಳು ಪಾಠ ಹೇಳಿಸಿಕೊಂಡರು. ಉತ್ತಮವಾದುದು ಎಲ್ಲಿಯೇ ಇರಲಿ, ಅದನ್ನು ಗ್ರಹಿಸುವ, ಸಂಗ್ರಹಿಸುವ ಇಚ್ಛೆ ಪಂಚಾಕ್ಷರಿ ಗವಾಯಿಗಳದು.

ಹಲವು ಗುರುಗಳಿಂದ ಕಲಿತ, ಅನೇಕರ ಗಾಯನವನ್ನು ಆಲಿಸಿದ ಫಲವಾಗಿ ಪಂಚಾಕ್ಷರಿ ಗವಾಯಿಗಳ ಗಾಯನದಲ್ಲಿ ಹಲವು ಘರಾಣೆಯ ಶೈಲಿಗಳ, ಹಲವು ಗಾಯನ ಪ್ರಕಾರ ಗಳ ಮಾಧುರ್ಯ, ವೈವಿಧ್ಯ ಮುಪ್ಪುರಿಗೊಂಡಿದ್ದವು. ಖ್ಯಾಲರ, ರುಮರಿ. ಘಝಲ್, ಟಪ್ಪಾ, ಧ್ರುಪದಗಳನ್ನು ಅವರು ಲೀಲಾಜಾಲವಾಗಿ ಹಾಡಬಲ್ಲವರಾಗಿದ್ದರು.

**ಲಿಂಗವ್ಯಸನಿ, ಜಂಗಮಪ್ರೇಮಿ :** ಪಂಚಾಕ್ಷರಿ ಗವಾಯಿಗಳಿಗೆ ಇಪ್ಪತ್ತೈದರ ತುಂಬು ಹರೆಯ, ನರನಾಡಿಗಳಲ್ಲಿ ಮಿಂಚಿನ ಸಂಚಾರ, ಎಲ್ಲ ಯುವಕರಿಗಿರುವಂತೆ ಮದುವೆ ಯಾಗುವ ಅದಮ್ಯ ಬಯಕೆ. ಆದರೆ, ಹಾಗೆಂದು ಕುಮಾರಸ್ವಾಮಿಗಳಲ್ಲಿ ಅರಿಕೆಮಾಡಿಕೊಳ್ಳುವುದು ಹೇಗೆ ಎಂಬಂಥ ಆತಂಕ. ಒಂದು ದಿನ ಕುಮಾರಸ್ವಾಮಿಗಳು ಪಂಚಾಕ್ಷರಿ ಗವಾಯಿಗಳನ್ನು ಉದ್ದೇಶಿಸಿ ಹೀಗೆ ಉಪದೇಶಿಸಿದರು : "ನೀನು ಅವಿಚ್ಛಿನ್ನವಾಗಿ ಸಮಾಜಸೇವೆ ಮಾಡು. ಅದಕ್ಕಾಗಿ ಬ್ರಹ್ಮಚರ್ಯ ಪಾಲಿಸುವುದು ಅಗತ್ಯ."

"ಗುರುವೆ, ನಿಮ್ಮೆಲ್ಲ ಆಜ್ಞೆಗಳನ್ನು ಪಾಲಿಸುವೆ. ಆದರೆ ನನ್ನಿಂದ ಬ್ರಹ್ಮಚರ್ಯ ವ್ರತ ಸಾಧ್ಯವಿಲ್ಲ. ತಾವು ನನ್ನ ವಿವಾಹವೇರ್ಪಡಿಸಿ ನನ್ನನ್ನು ಉದ್ಧರಿಸಬೇಕು."

ಕುಮಾರಸ್ವಾಮಿಗಳಿಗೆ ಸಂದಿಗ್ಧ, ಅತ್ತ ತೆರ ವಿರೋಧಿಸುವ ತತ್ವ, ಇತ್ತ ಶಿಷ್ಯವಾತ್ಸಲ್ಯ, ಕನ್ಯಾಶುಲ್ಕವೀಯುವಂತಿಲ್ಲ. ಅದಿಲ್ಲದೆ ಕನ್ಯೆ ಸಿಗುವಂತಿಲ್ಲ. ಇದಕ್ಕೇನುಪಾಯ? ಶ್ರೀಗಳವರು ಕನ್ಯಾಶುಲ್ಕದ ಬದಲು ಕನಕಾಭರಣಗಳನ್ನು ನೀಡುವುದಾಗಿ ಘೋಷಿಸಿದರು. ಫಲಿಸಲಿಲ್ಲ. ಕುಮಾರಸ್ವಾಮಿಗಳು ಚಿಂತೆಯಿಂದ ಕೊರಗಹತ್ತಿದರು. ಇದನ್ನೆಲ್ಲ ಕಂಡು ನೊಂದವರ ಲ್ಲೊಬ್ಬರಾದ ಆಲೂರ ಗುರಪ್ಪ ಪಂಚಾಕ್ಷರಿ ಗವಾಯಿಗಳಿಗೆ ಬುದ್ಧಿವಾದ ಹೇಳಿದರು :

"ಗವಾಯಿಗಳೆ, ನಿಮಗೇನು ತಲೆ ಕೆಟ್ಟಿದೆಯೆ? ನಿಮ್ಮನ್ನು ತಂದೆತಾಯಿಗಿಂತ ಹೆಚ್ಚಾಗಿ ಸಾಕಿ ಸಲಹಿ, ನೀರಿನಂತೆ ಹಣ ಸುರಿದು ನಿಮಗೆ ಸಂಗೀತವಿದ್ಯೆ ಕೊಡಿಸಿ ಉನ್ನತ ಮಟ್ಟಕ್ಕೇರಿಸಿದ ಗುರುಗಳ ಮನಸ್ಸನ್ನೇ ನೋಯಿಸುವುದೆ? ಶ್ರೀಗಳವರಿಗೆ ಈ ಪರಿ ತೊಂದರೆ ಕೊಟ್ಟುದಕ್ಕೆ ಇಡೀ ವೀರಶೈವ ಸಮಾಜ ನಿಮ್ಮ ಮೇಲೆ ಸಿಟ್ಟಾಗಿದೆ. ನೀವೊಬ್ಬರು ಲಗ್ನವಾಗದಿದ್ದರೆ ಜಗತ್ತೇ ಹಾಳಾಗಿ ಹೋಗುವುದೆ?"

ಪಂಚಾಕ್ಷರಿ ಗವಾಯಿಗಳ ಕಣ್ಣು ತೆರೆಯಿತು. ಕೂಡಲೆ ಕುಮಾರಸ್ವಾಮಿಗಳಿದ್ದೆಡೆ ಬಂದು ಕಾಲಿಗೆರಗಿದರು.

"ಗುರುವೆ, ನನ್ನಿಂದ ಘೋರ ತಪ್ಪಾಯಿತು. ನನಗೆ ಲಗ್ನ ಬೇಡ. ನಿಮ್ಮ ಆಣತಿಯಂತೆ ಬ್ರಹ್ಮಚರ್ಯ ಪಾಲಿಸಿ ಸಮಾಜಸೇವೆಗೈಯ್ಯುವೆ."

ಅಂದಿನಿಂದ ಅವರು ಚಿತ್ತಚಾಂಚಲ್ಯಕ್ಕೆ ಅವಕಾಶವೀಯಲಿಲ್ಲ. ಲಿಂಗವ್ಯಸನಿ, ಜಂಗಮಪ್ರೇಮಿಯಾದರು. ಲಿಂಗಾರ್ಚನೆ, ವಿದ್ಯಾರ್ಜನೆ, ವಿದ್ಯಾದಾನಗಳಲ್ಲಿ ತಲ್ಲೀನರಾದರು. ಕುಮಾರಸ್ವಾಮಿಗಳ ಸಂತೋಷಕ್ಕೆ ಪಾರವಿರಲಿಲ್ಲ. ಇನ್ನೂ ಸ್ವಲ್ಪ ಕಾಲ ಪರೀಕ್ಷಿಸಿ ನೋಡೋಣ ಎಂದು ಸುಮ್ಮನಿದ್ದರು.

ಒಮ್ಮೆ ಕುಮಾರಸ್ವಾಮಿಗಳೊಂದಿಗೆ ಪಂಚಾಕ್ಷರಿ ಗವಾಯಿಗಳು ಹುಬ್ಬಳ್ಳಿಗೆ ಬಂದಿದ್ದರು. ಪುರಾಣ, ಪ್ರವಚನ, ಕೀರ್ತನ, ಗಾಯನ ಕಾರ್ಯಕ್ರಮಗಳು ಎಡೆಬಿಡದೆ ಸಾಗಿದ್ದವು. ಒಂದು ದಿನ ಪಂಚಾಕ್ಷರಿ ಗವಾಯಿಗಳ ಗಾಯನ ಕೇಳಿ ಮರುಳಾದ ವಾರಾಂಗನೆಯೊಬ್ಬಳು ಅವರಲ್ಲಿ ಮೋಹಿತಳಾದಳು. ಅವರ ಬಿಡಾರಕ್ಕೆ ಬಂದು ಕಾಮಭಿಕ್ಷೆ ಬೇಡಿದಳು. ಪಂಚಾಕ್ಷರಿ ಗವಾಯಿಗಳು ವಿಷಯಕ್ಕೆಳಸದೆ "ಕಾಂತೆಯರೆನ್ನ ಮಾತೆಯರೆಂಬೆ" ಎಂದುಚ್ಚರಿಸಿ ಬ್ರಹ್ಮಚರ್ಯ ವ್ರತದಲ್ಲಿ ತಮ್ಮ ನೈಷ್ಠಿಕತೆಯನ್ನು ಸ್ಪಷ್ಟಪಡಿಸಿದರು.

ಎಲ್ಲೆಲ್ಲೂ ಅವರ ಜಿತೇಂದ್ರಿಯತ್ವದ ಗುಣಗಾನ, ಕುಮಾರಸ್ವಾಮಿಗಳಿಗಂತೂ ಹಿಡಿಸಲಾರದಷ್ಟು ಹಿಗ್ಗು. ಶಿವಯೋಗಮಂದಿರಕ್ಕೆ ಹಿಂತಿರುಗುತ್ತಲೇ ಬಿದರಿ ಪಟ್ಟದದೇವರಾದ ಶ್ರೀ ಪ್ರಭುಕುಮಾರ ಶಿವಾಚಾರ್ಯರನ್ನು ಕರೆಯಿಸಿ ಅವರಿಂದ ಅಮೃತಗಳಿಗೆಯಲ್ಲಿ ಶಿವದೀಕ್ಷೆ ಕೊಡಿಸಿದರು. ಅಂದಿನಿಂದ ಪಂಚಾಕ್ಷರಿ ಗವಾಯಿಗಳು ಗುರು, ಲಿಂಗ, ಜಂಗಮರಲ್ಲಿ ಶ್ರದ್ಧೆಯಿಟ್ಟು ವಿಧ್ಯುಕ್ತವಾಗಿ ತ್ರಿಕಾಲಪೂಜೆಯಲ್ಲಿ ನಿರತರಾಗಿ ಪಾದೋದಕ ಪ್ರಸಾದಗಳನ್ನು ಸ್ವೀಕರಿಸುತ್ತಿದ್ದರು. ತಮ್ಮ ನಿತ್ಯಾಚರಣೆಯಲ್ಲಿ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ ಎಂಬ ಸಿದ್ಧಾಂತವನ್ನು ಅನೂಚಾನವಾಗಿ ಅನುಸರಿಸಿದರು. ಬೇನೆ ಬೇಸರಿಕೆಗಳೆನ್ನದೆ ಲಿಂಗಪೂಜಾವ್ರತ ಆಚರಿಸಿದರು. ಮುಂಬಯಿ ಆಕಾಶವಾಣಿ ಕೇಂದ್ರದಿಂದ ಕಾರ್ಯಕ್ರಮ ನೀಡಲು ಕರೆಬಂದರೂ ಅಲ್ಲಿ ಸ್ನಾನ ಪೂಜೆಗಳಿಗೆ ವ್ಯವಸ್ಥೆಯಾಗದೆಂದು ಕಾರ್ಯಕ್ರಮ ಒಪ್ಪಿಕೊಳ್ಳಲಿಲ್ಲ. ಅಷ್ಟೇ ಏಕೆ, ಕೊನೆಯ ಗಳಿಗೆಯಲ್ಲಿ ಕೂಡ ಅಂಗೈಯಲ್ಲಿ ಲಿಂಗವನ್ನಿಟ್ಟುಕೊಂಡು ಪ್ರಾಣಬಿಟ್ಟರು.

**ಬಳ್ಳಿಗೆ ಕಾಯಿ ದಿಮ್ಮಿತ್ತೆ ? :** ಪಂಚಾಕ್ಷರಿ ಗವಾಯಿಗಳ ವಿದ್ಯಾರ್ಥಿವಾತ್ಸಲ್ಯ ಅನ್ಯಾದೃಶವಾಗಿತ್ತು. ಅವರ ವಿದ್ವತ್ತು ಮತ್ತು ವಾತ್ಸಲ್ಯಗಳಿಂದಾಗಿ ಬೆಲ್ಲಕ್ಕೆ ಇರುವೆ ಮುತ್ತುವಂತೆ ವಿದ್ಯಾರ್ಥಿಗಳು ಅಕರ್ಷಿತರಾದರು. ಜಾತಿ, ಮತ, ಪಂಥಭೇದವಿಲ್ಲದೆ ವಿದ್ಯಾದಾನ ಮಾಡಿದರು. ಬಂಕಾಪುರದ ಶಂಕರ ದೀಕ್ಷಿತರು ಸ್ಮಾರ್ತ ಬ್ರಾಹ್ಮಣರು, ಸಂಗೀತ ಕಲಿಯಲು

ಪಂಚಾಕ್ಷರಿ ಗವಾಯಿಗಳಲ್ಲಿದ್ದಾಗ ಅವರ ವ್ರತನಿಯಮ ಪಾಲನೆಗೆ ಅನುಕೂಲವಾಗಲೆಂದು ಒಬ್ಬ ಬ್ರಾಹ್ಮಣ ವಿದ್ಯಾರ್ಥಿಯನ್ನು ಅವರ ಸೇವೆಗೆ ನಿಯಮಿಸಿದ್ದರು.

ಇಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ಆರ್.ವಿ. ಶೇಷಾದ್ರಿ ಗವಾಯಿಯವರು 1940 ರಿಂದ 1950ರವರೆಗೆ ಪಂಚಾಕ್ಷರಿ ಗವಾಯಿಗಳು ಹಾಗೂ ಪುಟ್ಟರಾಜ ಗವಾಯಿಗಳಲ್ಲಿ ವಿದ್ಯಾಭ್ಯಾಸಗೈದಿರುವರು. ಅವರ ಸಂಧ್ಯಾವಂದನೆ ಮೊದಲಾದ ನಿತ್ಯಕರ್ಮಗಳಿಗೆ ವ್ಯತ್ಯಯವಾಗದಿರಲೆಂದು ಪಂಚಾಕ್ಷರಿ ಗವಾಯಿಗಳು ಅವರಿಗೆ ಒಬ್ಬ ಬ್ರಾಹ್ಮಣರ ಮನೆಯಲ್ಲಿ ವ್ಯವಸ್ಥೆ ಮಾಡಿದ್ದರು.

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು, ಆದಾಯ–ಖರ್ಚು ಬಾಯಿಗೂಡುವುದು ದುಸ್ತರವಾಗುತ್ತ ನಡೆಯಿತು. ಸಂಗೀತ ಶಾಲೆಯ ವ್ಯವಸ್ಥಾಪಕರಾಗಿದ್ದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಪಂಚಾಕ್ಷರಿ ಗವಾಯಿಗಳಿಗೆ ಮಾತ್ರ ಹಾಲು ಕೊಡಹತ್ತಿದ್ದರು. ಇದು ಪಂಚಾಕ್ಷರಿ ಗವಾಯಿಗಳಿಗೆ ಗೊತ್ತಾಗಿ "ಮಕ್ಕಳನ್ನು ಬಿಟ್ಟು ನನಗೊಬ್ಬನಿಗೇ ಹಾಲು ಕುಡಿ ಎನ್ನುವಿಯಾ? ಇದು ತಂದೆಯ ಧರ್ಮವೆ? ಹಾಲು ತರಿಸಿ ಮಕ್ಕಳಿಗೆಲ್ಲ ಕೊಡು, ಕೊಡುವ ದೇವರು ಬಡವನಲ್ಲ" ಎಂದು ಹೇಳಿದರು. ಹಾಲು ಕುಡಿದು ಮಕ್ಕಳೂ ಪಂಚಾಕ್ಷರಿ ಗವಾಯಿಗಳೂ ಸುಖನಿದ್ರೆಗೈದರು. ಸಾಲ ತೀರಿಸುವುದೆಂತು ಎಂಬ ಚಿಂತೆಯಲ್ಲಿ ಚಿತ್ತರಗಿ ಗಂಗಾಧರ ಶಾಸ್ತ್ರಗಳಿಗೆ ನಿದ್ದೆ ಹತ್ತಲಿಲ್ಲ. ಮರು ದಿನ ಬೆಳಗ್ಗೆ ಯಾರೋ ಹಿತೈಷಿಗಳು 200 ರೂ. ಮನಿ ಆರ್ಡರ್ ಕಳಿಸಿದ್ದರು. ಪಂಚಾಕ್ಷರಿ ಗವಾಯಿಗಳು ಗಂಗಾಧರ ಶಾಸ್ತ್ರಿಗಳನ್ನು ಕರೆದು "ತೆಗೆದುಕೋ, ಹಾಲಿನ ಸಾಲ ತೀರಿಸು" ಎಂದು ಆ ದುಡ್ಡು ಕೊಟ್ಟರು.

1942. ಭೀಕರ ಬರಗಾಲ. ಪಂಚಾಕ್ಷರಿ ಗವಾಯಿಗಳ ಗಿಳಿವಿಂಡು ತಿರುಗಿ ತಿರುಗಿ ಸುಸ್ತಾಗಿ ಗದಗಿಗೆ ಬಂದಿಳಿಯಿತು. ಆಗ ಸಂಗೀತ–ನಾಟಕ ಶಾಲೆಯಲ್ಲಿ 120–130 ವಿದ್ಯಾರ್ಥಿಗಳಿದ್ದರು. ಗದಗಿನ ಪ್ರಮುಖರು ಮಕ್ಕಳನ್ನು ಕೆಲ ಕಾಲ ಅವರವರ ಊರಿಗೆ ಕಳಿಸಲು ಸೂಚಿಸಿದರು. ಪಂಚಾಕ್ಷರಿ ಗವಾಯಿಗಳು "ದುರ್ಭಿಕ್ಷದ ಸಮಯವೆಂದು ಮಕ್ಕಳನ್ನು ಮನೆ ಬಿಟ್ಟು ಕಳಿಸುವುದುಂಟೆ? ನಾನು ಉಪವಾಸವಿದ್ದಾದರೂ ನನ್ನ ತಂಬೂರಿಯ ತಂತಿಯನ್ನು ಮಾರಿಯಾದರೂ ಮಕ್ಕಳನ್ನು ಸಲಹುವೆ" ಎಂದು ತಮ್ಮ ನಿರ್ಧಾರ ವ್ಯಕ್ತಮಾಡಿದರು. ಇದರಿಂದ ಪ್ರಭಾವಿತರಾದ ದಾನಶೂರ ಬಸರಿಗಿಡದ ವೀರಪ್ಪನವರು ಗವಾಯಿಗಳ ತಂಡದ ಊಟದ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳುವುದಾಗಿ ಸಾರಿದರು. ತಮ್ಮ ಉದ್ಯೋಗದಲ್ಲಿ ಬಂದ ಲಾಭದಲ್ಲಿ ಒಂದು ಪಾಲನ್ನು ಪಂಚಾಕ್ಷರಿ ಗವಾಯಿಗಳಿಗೆ ನೀಡಿದರು. ಅವರು ದಾನವಾಡಿದ ನಿವೇಶನದಲ್ಲಿ ವೀರೇಶ್ವರ ಪುಣ್ಯಾಶ್ರಮ ನಿರ್ಮಾಣವಾಯಿತು. ಪಂಚಾಕ್ಷರಿ ಗವಾಯಿಗಳು ಗದಗಿನಲ್ಲಿ ನೆಲೆನಿಂತರು.

ಬಸವರಾಜ ರಾಜಗುರು ಪಂಚಾಕ್ಷರಿ ಗವಾಯಿಗಳಲ್ಲಿ 12 ವರ್ಷ ವಿದ್ಯಾಭ್ಯಾಸ ಗೈದು ಹೋಗುವಾಗ "ಗುರುಗಳೆ, ನಾನು ಬಡವ, ಗುರುದಕ್ಷಿಣೆ ನೀಡಲು ಹಣವಿಲ್ಲ" ಎಂದರು.

ಪಂಚಾಕ್ಷರಿ ಗವಾಯಿಗಳು "ನೀನು ಚಿಂತಿಸಬೇಡ. ನನ್ನಂತೆ ನೀನೂ ದುಡ್ಡಿಗಾಸೆಪಡದೆ ಜಾತಿವಿಜಾತಿಯೆನ್ನದೆ ವಿದ್ಯಾದಾನ ಮಾಡು. ಅದೇ ನೀನು ನನಗೆ ನೀಡುವ ಗುರುದಕ್ಷಿಣೆ" ಎಂದರು. ಈ ಪ್ರಸಂಗವನ್ನು ಹೇಳುವಾಗ ಬಸವರಾಜ ರಾಜಗುರು ಅವರ ಕಣ್ಣು ಹನಿಗೂಡುತ್ತಿದ್ದವು. ಅಂತೆಯೇ, ಬಸವರಾಜ ರಾಜಗುರು ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡಿದರು.

**ಆದ್ಯರ ವಚನ ಪರುಷ ಕಂಡಯ್ಯಾ :** ವಚನಪಿತಾಮಹ ಫ.ಗು. ಹಳಕಟ್ಟಿಯವರು ತಮ್ಮ ಪ್ರಥಮ ವಚನ ಸಂಗ್ರಹವನ್ನು ಹಾನಗಲ್ಲು ಕುಮಾರಸ್ವಾಮಿಗಳಿಗೆ ಅರ್ಪಿಸಿದ್ದರು. ಅದರ ಒಂದು ಪ್ರತಿಯನ್ನು ಪಂಚಾಕ್ಷರಿ ಗವಾಯಿಗಳಿಗೂ ಕಳಿಸಿದ್ದರು. ಕುಮಾರಸ್ವಾಮಿಗಳು ಬರಹೋಗುವ ಭಕ್ತಾದಿಗಳಿಗೆ ವಚನಗಳ ಮಹತ್ವವನ್ನು ತಿಳಿಸಿ ಹೇಳುತ್ತಿದ್ದರು. ಅದೆಲ್ಲದರ ಪ್ರಭಾವ ಪಂಚಾಕ್ಷರಿ ಗವಾಯಿಗಳ ಮೇಲಾಯಿತು. ಅವರ ಮನ ಅವುಗಳ ಸಂಗೀತಮಯತೆಯತ್ತ ಹರಿಯಿತು. ಅವುಗಳನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿ ಅಭಂಗ ಧಾಟಿಯಲ್ಲಿ ಹಾಡಲಾರಂಭಿಸಿದರು. ಹಾಗೆ ಮಾಡಿದವರಲ್ಲಿ ಅವರೇ ಪ್ರಥಮರು. ಅವರು ಸಿದ್ಧಪಡಿಸಿದ ಮೊದಲನೆಯ ವಚನವೆಂದರೆ, "ನಾದಪ್ರಿಯ ಶಿವನೆಂಬರು...." 1932ರಲ್ಲಿ ಬಸವ ಜಯಂತಿ ಉತ್ಸವಕ್ಕೆ ಸೊಲ್ಲಾಪುರದ ಶರಣಮ್ಮನವರಿಂದ ಆಮಂತ್ರಣ ಬಂದಿತು. ಪಂಚಾಕ್ಷರಿ ಗವಾಯಿಗಳು ವಾದ್ಯಮೇಳ ಸಿದ್ಧಪಡಿಸಿಕೊಂಡು ಹೋಗಿ ಸೊಲ್ಲಾಪುರದಲ್ಲಿ ಪ್ರಥಮ ಸಾರ್ವಜನಿಕ ವಚನ–ಗಾಯನ ಕಾರ್ಯಕ್ರಮ ನೀಡಿದರು. ಇಂದು ವಚನಗಳು ಎಷ್ಟು ಜನಪ್ರಿಯವಾಗಿವೆಯೆಂದರೆ ಅವುಗಳನ್ನು ಬಲ್ಲ ಸಂಗೀತಗಾರರು ತಮ್ಮ ಕಚೇರಿಯಲ್ಲಿ ಒಂದೋ ಎರಡೋ ವಚನ ಹಾಡುವುದು ಸರ್ವೇಸಾಮಾನ್ಯ. ಈ ಜನಪ್ರಿಯತೆಗೆ ಅಸ್ಥಿಭಾರ ಹಾಕಿದವರು ಪಂಚಾಕ್ಷರಿ ಗವಾಯಿಗಳು.

1933 ರಲ್ಲಿ ಪಂಚಾಕ್ಷರಿ ಗವಾಯಿಗಳಿಗೆ ಎಚ್.ಎಂ.ವಿ. ಕಂಪೆನಿಯಿಂದ ಧ್ವನಿಮುದ್ರಣಕ್ಕೆ ಆಮಂತ್ರಣ ಬಂದಿತು. ಒಂಭತ್ತು ಜನರ ಪರಿವಾರ ಪಯಣ ಬೆಳೆಸಿತು. ಪಂಚಾಕ್ಷರಿ ಗವಾಯಿಗಳು, ಪುಟ್ಟರಾಜ ಗವಾಯಿಗಳು, ಬಸವರಾಜ ರಾಜಗುರು, ಒಬ್ಬರು ಕಾರಕೂನರು, ಒಬ್ಬ ಅಡಿಗೆಯವ, ಒಬ್ಬ ನೀರು ನಿಗದಿ ಸೇವೆಯವ, ಒಬ್ಬ ಕ್ರಿಯಾಮೂರ್ತಿ, ಇಬ್ಬರು ವಿದ್ಯಾರ್ಥಿಗಳು, ಮುಂಬಯಿಯ ಕಾಲ್ಬಾದೇವಿ ರಸ್ತೆಯಲ್ಲಿ ಹತ್ತರಕಿ ನಂದೆಪ್ಪ (ಸಂಕೇಶ್ವರ ಹತ್ತಿರ) ಅಡದ ಅಂಗಡಿ ಇಟ್ಟಿದ್ದರು. ಅಲ್ಲಿಯೇ ವಾಸಕ್ಕೆ ಅನುಕೂಲ ಮಾಡಿಕೊಟ್ಟರು. ಪರಿವಾರದ ಊಟಕ್ಕೆ ವಾರದ ಮನೆ ವ್ಯವಸ್ಥೆಯಾಯಿತು.

ಪಂಚಾಕ್ಷರಿ ಗವಾಯಿಗಳು, ಪುಟ್ಟರಾಜ ಗವಾಯಿಗಳು, ಬಸವರಾಜ ರಾಜಗುರು ಮೂವರೂ ಧ್ವನಿಮುದ್ರಣ ನೀಡಬೇಕಿತ್ತು. ಮೂವರೂ ಎರಡೆರಡು ಕನ್ನಡ ಚೀಜುಗಳನ್ನು ಹಾಡುವಂತೆ ಪಂಚಾಕ್ಷರಿ ಗವಾಯಿಗಳು ನಿರ್ಧರಿಸಿದ್ದರು. ಇದನ್ನು ಕೇಳಿ ಎಚ್.ಎಂ.ವಿ. ಕಂಪನಿಯವರು ಗಾಬರಿಯಾಗಿ ಅದು ಸಾಧ್ಯವಿಲ್ಲ ಎಂದರು. ಹಾಗಾದರೆ, ಧ್ವನಿಮುದ್ರಣ ಬೇಡ ಎಂದು ಪಂಚಾಕ್ಷರಿ ಗವಾಯಿಗಳ ಪಟ್ಟು, ಕೊನೆಗೆ ಎಚ್.ಎಂ.ವಿ.ಯವರೆ ಮಣಿದು ಒಪ್ಪಿದರು.

ಪಂಚಾಕ್ಷರಿ ಗವಾಯಿಗಳು ಖಮಾಜ (ಹಿಂದೂಸ್ಥಾನಿ) ರಾಗದಲ್ಲಿ "ನೋಡಲಾಗದೆ ದೇವ" ಮತ್ತು ಪಟದೀಪ ರಾಗದಲ್ಲಿ "ಮಾಡಲಿಲ್ಲವೆ ತಪವ" ಹಾಡಿದರು. ಎರಡೂ ನಿಜಗುಣ ಶಿವಯೋಗಿಗಳ ಕೃತಿಗಳು. ಅಲ್ಲದೆ, ದರಬಾರ್ (ಕರ್ನಾಟಕಿ) ರಾಗದಲ್ಲಿ ತ್ಯಾಗರಾಜರ "ಲೋಚನ ಕಮಲಲೋಚನ" ಕೃತಿಯನ್ನೂ, ಬೇಗಡೆ (ಕರ್ನಾಟಕಿ) ರಾಗದಲ್ಲಿ "ತ್ಯಾಗರಾಜಾಯ ನಮಸ್ತೇ" ಕೃತಿಯನ್ನೂ ಹಾಡಿದರು.

ಪುಟ್ಟರಾಜ ಗವಾಯಿಗಳು ನಾಲ್ಕು ಹಿಂದೂಸ್ತಾನಿ ರಾಗಗಳನ್ನು ಹಾಡಿದರು: ದೇಸಕಾರ ರಾಗದಲ್ಲಿ ಘನಮಠಾರ್ಯರ "ಧ್ಯಾನವ ಮಾಡೋ ನಿಜಗುರು", ಜೀವನಪುರಿ ರಾಗದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ "ಮಗನ ತೂಗಿರೆ, ಬಾಗೇಶ್ರೀ ರಾಗದಲ್ಲಿ "ಚೈನ ನಹಿ ಮ್ಯೆ ತೋ ಆಯೋ ಪಿಯಾ ಬಿನ್" ಹಾಗೂ ಕೇದಾರ ರಾಗದಲ್ಲಿ "ಕಂಗನಾ ಮೋರಾ".

ಬಸವರಾಜ ರಾಜಗುರು ಕುಮಾರಸ್ವಾಮಿಗಳ ಎರಡು ಸ್ತೋತ್ರಗಳನ್ನು ಹಿಂದುಸ್ಥಾನಿ ಪದ್ಧತಿಯಲ್ಲಿ ಹಾಡಿದರು. ದೇಸಕಾರ ರಾಗದಲ್ಲಿ "ಹಾನಗಲ್ಲ ಶ್ರೀ ಕುಮಾರದೇವ", ಖಮಾಜ ರಾಗದಲ್ಲಿ "ಶ್ರೀ ಕುಮಾರದೇವ".

ಈಗ ಕೂಡ ಗಾಯಕರು ಕನ್ನಡ ಚೀಜುಗಳನ್ನು (ವಚನಗಳನ್ನುಳಿದು) ಹಾಡಲು ಹಿಂದೇಟು ಹಾಕುತ್ತಾರೆ. ಹಿಂದೂಸ್ತಾನಿಯವರಾದರೆ ಹಿಂದಿ, ಮರಾಠಿ ಚೀಜುಗಳನ್ನು, ಕರ್ನಾಟಕಿಯವರಾದರೆ ತೆಲುಗು, ತಮಿಳು ಕೃತಿಗಳನ್ನು ಹಾಡಿಯಾರು. ಈ ಹಿನ್ನೆಲೆಯಲ್ಲಿ ಅರವತ್ತು ವರ್ಷಗಳ ಹಿಂದೆಯೇ ಪಂಚಾಕ್ಷರಿ ಗವಾಯಿಗಳು ಕನ್ನಡ ಡಿಂಡಿಮವನ್ನು ಬಾರಿಸಿದುದು ಅಚ್ಚರಿ ಉಂಟುಮಾಡುತ್ತದೆ.

**ವಿದ್ವಾನ್ ಸರ್ವತ್ರ ಪೂಜ್ಯತೇ :** ಪಂಚಾಕ್ಷರಿ ಗವಾಯಿಗಳು ಕೀರ್ತಿಗೆ ಹಾತೊರೆದವರಲ್ಲ. ಪ್ರಶಸ್ತಿಗಳು ಅವರನ್ನು ಅರಸಿ ಬಂದವು. "ಅವರಿಗೇನು ಹಾಡಲು ಬರುತ್ತದೆ?" ಎನ್ನುವ ಅಸಡ್ಡೆಯ ಮಾತುಗಳು ಹಾನಗಲ್ಲ ಕುಮಾರಸ್ವಾಮಿಗಳ ಕಿವಿಗೆ ಬಿದ್ದವು. ಅದಕ್ಕವರು ರಾಯಚೂರು ಬಳಿಯ ರಾಮಗಡ್ಡಿಯಲ್ಲಿ (ಸು. 1915) ಒಂದು ವಿದ್ವತ್ಸಭೆ ಏರ್ಪಡಿಸಿ ಟೀಕೆ ಮಾಡುತ್ತಿದ್ದ ವಿದ್ವಾಂಸರನ್ನೆಲ್ಲ ಅಲ್ಲಿಗೆ ಆಮಂತ್ರಿಸಿದರು. ಪಂಚಾಕ್ಷರಿ ಗವಾಯಿಗಳ ಗಾಯನವನ್ನು ಕೇಳಿದ ಮೇಲೆ ಶ್ರೋತೃಗಳಿಗೆ ಇತರರ ಗಾಯನ ಹಿಡಿಸಲಿಲ್ಲ. ಶ್ರೀಗಳವರು ವಿದ್ವಾಂಸರನ್ನು ಉದ್ದೇಶಿಸಿ "ನಮ್ಮ ಗವಾಯಿಗಳನ್ನು ಶಾಸ್ತ್ರಜ್ಞಾನದಲ್ಲಿ ಪರೀಕ್ಷಿಸಬೇಕಿದ್ದರೆ ಪರೀಕ್ಷಿಸಬಹುದು" ಎಂದರು. ಅಲ್ಲಿ ನೆರೆದಿದ್ದ ಪಂಡಿತರು ಮೂರು ದಿನ ಪ್ರಶ್ನೆಗಳ ಸುರಿಮಳೆಗೈದರು. ಅವೆಲ್ಲವುಗಳಿಗೂ ಪಂಚಾಕ್ಷರಿ ಗವಾಯಿಗಳು ಸಮರ್ಪಕ ಉತ್ತರ ನೀಡಿದರು. ವಿದ್ವಾಂಸರೆಲ್ಲರೂ ಕೂಡಿ ಪಂಚಾಕ್ಷರಿ ಗವಾಯಿಗಳಿಗೆ "ಪಂಡಿತ" ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಪಂಚಾಕ್ಷರಿ ಗವಾಯಿಗಳಿಗೆ ಉಭಯ ಗಾಯನವಿಶಾರದ, ಸಂಗೀತರತ್ನ, ಸಂಗೀತ ಸಾಮ್ರಾಟ, ಲಲಿತಕಲಾ ಪಿತಾಮಹ, ಗಾನಯೋಗಿ, ಭೂಗಂಧರ್ವ ಚಂದ್ರ, ಗಾನಕಲಾನಿಧಿ,

ಸಂಗೀತಸಾಗರ, ಸಂಗೀತ ಸುಧಾನಿಧಿ, ಗಾಯನಾಚಾರ್ಯ, ಉಭಯ ಗಾಯನಾಚಾರ್ಯ ಮೊದಲಾದ ಬಿರುದುಗಳು ಬಂದವು.

"ಸ್ವದೇಶೇ ಪೂಜ್ಯತೇ ರಾಜಾ, ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬ ಮಾತಿನಂತೆ ಪಂಚಾಕ್ಷರಿ ಗವಾಯಿಗಳ ವಿದ್ವತ್ತಿನ ಖ್ಯಾತಿ ಎಲ್ಲೆಡೆ ಪಸರಿಸಿತು. ನಾಡಿನಾದ್ಯಂತ ಅವರ ಸಂಗೀತ ಕಚೇರಿಗಳು ಏರ್ಪಟ್ಟವು. ಗಜೇಂದ್ರಗಡದ ರಾಜರಾದ ಭುಜಂಗರಾವ್ ಘೋರ್ಪಡೆ ಅವರ ಮನೆಯಲ್ಲಿ ಜರುಗಿದ ವಿವಾಹ ಸಮಾರಂಭದ ನಿಮಿತ್ತ ಸಂಗೀತ ಕಚೇರಿ ಏರ್ಪಡಿಸಿದ್ದರು. ಗಂಡಿನವರ ಪರವಾಗಿ ಪಂಚಾಕ್ಷರಿ ಗವಾಯಿಗಳನ್ನು, ಹೆಣ್ಣಿನವರ ಪರವಾಗಿ ಅಬ್ದುಲ್ ಕರೀಂಖಾನರನ್ನು ಆಮಂತ್ರಿಸಲಾಗಿತ್ತು. ಅಬ್ದುಲ್ ಕರೀಂಖಾನರು ಕರ್ನಾಟಕಿ ಸಂಗೀತವನ್ನೇನು ಕೇಳುವುದು ಎಂದು ತಮ್ಮ ಕೋಣೆಯಲ್ಲಿಯೇ ಕುಳಿತರು. ಪಂಚಾಕ್ಷರಿ ಗವಾಯಿಗಳ ಗಾಯನದಿಂದ ಆಕರ್ಷಿತರಾಗಿ ಬಂದು, ಕೇಳಿ ಆನಂದಿಸಿದರು.

1920. ಗೋಕಾಕದಲ್ಲಿರುವ ಕೊಣ್ಣೂರ ಮರಡಿ ಮಠದಲ್ಲಿ ಜಾತ್ರೆ. ಪಂಚಾಕ್ಷರಿ ಗವಾಯಿಗಳ ಗಾಯನ, ಮೈಸೂರಿನಿಂದ ವಿದ್ವಾನ್ ರಾಚಪ್ಪನವರನ್ನೂ ಆಮಂತ್ರಿಸಿದ್ದರು. ಅವರು "ನಮ್ಮ ಮೈಸೂರು ಆಸ್ಥಾನದಲ್ಲಿ ಕೂಡ ಪಂಚಾಕ್ಷರಿ ಗವಾಯಿಗಳಂತಹವರು ವಿರಳ" ಎಂದು ಉದ್ಗರಿಸಿದರು.

ಒಮ್ಮೆ ಹುಬ್ಬಳ್ಳಿಯ ಗಣೇಶ ಥಿಯೇಟರಿನಲ್ಲಿ ಬಾಲಗಂಧರ್ವ ನಾಟಕ ಕಂಪನಿ ಬಿಡಾರ ಹೂಡಿತ್ತು. ಪಂಚಾಕ್ಷರಿ ಗವಾಯಿಗಳ ವಾಸ್ತವ್ಯವೂ ಹುಬ್ಬಳ್ಳಿಯಲ್ಲಿತ್ತು. ಸರಿ, ಒಂದು ರಾತ್ರಿ ನಾಟಕ ನೋಡಲು ಹೋದರು. ನೋಡುವುದೇನು ಬಂತು? ಕೇಳುವುದು ತಾನೆ? ಸಂಗೀತನಾಟಕವೆಂದ ಮೇಲೆ ಕುಳಿತರೆ ಹಾಡು, ನಿಂತರೆ ಹಾಡು. ಬಾಲಗಂಧರ್ವರ ಮಧುರ ಗಾಯನಕ್ಕೆ ಪಂಚಾಕ್ಷರಿ ಗವಾಯಿಗಳು ಮಾರುಹೋದರು. ಪ್ರತಿ ರಾತ್ರಿಯ ಮೊದಲ ಸಾಲಿನ ನಡುವಿನ ಆಸನದಲ್ಲಿ ಹಾಜರ್, ವ್ಹಾಹವಾ, ವ್ಹಾಹವಾ ಎಂದು ಮೆಚ್ಚಿಗೆ ಸೂಸಬೇಕು. ಬಾಲಗಂಧರ್ವರು "ತೇ ಕೋಣ್? (ಯಾರವರು)" ಎಂದು ಕೇಳಿ ತಿಳಿದುಕೊಂಡರು. ಕ್ಯಾಂಪು ಮುಗಿಯುತ ಕೊನೆಯ ರಾತ್ರಿ ಪಂಚಾಕ್ಷರಿ ಗವಾಯಿಗಳನ್ನು ರಂಗಮಂಚದ ಮೇಲೆ ಬರಮಾಡಿಕೊಂಡು ಜರತಾರಿ ರೇಷ್ಮೆ ಮಡಿ ಆಹೇರ ಮಾಡಿ ಗೌರವಿಸಿದರು. ಪಂಚಾಕ್ಷರಿ ಗವಾಯಿಗಳಿಂದ ಕರ್ನಾಟಕಿ ಕೀರ್ತನೆಗಳನ್ನು ಹೇಳಿಸಿಕೊಂಡರು. ಅಲ್ಲದೆ, "ಮರುಗೇಲರಾ ಓ ರಾಘವಾ" ಕೃತಿಯನ್ನು ಮರಾಠಿಗೆ ಅನುವಾದಿಸಿಕೊಂಡರು.

12.4.1939 ರಂದು ವರಕವಿ ದ.ರಾ. ಬೇಂದ್ರೆಯವರು ಪತ್ರ ಬರೆದು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. "ಪೂಜ್ಯ ಮತ್ತು ಸರ್ವಮಾನ್ಯರಾದ ಗವಾಯಿಗಳ ಹಾಗೂ ಶಿಷ್ಯವರ್ಗದ ಸಂಗೀತ ಸಾಹಿತ್ಯ ಕಚೇರಿಗಳನ್ನು ಅನೇಕ ಕಡೆ ಸಂದರ್ಶಿಸಿದ್ದೇನೆ. ಈ ಶ್ಲಾಘನೀಯವಾದ ಲೋಕೋಪಕಾರ ಕಾರ್ಯಕ್ಕೆ ಜಗದ್ರಕ್ಷಕನು ಸದಾಕಾಲದಲ್ಲಿಯೂ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನೀಯಲಿ."

1939. ಸಂಗೀತ ಶಾಲೆಯ ರಜತೋತ್ಸವ. ವಚನಪಿತಾಮಹ ಫ.ಗು. ಹಳಕಟ್ಟಿ ಆ ಸಂದರ್ಭದಲ್ಲಿ ಅಭಿನಂದಿಸಿದ್ದು ಹೀಗೆ: "ಈ ಶಾಲೆಯನ್ನು ಗಾಯನವಿಶಾರದ ಪಂಚಾಕ್ಷರಿ ಗವಾಯಿಗಳು ಅವ್ಯಾಹತವಾಗಿ ಈವರೆಗೂ ನಡೆಸುತ್ತ ಬಂದಿದ್ದಾರೆ. ಉತ್ತರ ಕರ್ನಾಟಕದಲ್ಲಿ ಈ ಬಗೆಯ ಕಾರ್ಯ ಮಾಡುವ ಸಂಸ್ಥೆಯೆಂದರೆ ಇದೊಂದೇ ಆಗಿರುತ್ತದೆ. ಕೇವಲ ಸಾರ್ವಜನಿಕ ಹಿತದೃಷ್ಟಿಯನ್ನು ಇಟ್ಟುಕೊಂಡು ಈ ಶಾಲೆಯನ್ನು ನಡೆಸುತ್ತಿರುವುದು ಅಭಿನಂದನೀಯವಾಗಿದೆ."

5.4.1939ರಂದು ಕೊಪ್ಪಳ ಮುಕ್ಕಾಮಿನಿಂದ ಗರೂಡ ಸದಾಶಿವರಾಯರು ಪಂಚಾಕ್ಷರಿ ಗವಾಯಿಗಳಿಗೆ ಅಭಿನಂದನ ಪತ್ರ ಬರೆದಿದ್ದರು. "ತಮ್ಮ ಉತ್ಕಟವಾದ ಕಲಾಪ್ರೇಮಕ್ಕೆ ಮಹಾ ತಪಸ್ವಿಗಳಾದ ಹಾನಗಲ್ಲ ಕುಮಾರಸ್ವಾಮಿಗಳ ಆಶೀರ್ವಾದ ಬಲವಿರುವುದರಿಂದ ಭೌತಿಕ ನಯನವಿಹೀನರಾದ ತಾವು ದಿವ್ಯವಾದ ಜ್ಞಾನಚಕ್ಷುಗಳನ್ನು ಪಡೆದವರಾಗಿ ಅಖಂಡವಾಗಿ ಜನತಾಜನಾರ್ದನನ ಸೇವೆ ಮಾಡುತ್ತ ಧನ್ಯರೆಂದೆನಿಸಿರುವಿರಿ. ಇದೇ ಸದ್ಗತಿಯ ತಳಹದಿ. ತಮ್ಮ ಸಂಗೀತ ವಿದ್ಯಾಲಯದಲ್ಲಿ ಗವಾಯಿಗಳೂ, ಪುರಾಣಿಕರೂ, ಕೀರ್ತನಕಾರರೂ ತಯಾರ ಆಗುವಂತೆ ನಾಟ್ಯಕಲೆ ಸೇವೆಯನ್ನು ಮಾಡುವ ಸಂಗೀತಜ್ಞ, ಸುಶೀಲ, ಸದೃಢ, ಸುಸ್ವರೂಪಿಗಳಾದ ಅಭಿನಯಕಲಾಪಟುಗಳಾದ ನಟರು ತಯಾರಾಗಿ ಲೋಕಸೇವೆಯನ್ನು ಮಾಡಲುದ್ಯುಕ್ತರಾದರೆ ನಾಟ್ಯಸಂಸ್ಥೆಗಳ ನೈರ್ಮಲ್ಯ ಹೆಚ್ಚಿ ಅವು ಲೋಕಾಧರಕ್ಕೆ ಪಾತ್ರವಾಗಿ ಲೋಕಶಿಕ್ಷಣವು ಕ್ರಮಬದ್ಧವಾಗಬಹುದು."

**ವಜ್ರಾದಪಿ ಕಠೋರಾಣಿ :** ಹೂವಿಗಿಂತ ಮೃದುವಾಗಿದ್ದ ಪಂಚಾಕ್ಷರಿ ಗವಾಯಿಗಳ ಮನಸ್ಸು, ಕೊಟ್ಟ ಭಾಷೆ ತಪ್ಪಿದವರ ವಿಷಯದಲ್ಲಿ, ಎರಡು ಬಗೆದವರ ವಿಷಯದಲ್ಲಿ, ಅನ್ಯಾಯದಿಂದ ನಡೆದುಕೊಂಡವರ ವಿಷಯದಲ್ಲಿ ವಜ್ರಕ್ಕಿಂತ ಕಠೋರವಾದ ಪ್ರಸಂಗಗಳಿವೆ.

ಗದಗಿನ ವರ್ತಕರೊಬ್ಬರು ದೇಣಿಗೆ ನೀಡುವುದಾಗಿ ವಾಗ್ದಾನ ಮಾಡಿದ್ದರು. ಪಂಚಾಕ್ಷರಿ ಗವಾಯಿಗಳು ಅದನ್ನು ಪಡೆಯಲೋಸುಗ ಒಮ್ಮೆ ಅವರ ಮನೆಗೆ ಹೋದರು. ವರ್ತಕರು ಮನೆಯಲ್ಲಿರಲಿಲ್ಲ. ವರ್ತಕರ ಮಗ "ನನ್ನ ತಂದೆಗೆ ಬುದ್ಧಿಯಿಲ್ಲ. ನಮ್ಮ ವ್ಯಾಪಾರವೇ ಚನ್ನಾಗಿರದಾಗ ದೇಣಿಗೆ ನೀಡುವುದಾಗಿ ಅದು ಹೇಗೆ ಮಾತು ಕೊಟ್ಟ ?" ಎಂದು ಬಿರುನುಡಿದ. ಮಗನು ತಂದೆಯ ಔದಾರ್ಯವನ್ನು ಜರೆದು ಮಾತಾಡಿದುದು ಪಂಚಾಕ್ಷರಿ ಗವಾಯಿಗಳಿಗೆ ದುಃಖವನ್ನುಂಟುಮಾಡಿತು. "ಇನ್ನು ಮುಂದೆ ನಾನು ಮಾತ್ರವಲ್ಲ ನನ್ನ ಬೆತ್ತ ಸಹ ನಿಮ್ಮ ಹೊಸ್ತಿಲ ತುಳಿಯುವುದಿಲ್ಲ" ಎಂದವರೆ ಅಲ್ಲಿ ಒಂದು ಕ್ಷಣವೂ ನಿಲ್ಲದೆ ಹೊರಟುಬಿಟ್ಟರು.

ಪಂಚಾಕ್ಷರಿ ಗವಾಯಿಗಳು ಲಿಂಗೈಕ್ಯರಾದ ಹಲವು ವರ್ಷಗಳ ಬಳಿಕ ಪುಟ್ಟರಾಜ ಗವಾಯಿಗಳು ಆ ಮನೆಗೆ ಬಿನ್ನಹಕ್ಕೆ ಬಂದಿದ್ದರು. ಪಂಚಾಕ್ಷರಿ ಗವಾಯಿಗಳು ಆಶೀರ್ವದಿಸಿ ನೀಡಿದ ಬೆತ್ತವನ್ನು ಪುಟ್ಟರಾಜ ಗವಾಯಿಗಳು ಎಲ್ಲಿಯೇ ಹೋಗಲಿ ಬಿಟ್ಟು ಹೋದವರಲ್ಲ.

ಅಂದು ಒಂದು ಆಶ್ಚರ್ಯ ಘಟಿಸಿತ್ತು. ವರ್ತಕರ ಮನೆ ತಲುಪಿದಾಗ ಬಂಡಿಯಲ್ಲಿ ಕೈಯಾಡಿಸುತ್ತಾರೆ, ಬೆತ್ತವೇ ಇಲ್ಲ. ಗುರುಗಳ ಬೆತ್ತವನ್ನು ಅಲಕ್ಷ್ಯತನದಿಂದ ಕಳೆದುಕೊಂಡೆನಲ್ಲ ಎಂಬ ದುಗುಡ, ಬಿನ್ನಹ ತೀರಿಸಿಕೊಂಡು ವಾಪಸು ಹೋಗುವಾಗ ಹಾದಿಯಲ್ಲಿ ಬಿದ್ದಿದ್ದ ಬೆತ್ತ ಕಾಣಿಸಿತು. ಅದನ್ನು ನೋಡಿದ ಶಿಷ್ಯನೊಬ್ಬ ಪುಟ್ಟರಾಜ ಗವಾಯಿಗಳಿಗೆ ಅದನ್ನು ತಂದುಕೊಟ್ಟ. ಕಳೆದುಹೋದ ರತ್ನ ದೊರಕಿದಂತೆ ಖುಷಿಪಟ್ಟ ಪುಟ್ಟರಾಜ ಗವಾಯಿಗಳಿಗೆ "ನನ್ನ ಬೆತ್ತ ಸಹ ನಿಮ್ಮ ಹೊಸ್ತಿಲ ದಾಟುವುದಿಲ್ಲ" ಎಂಬ ಪಂಚಾಕ್ಷರಿ ಗವಾಯಿಗಳ ಪ್ರತಿಜ್ಞೆ ಜ್ಞಾಪಕಕ್ಕೆ ಬಂತು.

ಶಿರಹಟ್ಟಿಯಲ್ಲೊಮ್ಮೆ ಪಂಚಾಕ್ಷರಿ ಗವಾಯಿಗಳ ನಾಟಕ ಕಂಪನಿ ಕ್ಯಾಂಪು ಮಾಡಿತ್ತು. ಅವರ ಬಿಡಾರದ ಬಳಿಯಲ್ಲಿಯೇ ಒಂದು ಸಾರ್ವಜನಿಕ ಬಾವಿಯಿತ್ತು. ನಾಟಕ ಕಂಪನಿ ಸಿಬ್ಬಂದಿ ಅಲ್ಲಿಯ ಸ್ನಾನ ಮಾಡುತ್ತಿದ್ದರು, ಬಟ್ಟೆ ಒಗೆಯುತ್ತಿದ್ದರು. ಇದರಿಂದ ಬಾವಿಯ ಸುತ್ತಲೂ ಕೊಳಚೆಯಾಯಿತು. ಪುರಸಭೆಯವರು ಪಂಚಾಕ್ಷರಿ ಗವಾಯಿಗಳಿಗೆ "ಸಾರ್ವಜನಿಕವಾಗಿ ಕ್ಷಮಾಪಣೆ ಕೇಳಬೇಕು, ಇಲ್ಲವೆ 50 ರೂ. ದಂಡ ತೆರಬೇಕು" ಎಂದು ನೋಟೀಸು ಕೊಟ್ಟರು. ಪಂಚಾಕ್ಷರಿ ಗವಾಯಿಗಳು ಪುರಸಭೆ ಕಚೇರಿಗೆ ಹೋಗಿ ತಿಳಿಸಿಹೇಳಿ ಇನ್ನೊಮ್ಮೆ ಹೀಗಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ಕೊಟ್ಟರೂ ಅಧಿಕಾರಿಗಳು ಜಪ್ಪೆನ್ನಲಿಲ್ಲ.

ಅಂದು ರಾತ್ರಿ, ಇನ್ನೇನು ಪರದೆ ಸರಿಯಬೇಕು, ಪಾತ್ರಗಳು ಪ್ರವೇಶಿಸಬೇಕು. ಪರದೆ ಸರಿಯಿತು. ಆದರೆ ಪ್ರವೇಶಿಸಿದವರು ಪಂಚಾಕ್ಷರಿ ಗವಾಯಿಗಳು. "ಸಹೃದಯಿ ಸಾರ್ವಜನಿಕರೆ, ನಮ್ಮ ಶಿಷ್ಯವೃಂದ ನಿಮಗೆ ಉಂಟುಮಾಡಿದ ತೊಂದರೆಗೆ ನಾನು ವಿಷಾದಿಸುತ್ತೇನೆ. ನಮಗೆ ತುಂಬ ಬೇಸರವಾಗಿರುವುದರಿಂದ ಇಲ್ಲಿ ನಾವು ನಾಟಕ ಆಡಲು ಇಷ್ಟಪಡುವುದಿಲ್ಲ. ಈಗಲೇ ಇಲ್ಲಿಂದ ಹೊರಟು ಗದಗಿನಲ್ಲಿಯೇ ಶಿವಪೂಜೆ ಮಾಡುವೆವು. ನೀವು ನಾಟಕಕ್ಕೆ ಕೊಟ್ಟ ಪ್ರವೇಶಧನ ವಾಪಸು ಕೊಡುತ್ತೇವೆ."

ಅಂದು ಎಂಟುನೂರು ರೂ. ಸಂಗ್ರಹವಾಗಿತ್ತು.

**ಬಣ್ಣಿಸಲದೆಂತು ನಿನ್ನ ಮಹಿಮೆಯನು? :** ಒಮ್ಮೆ ನಿಡಗುಂದಿಕೊಪ್ಪದಲ್ಲಿರುವಾಗ ಪಂಚಾಕ್ಷರಿ ಗವಾಯಿಗಳ ಶಿಷ್ಯರು ಸ್ನಾನಕ್ಕೆಂದು ಬಾವಿಗೆ ಹೋಗಿದ್ದರು. ಈಜಾಟದಲ್ಲಿ ನಿರತರಾಗಿರುವಾಗ ಎಲಿವಾಳ ಬಸವಣ್ಣೆಯ್ಯನ ಲಿಂಗ ಕಳಚಿ ತಳ ಸೇರಿತು. ಎಲ್ಲ ಹುಡುಗರೂ ಎಷ್ಟು ಸಾರೆ ಮುಳುಗಿ ಹುಡುಕಿದರೂ ಸಿಗಲಿಲ್ಲ. ಲಿಂಗವಿಲ್ಲದೆ ಪ್ರಸಾದವಿಲ್ಲ. ಗುರುಗಳೇನೆನ್ನುವರೋ ಎನ್ನುವ ಭಯ. ಈ ವಾರ್ತೆ ತಿಳಿದು ಪಂಚಾಕ್ಷರಿ ಗವಾಯಿಗಳೇ ಬಾವಿಯ ಬಳಿಗೆ ಧಾವಿಸಿದರು. "ಏನ ಹೇಳತೀರಿ? ಭಕ್ತಿಯಿಂದ ಹುಡುಕಿದರೆ ದೀನಬಂಧು ಲಿಂಗಯ್ಯ ಸಿಗಲಾರನೆ? ಮುಳುಗಿರಿ ಈ ಸಲ, ನೋಡೋಣ" ಎಂದು ಹುರಿದುಂಬಿಸಿದರು. ಬಾವಿಯ ತಳದಲ್ಲಿದ್ದ ಲಿಂಗಯ್ಯ ಒಬ್ಬನ ಕೈಗೆ ಹತ್ತಿದ. ಶಿಷ್ಯರು ಗುರುವಿನ ಮಹಿಮೆಯನ್ನು ಕೊಂಡಾಡಿದರು.

ಒಮ್ಮೆ ಪಂಚಾಕ್ಷರಿ ಗವಾಯಿಗಳು ಭಿಕ್ಷಕ್ಕೆ ಬರುವುದಾಗಿ ಹೊಂಬಳ ಗ್ರಾಮದವರಿಗೆ ಹೇಳಿಕಳಿಸಿದರು. ಆಗ ಅಲ್ಲಿ ಅನಾವೃಷ್ಟಿ. ಜನ ಮುಗಿಲ ಮಾರಿಯನ್ನೇ ನೋಡುತ್ತಿದ್ದರು. ಹೊಂಬಳದ ಭಕ್ತರು "ತಾವು ದಯಮಾಡಿಸುವುದಾದರೆ ಜೊತೆಗೆ ಮಳೆರಾಯನನ್ನೂ ಕರೆದುಕೊಂಡು ಬರಬೇಕು. ಅಂದರೆ ಜನ ಹಾಡಿ ಹರಸ್ಯಾರು" ಎಂದು ಅರಿಕೆ ಮಾಡಿಕೊಂಡರು. ಗವಾಯಿಗಳು "ಕುಮಾರೇಶನ ಕರುಣೆಯಿದ್ದರೆ ಮಳೆಗೇನು ಬರ. ಅದೂ ಆಗಬಹುದು" ಎಂದು ಪರಿವಾರದೊಡನೆ ಹೊಂಬಳಕ್ಕೆ ಹೊರಟರು. ಅವರು ಬಂದ ರಾತ್ರಿಯೆ ಮಳೆ ರಪರಪ ಸುರಿಯಿತು.

ಆ ತಿಂಗಳ ಕೊನೆಯ ಪಾಡ್ಯದ ದಿನ "ಸಿದ್ಧರಾಮೇಶ್ವರ" ನಾಟಕ ಆಡುವುದೆಂದು ನಿರ್ಧರಿತವಾಗಿತ್ತು. ಮಳೆ ಬಿಟ್ಟಿರಲಿಲ್ಲ. ನಾಟಕ ಬೇಡವೆಂದರು ಗ್ರಾಮಸ್ಥರು. ಆಡಿಯೇ ತೀರುವುದೆಂದರು ಪಂಚಾಕ್ಷರಿ ಗವಾಯಿಗಳು. ಗದಗಿನಿಂದ ನಾಟಕದ ಸರಂಜಾಮು ಬಂತು. ನಾಟಕ ಆರಂಭವಾಯಿತು. ಸ್ವತಃ ಪಂಚಾಕ್ಷರಿ ಗವಾಯಿಗಳೆ ತಬಲಾಕ್ಕೆ ಕುಳಿತರು. ಪುಟ್ಟರಾಜ ಗವಾಯಿಗಳು ಹಾರ್ಮೋನಿಯಂ ಬಾರಿಸಿದರು. ಜನ ಕಿಕ್ಕಿರಿದಿತ್ತು. ಬೆಳಿಗ್ಗೆ ಮೂರು ಗಂಟೆಗೆ ನಾಟಕ ಮುಕ್ತಾಯವಾಯಿತು. ಊರ ಪ್ರಮುಖರು ಗವಾಯಿಗಳನ್ನು ಅಭಿನಂದಿಸಿದರು. ಆಗ ಗವಾಯಿಗಳು ಇನ್ನು ಕೂಡಲೆ ಮನೆ ಸೇರಿರಿ. ಮಳೆರಾಯ ನಾಟಕ ಮುಗಿಯುವ ದಾರಿಯನ್ನೇ ನೋಡುತ್ತಿದ್ದಾನೆ" ಎಂದು ನಕ್ಕು ಹೇಳಿದರು. ಎಲ್ಲರೂ ಮನೆ ಸೇರಿದ್ದರೋ ಇಲ್ಲವೊ, ಮಳೆ ಧೋ ಎಂದು ಸುರಿಯಬೇಕೆ ?

ಪಂಚಾಕ್ಷರಿ ಗವಾಯಿಗಳು ಎರಡು ಕಾಯಕ ಮಾಡುತ್ತಿದ್ದರು. ಒಂದು, ಸಂಗೀತ ವಿದ್ಯಾದಾನ. ಎರಡು, ಸಂಗೀತಶಾಲೆಗೆ ಧನಸಂಗ್ರಹ. ಒಮ್ಮೆ ಅವರ ನಾಟಕ ಕಂಪನಿ ಧಾರವಾಡ ಜಿಲ್ಲೆಯಲ್ಲಿ ಸಂಚರಿಸಬೇಕಿತ್ತು. ಒಬ್ಬ ಮಹನೀಯರು ದೇಣಿಗೆ ನೀಡುವುದಾಗಿ ವಚನವಿತ್ತಿದ್ದರು. ಅವರ ಊರಿಗೆ ಪಂಚಾಕ್ಷರಿ ಗವಾಯಿಗಳು ಹೋದರು. ಅವರು ಊರಲ್ಲಿರಲಿಲ್ಲ. ಕಿಸೆಯಲ್ಲಿ ಒಂದು ಒಡಕು ಕಾಸೂ ಇಲ್ಲ. ಇನ್ನು ಏನು ಮಾಡಬೇಕೆಂದು ಚಿಂತಾಕ್ರಾಂತರಾಗಿ ರೈಲ್ವೆ ನಿಲ್ದಾಣದ ಕಲ್ಲುಬೆಂಚಿನ ಮೇಲೆ ಕುಮಾರೇಶನನ್ನು ನೆನೆಯುತ್ತ ಕುಳಿತರು. ಒಬ್ಬ ವ್ಯಕ್ತಿ ಬಂದು, "ನೀವು ಪಂಚಾಕ್ಷರಿ ಗವಾಯಿಗಳಲ್ಲವೆ ?" ಎಂದು ಕೇಳಿದ. "ಹೌದಪ್ಪಾ, ಏನಾಗಬೇಕಿತ್ತು ?" "ಬಳ್ಳಾರಿಯ ಒಬ್ಬ ಶ್ರೀಮಂತರು ಇನ್ನೂರು ರೂಪಾಯಿ ಕಳಿಸಿದ್ದಾರೆ. ದಯವಿಟ್ಟು ಸ್ವೀಕರಿಸಬೇಕು." ಪಂಚಾಕ್ಷರಿ ಗವಾಯಿಗಳಿಗೆ ಹೋದ ಜೀವ ಮರಳಿದಂತಾಯಿತು. ಊರಿಗೆ ಬಂದ ತಕ್ಷಣ ಬಳ್ಳಾರಿಯ ಶ್ರೀಮಂತರಿಗೆ ಕೃತಜ್ಞತಾ ಪತ್ರ ಬರೆದರು. ಕೆಲವು ದಿನಗಳಾದ ಮೇಲೆ ಒಂದು ಆಶ್ಚರ್ಯ ಕಾದಿತ್ತು. ಬಳ್ಳಾರಿಯಿಂದ ಉತ್ತರ ಬಂತು :

"ಪೂಜ್ಯ ಮಹನೀಯರೆ,

ನೀವು ಹಣಕ್ಕಾಗಿ ಬರೆದ ಪತ್ರ ತಲುಪಲಿಲ್ಲ. ನಾನು ಹಣ ಕಳಿಸಲಿಲ್ಲ. ನಮಗೆ ಹಣ ಬಂದಿದೆಯೆಂದು ಬರೆಯುತ್ತೀರಿ. ನಿಮಗೆ ನನ್ನ ಹೆಸರಿನಲ್ಲಿ ಯಾರು ಹಣ ಕೊಟ್ಟರೋ

ಅದೂ ತಿಳಿಯದು."

ಹಣ ಕೊಟ್ಟವರಾರೆಂಬುದು ಕೊನೆಯವರೆಗೂ ನಿಗೂಢವಾಗಿಯೇ ಉಳಿಯಿತು. ಎಲ್ಲವೂ ಕುಮಾರೇಶನ ಕೃಪೆಯೆಂದು ಪಂಚಾಕ್ಷರಿ ಗವಾಯಿಗಳು ಬಗೆದರು.

**ಪರಿಪೂರ್ಣದೆಡೆಗೆ :** ಬಾಲಕ ಗದಿಗೆಯ್ಯನಾಗಿದ್ದವನು ಕುಮಾರಸ್ವಾಮಿಗಳ ಅನುಗ್ರಹದಿಂದ ಪರುಷ ಮುಟ್ಟಿದ ಲೋಹದಂತಾದ. ಪಂಚಾಕ್ಷರಿ ಗವಾಯಿಗಳಾಗಿ ಮಾರ್ಪಟ್ಟ, ಮದುವೆಯಾಗ ಬೇಕೆಂಬ ಯೌವನಸಹಜ ಆಸೆ ಅಂಕುರಿಸಿತು. ಆದರೆ ಕಣ್ಣ ಮುಂದಣ ಮಾಯೆಯ ಪರದೆ ಹರಿಯಿತು. ಕಾಮವನ್ನು ಮೆಟ್ಟಿ ನಿಂತರು. ಅಪ್ಪಟ ಬ್ರಹ್ಮಚರ್ಯ ವ್ರತಿಗಳಾದರು. ಚಂಚಲಚಿತ್ತವು ಶಿವಯೋಗದಲ್ಲಿ ತದೇಕಚಿತ್ತವಾಯಿತು. ಲಿಂಗಾಂಗಸಮರಸರಾದರು.

ಕುಮಾರಸ್ವಾಮಿಗಳ ಉಪದೇಶಾಮೃತದಂತೆ ಜಾತಿವಿಜಾತಿಯೆನ್ನದೆ ಸರ್ವ ಜಾತಿಗಳ ಮಕ್ಕಳನ್ನು ತಮ್ಮ ಶಾಲೆಗೆ ಸೇರಿಸಿಕೊಂಡು, ಎಂಥ ಕಷ್ಟಕಾಲದಲ್ಲೂ ಅನ್ನದಾನ, ವಿದ್ಯಾದಾನ ಮಾಡಿದರು. ತಮ್ಮ ನಂತರವೂ ಆ ಕಾರ್ಯ ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಟ್ಟು ಹೋದರು. ಪಂಚಾಕ್ಷರಿ ಗವಾಯಿಗಳ ಏಕಮೇವಾದ್ವಿತೀಯ ಆಶ್ರಮದಲ್ಲಿ ವಿದ್ಯೆ ಕಲಿತು ಗಾಯನಪಟುಗಳು, ವಾದನಪಟುಗಳು, ಕೀರ್ತನಪಟುಗಳು, ನಟರು, ಆಯುರ್ವೇದ ವೈದ್ಯರು ಆಗಿ ಕೀರ್ತಿ ಗಳಿಸಿದವರು ಅದೆಷ್ಟು ಸಾವಿರವೊ?

ಮೊದಲು ರೇಷ್ಮೆ ವಸ್ತ್ರ ಧರಿಸುತ್ತಿದ್ದ ಪಂಚಾಕ್ಷರಿ ಗವಾಯಿಗಳು ಗಾಂಧೀಜಿಯ ಪ್ರೇರಣೆಯಿಂದ (ಗಾಂಧೀಜಿ ಹುಬ್ಬಳ್ಳಿಗೆ ಬಂದಾಗ ದರ್ಶನ ಪಡೆದಿದ್ದರು), ಸೊಲ್ಲಾಪುರದ ಧನಶೆಟ್ಟಿ ಮಲ್ಲಪ್ಪನವರ ಪ್ರಭಾವದಿಂದ, ಖಾದಿ ವಸ್ತ್ರಧಾರಿಗಳಾದರು. ಸ್ವದೇಶಾಭಿಮಾನಿಗಳಾದರು. ವಿದೇಶಿ ಔಷಧವನ್ನೆಂದೂ ಮುಟ್ಟಲಿಲ್ಲ.

ಪಂಚಾಕ್ಷರಿ ಗವಾಯಿಗಳು ಸ್ವಂತದ ಸುಖವನ್ನು ಒಂದಿನಿತೂ ಬಯಸಿದವರಲ್ಲ. ಕಾಡಶೆಟ್ಟಿಹಳ್ಳಿಯಲ್ಲಿ ಅವರಿಗಿದ್ದುದು ಪುತ್ರವರ್ಗದ ಮಠ, ಅದಕ್ಕೆ 16–18 ಕೂರಿಗಿ ಜಮೀನು. ಶಿಷ್ಯವರ್ಗದ ಮಠದಲ್ಲಿ ಶಿಷ್ಯರಿಗೆ ಅಧಿಕಾರವಿರುತ್ತದೆ. ಪುತ್ರವರ್ಗದ ಮಠದಲ್ಲಿ ಪುತ್ರರಿಗೆ. ಪಂಚಾಕ್ಷರಿ ಗವಾಯಿಗಳು ಅಧಿಕಾರಕ್ಕೆ ಬಂದ ಮೇಲೆ 8 ಕೂರಿಗೆ ಜಮೀನನ್ನು ಶಿವಯೋಗ ಮಂದಿರದಲ್ಲಿ ಸ್ಥಾಪಿತವಾಗಲಿದ್ದ ಮುದ್ರಣಾಲಯಕ್ಕಾಗಿ, ಮಿಕ್ಕಿದ್ದನ್ನು ಸಂಸ್ಥೆಗಾಗಿ ದಾನ ಮಾಡಿದರು.

ಪಂಚಾಕ್ಷರಿ ಗವಾಯಿಗಳು ಹುಟ್ಟುಕುರುಡರಾಗಿದ್ದರೂ ನಾದಜ್ಞಾನಚಕ್ಷುಗಳಾಗಿದ್ದರು. ಅವರ ಜೀವನ ಹದವಾಗಿ ಶ್ರುತಿಗೊಳಿಸಿದ ವೀಣೆಯಂತಿತ್ತು. ನಾದಯೋಗದಿಂದಲೇ ನಾದಬ್ರಹ್ಮನನ್ನು ಒಲಿಸಿಕೊಂಡರು. ನಾದಾಂತವನ್ನ ವೇದಾಂತವೆಂದು ನಂಬಿ ಪರಿಪೂರ್ಣದೆಡೆಗೆ ನಡೆದವರು ಪಂಚಾಕ್ಷರಿ ಗವಾಯಿಗಳು.

□

# ಘನಲಿಂಗದೇವರು : ಆತ್ಮಾವಲೋಕನದ ಶರಣ

ಡಾ. ಎ. ನಿರಂಜನ

ಘನಲಿಂಗದೇವರು ಶಿವಾನುಭವಿಗಳು, ಮಧ್ಯಕಾಲೀನ ವಚನಕಾರರಲ್ಲಿ ಬಹು ಪ್ರಸಿದ್ಧರು. ಇವರ ಕಾಲಮಾನ ಕುರಿತು ಯಾವುದೇ ಶಾಸನಾಧಾರಗಳು ಲಭ್ಯವಿಲ್ಲ. ಇವರು ರಚಿಸಿರುವ ವಚನಗಳ ಆಂತರಿಕ ಸ್ವರೂಪ, ಭಾಷಾ ಶೈಲಿ, ತಾತ್ವಿಕ ಪರಿಪಕ್ವತೆ ಹಾಗೂ ಶರಣ ಸಾಹಿತ್ಯ ಸಂಶೋಧಕರ ಬರಹಗಳ ಹಿನ್ನೆಲೆಯಲ್ಲಿ ಇವರ ಕಾಲವನ್ನು ಸುಮಾರು 15ನೇ ಶತಮಾನ ಎಂದು ಗುರುತಿಸಬಹುದು. ಇವರ ವಚನಗಳು ಸಮಾಜವಿಮರ್ಶೆಯ ಘೋಷಣೆಗಷ್ಟೇ ಸೀಮಿತವಾಗದೆ, ಅಹಂಕಾರ–ಮಾಯೆ, ಸ್ವಯಂಪತನದ ನಿಸ್ಸಂಕೋಚ ಒಪ್ಪಿಗೆಯ ಮೂಲಕ ಅಂತರಂಗದ ಪರಿಶೀಲನೆಗೆ ಅನುವು ಮಾಡಿಕೊಡುತ್ತವೆ. ಗುರುಕೃಪೆಯ ಮೇಲಿನ ಸಂಪೂರ್ಣ ಶ್ರದ್ಧೆ ಹಾಗೂ ಪರಮಾತ್ಮನ ಕುರಿತಂತೆ ಪ್ರೇಮಮಯ ಶರಣಾಗತಿ ಇವುಗಳ ಮೂಲಕ ಧ್ಯಾನಶೀಲ ಹಂತದ ಪ್ರತಿನಿಧಿತ್ವವನ್ನು ಎತ್ತಿ ತೋರಿಸುತ್ತವೆ. ಇಲ್ಲಿ ತತ್ತ್ವಗಳು ಕೇವಲ ಉಪದೇಶಗಳಾಗದೆ ಸ್ವಂತ ಅನುಭವದ ನೆಲೆಯಲ್ಲಿ ಮೂಡಿಬಂದಿದೆ.

ನಿನ್ನ ನೆನಹಿದ್ದರೆ ಸಾಕು, ನನಗಿನ್ನೇನು ಬೇಕು?
ನಿನ್ನ ನೆನಹಿಲ್ಲದೆ, ಎಲ್ಲಿವಿದ್ದರೂ ಏನು ಫಲ? – ಘನಲಿಂಗಿದೇವಾ

ಹಾಗೂ

ನನ್ನ ಮಾಡು ನನ್ನದಲ್ಲ. ನಿನ್ನ ಮಾಡೇ ನಿಜಮಾಡು;
ನಾನಾದೆನೆಂಬೆನೆಂದರೆ ನಷ್ಟವೇ ನಿಶ್ಚಯ – ಘನಲಿಂಗಿದೇವಾ

ಮೇಲಿನ ಕಿರುವಚನಗಳಲ್ಲಿ ಸ್ವಯಂಸಾಧನೆಯ ನಿರಾಕರಣೆಯನ್ನೂ, ಗುರುವಿನ ಶಿವನ ಮೇಲಣ ಅವಲಂಬನೆಯ ಮೂಲಕ ಭಾವಲಿಂಗವನ್ನು ಕಾಣುವ ಸ್ಥಿರತೆಯನ್ನು ಗಮನಿಸಬಹುದು.

ವಿರಕ್ತ ತೋಂಟದಾರ್ಯರು ತಮ್ಮ 'ಸಿದ್ಧೇಶ್ವರ ಪುರಾಣ'ದಲ್ಲಿ ಘನಲಿಂಗದೇವರ ಬಾಹ್ಯಸ್ವರೂಪವನ್ನು ಈ ಕಂಡಂತೆ ವಿವರಿಸಿದ್ದಾರೆ :

ಉರೆ ಕೃಷ್ಣ ಕಂಬಳವ ಪೊದೆದುತ್ತಮಾಂಗವಂ
ನೆರೆ ಮುಂಡಿತಂಗೆಯ್ದು ಕರತಳದ ಲಿಂಗದೊಳ್
ಬೆರಗುವಡೆದಿತರೇತರವನರಿಯದಿರ್ಪ ನಿಶ್ಚಳ ವಿರತನೀತನಾರ್ ।

ತೊರೆದು ದೇಹೋಪಾಧಿಯಂ ವರ್ಗವಾರಕ್ಕೆ
ಹೆರಸಾರ್ದು ಸುಜ್ಞಾನಮಾರ್ಗದೊಳು ನಿಂದು ಗುಣ
ಕರಿಗೊಂಡ ಘನಲಿಂಗಿದೇವನೇ ಕಾಣೆ (15–46)

ಇದರ ಮೇಲ್ನೋಟದ ಅರ್ಥ 'ಕಪ್ಪು ಕಂಬಳಿಯನ್ನು ಎದೆಯ ಮೇಲೆ ಹೊದ್ದುಕೊಂಡು, ಶಿರಸ್ಸನ್ನು ಮುಂಡನ ಮಾಡಿಕೊಂಡು, ಕರಸ್ಥಳದ ಲಿಂಗದಲ್ಲಿ ಕೌತುಕದೃಷ್ಟಿಯುಳ್ಳ, ಬಾಹ್ಯಸ್ಥಿತಿಯನ್ನು ಗಮನಿಸದ, ನಿಶ್ಚಲ ವಿರಾಗಿಯಾದ ಈತನಾರು? ದೇಹದ ಉಪಾಧಿಯನ್ನು ನೀಗಿ, ಅರಿಷಡ್ವರ್ಗಕ್ಕೆ ವಶನಾಗದೆ, ಸುಜ್ಞಾನಪಥದಲ್ಲಿ ಸಾಗುತ್ತ. ಗುಣನಿಧಿಯಾದ ಘನಲಿಂಗಿದೇವನೇ ಈತನು' ಎಂಬುದು. ಈ ಘಟನೆಯು ತುಮಕೂರಿನಲ್ಲಿ ಇವರ ಸಮಕಾಲೀನರಾದ ತೋಂಟದ ಸಿದ್ಧಲಿಂಗ ಯತಿಗಳ ಪಲ್ಲಕ್ಕಿ ಮೆರವಣಿಗೆಯ ಮುಂಭಾಗದಲ್ಲಿ ಘನಲಿಂಗದೇವರು ಸಾಗುತ್ತಿರುವ ಭವ್ಯ ದೃಶ್ಯದ ವಿವರಣೆ.

ಇದು ಘನಲಿಂಗದೇವರ ಬಾಹ್ಯಸ್ವರೂಪ ಮಾತ್ರವೇ ಅಲ್ಲ; ಅವರ ಆಂತರಿಕ ಸ್ಥಿತಿಯ ಚಿತ್ರಣವೂ ಹೌದು: ಕಪ್ಪು ಕಂಬಳಿ, ಮುಂಡನ, ಕರಸ್ಥಳದ ಲಿಂಗ ಇವು ಕೇವಲ ಬಾಹ್ಯ ವೇಷವಲ್ಲ; ಬದಲಿಗೆ ದೇಹಾಭಿಮಾನವನ್ನು ತ್ಯಜಿಸಿರುವ ಸಂಕೇತಗಳು. ಲಿಂಗದಲ್ಲಿಯೇ ಲೀನವಾಗಿರುವ ಕಾರಣ, ಅವರಿಗೆ ಜಗತ್ತಿನ ಅರಿವು ತಪ್ಪಿದೆ, ನಿಶ್ಚಲ ವಿರಕ್ತರಾಗಿದ್ದಾರೆ. ದೇಹೋಪಾಧಿಯನ್ನು ಸಂಪೂರ್ಣವಾಗಿ ಕೈಬಿಟ್ಟು, ಸತ್ವ–ರಜ–ತಮೋಗುಣಗಳನ್ನು ಅರಗಿಸಿಕೊಂಡು, ಶಿವನನ್ನೇ ಆಶ್ರಯಿಸಿ ಶುದ್ಧಮಾರ್ಗದಲ್ಲಿ ನೆಲೆನಿಂತಿರುವ ಘನಲಿಂಗಿಯ ಆ ತೇಜೋಮೂರ್ತಿಯ ಬಣ್ಣನೆ ಇದು.

ಶ್ರೀ ಘನಲಿಂಗ ಶಿವಯೋಗಿಗಳು ರಚಿಸಿರುವ 63 ವಚನಗಳೂ ವೀರಶೈವ ಸಿದ್ಧಾಂತ ಬೋಧಕವಾಗಿವೆ :

ಈಗ ಘನಲಿಂಗಿದೇವರ 'ನಿನ್ನತ್ತಲೆನ್ನ ಮುಖವ ಮಾಡು' ಎಂಬ ಶೀರ್ಷಿಕೆಯ ವಚನ ಮತ್ತು ಅದರ ಆಧ್ಯಾತ್ಮಿಕ ಅರ್ಥವನ್ನು ಅರಿಯೋಣ :

ಕಪಿ ಕಳ್ಳ ಕುಡಿದು
ನಡುನೀರಲ್ಲಿ ಬಿದ್ದು
ಮೀನು–ಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನ ಬಾಳು!

ವಚನಕಾರರು ಈ ವಚನದ ಮೂಲಕ ಆತ್ಮಸಾಧನೆಯ ಹಾದಿಯಲ್ಲಿರುವ ಅತ್ಯಂತ ಸೂಕ್ಷ್ಮವೂ ಸಂಕೀರ್ಣವೂ ಆದ ಅಪಾಯವನ್ನು ತೋರಿಸಿದ್ದಾರೆ. ಅದುವೇ 'ಅಹಂಕಾರ'. 'ಕಪಿ ಕಳ್ಳ ಕುಡಿದು' ಎಂದರೆ ಚಂಚಲ ಮನಸ್ಸು ವಿಷಯಮದದಲ್ಲಿ ಮರುಳಾಗಿ, 'ನಾನೇ ಸಂಸಾರವೆಂಬ ಕಡಲನ್ನು ದಾಂಟುವೆನೆಂಬ' ಭ್ರಮೆಯಲ್ಲಿ ಲಂಘಿಸಿದಾಗ ಉಂಟಾಗುವ ಸ್ಥಿತಿಯ ವಿವರಣೆ ಇಲ್ಲಿದೆ. ಇಂತಹ ಪ್ರಯತ್ನ ಯೋಗಿಯೂ ಅಲ್ಲದ, ಭೋಗಿಯೂ ಅಲ್ಲದ ಒಂದು ದಿಕ್ಕುತಪ್ಪಿದ ಸ್ಥಿತಿ. ಆಗ ಸಹಜವಾಗಿಯೇ ವಾಸನೆಗಳು ಸಾಧಕನನ್ನು

ಮೀನು–ಮೊಸಳೆಗಳಂತೆ ನುಂಗುತ್ತವೆ. ಈ ಸ್ಥಿತಿಗೆ ಶರಣರು ಬೇರಾರನ್ನೂ ದೂಷಿಸದೆ 'ಎನ್ನ ಬಾಳು' ಎಂದು ತಮ್ಮನ್ನೇ ಹಳಿದುಕೊಳ್ಳುತ್ತಿದ್ದಾರೆ. ಅಂದರೆ ಗುರುವಿಲ್ಲದೆ, ಲಿಂಗವಿಲ್ಲದೆ, ವಿನಯವಿಲ್ಲದೆ ಮಾಡಿದ ಸಾಧನೆ ಅದು ಸಾಧನೆಯೇ ಅಲ್ಲ; ಬದಲಿಗೆ ಅದು ಆತನ ಅಧಃಪತನ. ಇದನ್ನೇ ಬಸವಣ್ಣನವರು "ಅಹಂಕಾರವ ಕಡಿದುಹಾಕದೆ ಲಿಂಗಪೂಜೆ ಫಲಿಸುವುದೇ?" ಎಂದಿದ್ದಾರೆ. 'ಎನ್ನ ಬಾಳು' ಎಂಬ ಮಾತು ಆತ್ಮದ ಪಶ್ಚಾತ್ತಾಪ, ತಪ್ಪು ನನ್ನದೇ ಎಂದು ಒಪ್ಪಿಕೊಳ್ಳುವ ಶರಣಧರ್ಮವಾಗಿದೆ.

ಆದಿಯಲ್ಲಿ ನಿನ್ನ ಗರ್ಭಾಂಬುಧಿಯಲ್ಲಿ ಜನಿಸಿ
ನಿನ್ನ ನೆನಹಿಲ್ಲದೆ
ಇಷ್ಟಲಿಂಗವನರಿಯದ ಕಷ್ಟಜೀವಿಗಳ
ಪ್ರಾಣಲಿಂಗವನರಿಯದ ಪರಮಪಾತಕರ
ಭಾವಲಿಂಗವನರಿಯದ ಭವಕ್ಕೊಳಗಾದ ಹುಲುಮಾನವರ
ತಂದೆ–ತಾಯಿ, ಬಂಧು–ಬಳಗವೆಂದು ಭಾವಿಸಿದ
ಬಲುಪಾತಕವೆನ್ನನಂಡಲೆದು
ಅಮರ್ದಪ್ಪಿ ಅಗಲದ ಕಾರಣ

ಇಲ್ಲಿ ಶರಣರು 'ಶಿವಸ್ವರೂಪವನ್ನು ಮರೆತು ಸಂಸಾರಬಂಧನಗಳಲ್ಲಿಯೇ ಸಿಲುಕಿದ ಪಾತಕ ಪ್ರವೃತ್ತಿಯ' ಬಗೆಗೆ ಹೇಳುತ್ತಾರೆ. ಜೀವನು ಮೂಲತಃ ಶಿವಸ್ವರೂಪನು. ತನ್ನ ಮೂಲ ಅರಿವನ್ನೇ ಮರೆತು, ಶಿವಸ್ಮರಣೆಯಿಂದ ವಿಮುಖನಾಗಿ, ದುಃಖಕ್ಕೆ ಬಂಧಿತನಾಗುತ್ತಾನೆ, ಜೀವ–ಶಿವ ಏಕತ್ವದ ಅನುಭವದಿಂದ ವಂಚಿತರಾಗಿ, ಅಹಂಕಾರದಲ್ಲಿ ಸಿಲುಕಿ, ಪಾತಕಸ್ಥಿತಿಗೆ ತಲುಪುತ್ತಾನೆ. ಭಾವಲಿಂಗವನರಿಯದೆ, ಅಂದರೆ ಸ್ಥಿರಭಕ್ತಿ–ಶುದ್ಧಭಾವವಿಲ್ಲದೆ 'ಪುನರಪಿ ಜನನಂ ಪುನರಪಿ ಮರಣಂ' ಎಂಬ ಜನ್ಮಾಂತರಗಳ ಚಕ್ರದಲ್ಲಿ ಸಿಲುಕಿಕೊಳ್ಳುತ್ತಾರೆ. ಶರೀರದಿಂದ ಉಂಟಾಗುವ ಸಂಬಂಧಗಳಾದ "ತಂದೆ–ತಾಯಿ, ಬಂಧು–ಬಳಗಕ್ಕೆ ಪರಮಾರ್ಥದ ಸ್ಥಾನವನ್ನು ಕೊಟ್ಟು, ತಪ್ಪುದಾರಿ ಹಿಡಿದಿದ್ದೇನೆ. ಇವೆಲ್ಲಕ್ಕೂ ಕಾರಣ ಅಮೃತಸ್ವರೂಪನಾದ ಶಿವನಿಂದ ನಾನು ದೂರವಾದುದೇ ಆಗಿದೆ". ಇಲ್ಲಿ 'ಶಾಶ್ವತ ಮೌಲ್ಯಗಳಿಗಿಂತಲೂ ವ್ಯಕ್ತಿಗಳಿಗೆ ಅಂಟಿಕೊಂಡ ಬದುಕು ಅಪಾಯಕಾರಿ' ಎಂಬ ಸಂದೇಶವಿದೆ. ಇದರ ಸಾರವನ್ನು 'ಲಿಂಗವಿಲ್ಲದ ಬದುಕು ಬಂಧನವಾದರೆ, ಲಿಂಗತ್ರಯದ ಅರಿವು ಮುಕ್ತಿಗೆ ಮಾರ್ಗ' ಎನ್ನಬಹುದು.

ನಿಂದ ತಾವಿಂಗೆ ನೀರ್ದಳಿವರಯ್ಯ
ಕುಳಿತ ತಾವಿಂಗೆ ಗೋಮವನಿಕ್ಕಿಸುವರಯ್ಯ
ನಾನು ಬಂದ ಬಟ್ಟೆಯೊಳೊರ್ವರೂ ಬಾರರಯ್ಯ
ಕಾಲನಾಳಿಂಗೆ ಕಾಲ್ತುಳಿಯಾದೆನಯ್ಯ
ಶುನಕ–ಸೂಕರಾದಿಗಳ ಬಸಿರಲ್ಲಿ ಬರುವಂತೆ
ಮಾಡಿತಯ್ಯ ಎನ್ನ ಮಾಯೆ!

ಇಲ್ಲಿ ಘನಲಿಂಗ ಶಿವಯೋಗಿಗಳು ಜೀವನದ ಒಂದು ಗಂಭೀರ ಸತ್ಯವನ್ನು ತೆರೆದು ತೋರಿಸುತ್ತಿದ್ದಾರೆ. ಶಿವನಿಂದ ದೂರವಾದ ಮರುಕ್ಷಣವೇ ಜೀವಕ್ಕೆ ಆಸ್ಥಿರತೆಯು ಪ್ರಾರಂಭವಾಗುತ್ತದೆ. ಯಾವುದೂ ನೆಲೆಯಿಲ್ಲದೆ, ಎಲ್ಲವೂ ಕೈಚಾರಿ ಹೋಗುತ್ತದೆ. ಶಿವಸ್ಮರಣೆಯಿಲ್ಲದ ಕಾರಣದಿಂದಾಗಿ ಆತನ ಗೌರವದ ಸ್ಥಾನಮಾನಗಳು ದೂರವಾಗಿ, ಅವಮಾನಕ್ಕೆ ಕಾರಣವಾಗುತ್ತದೆ. ನಾವು ಬರುವುದೂ ಒಬ್ಬರೆ; ಹೋಗುವುದೂ ಒಬ್ಬರೆ; ಬಂಧು–ಬಳಗ ಯಾರೂ ನಮ್ಮೊಡನೆ ಬಾರರು. ನಾವು ಗಳಿಸಿದ ಸಂಪತ್ತು, ಗೌರವಗಳೂ ನಮ್ಮೊಂದಿಗೆ ಬರುವುದಿಲ್ಲ. ಮರಣದ ಭೀಕರ ಸತ್ಯದ ಮುಂದೆ ನಮ್ಮ ಜೀವವು ಧೂಳಿಗೆ ಸಮಾನವಾಗಿ, ಆಸಹಾಯಕವಾಗುತ್ತದೆ. ಮಾಯೆಗೆ ಬಲಿಯಾಗಿ ನಾಯಿಯೋ, ಹಂದಿಯೋ, ಪುನರ್ಜನ್ಮದ ಹೀನಚಕ್ರ ಅನಿವಾರ್ಯವಾಗುತ್ತದೆ.

ಒರ್ವರಿಗೆ ಹುಟ್ಟಿ–
ಮತ್ತೋರ್ವರಿಗೆ ಅಪ್ಪಾ ಎಂಬ
ನಾಣ್ಣುಡಿಯ ದೃಷ್ಟವೆನಗಾಯಿತಯ್ಯ!
ಗುರುವೇ, ಈ ದೋಷಮಂ ಕರುಣದಿಂ ಕಳೆದು
ಶುದ್ಧನಂ ಮಾಡಿ
ನಿನ್ನಂ ಜನನೀ–ಜನಕರೆಂಬ
ನಿನ್ನ ಭಕ್ತರಂ ಬಂಧುಬಳಗವೆಂಬ ಸುಜ್ಞಾನವಂ ಕೊಟ್ಟು
ಜಾಗೃತ್ –ಸ್ವಪ್ನ–ಸುಷುಪ್ತಿಯಲ್ಲಿ ನಿನ್ನತ್ತಲೆನ್ನ ಮುಖವ ಮಾಡಿ
ಅಕ್ಕರಿಂದ ರಕ್ಷಿಪುದಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ

ಇಲ್ಲಿ ಶರಣರು ಸಂಬಂಧಗಳ ಅನಿತ್ಯತೆಯನ್ನು ವಿವರಿಸಿದ್ದಾರೆ. ಒಬ್ಬನ ಮಗನಾದವನು. ಇನ್ನೊಬ್ಬನಿಗೆ ತಂದೆ – ಸ್ಥಿರವಾದ ಸಂಬಂಧವು ಶೂನ್ಯವಾಗಿದೆ. ಇದರಿಂದ ಹೊರಬರುವುದು ಹೇಗೆ? ಎಂಬ ಪ್ರಶ್ನೆಗೆ ಗುರುವಿನ ಕರುಣೆಯಿಂದ ಮಾತ್ರವೇ ಶುದ್ಧಿ ಮತ್ತು ಶಾಶ್ವತ ಸಂಬಂಧ ದೊರೆಯುತ್ತದೆ ಎನ್ನುತ್ತಾರೆ. ಅದಕ್ಕಾಗಿ ಶರಣನು, ತನ್ನ ಸ್ವಂತ ಬಲವನ್ನು ನಿರ್ಧರಿಸಿ, ಗುರುವಿನ ಕರುಣೆಗೆ ಶರಣಾಗಿ, ಶಿವಭಕ್ತರನ್ನೇ ತನ್ನ ಬಂಧು–ಬಳಗವೆಂದು ಅರಿಯುವ ಸುಜ್ಞಾನವನ್ನು ಪಡೆಯುತ್ತಾನೆ. ಜಾಗೃತ್ –ಸ್ವಪ್ನ–ಸುಷುಪ್ತಿಯಲ್ಲಿಯೂ ತನ್ನಲ್ಲಿ ಶಿವಸ್ಮರಣೆ ನಿರಂತರವಾಗಿರಲಿ ಎಂದು ಪ್ರಾರ್ಥಿಸುತ್ತಾನೆ. ಆದ್ದರಿಂದಲೇ ಗುರುಕೃಪೆ ಬೇಕು; ಲಿಂಗಸ್ಮರಣೆ ಬೇಕು; ಭಕ್ತರ ಸಂಗ ಬೇಕೇ ಬೇಕು ಎಂಬುದೇ ಬದುಕಿನ ನಿತ್ಯಸತ್ಯ ಎಂದು ಅರ್ಥೈಸಬಹುದು.

ಘನಲಿಂಗದೇವರ ವಚನಗಳ ಕೊನೆಯಲ್ಲಿ 'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ' ಎಂಬ ಸಾಲು ಕಂಡುಬರುತ್ತದೆ. ಇಲ್ಲಿ ಕಂಡುಬರುವ 'ಮೋಹ' ಪದವು ಲೌಕಿಕ ಅರ್ಥದ 'ಮಾಯೆ' ಎನ್ನುವ ಸಾಧಾರಣ ಅರ್ಥವಲ್ಲ, ಶರಣಸಾಹಿತ್ಯದ ತಾತ್ವಿಕ ಸಂದರ್ಭದಲ್ಲಿ, ಈ 'ಮೋಹ'ವು ಸಾಧಕನ ಭಕ್ತಿಯ ಪರಾಕಾಷ್ಠೆಯನ್ನು ಸೂಚಿಸುತ್ತದೆ.

ಇದು ಸಂಪೂರ್ಣವಾಗಿ ಧನಾತ್ಮಕ ತಾತ್ವಿಕ ರೂಪದಲ್ಲಿದ್ದು ಶಿವನ ಮೇಲಣ ಪರಮಪ್ರೇಮವಾಗಿದೆ. ಭಕ್ತನ ಅಹಂಕಾರವನ್ನು ಕರಗಿಸಿ ಶಿವನಲ್ಲಿ ಆತನನ್ನು ಐಕ್ಯಗೊಳಿಸುವ ಶಕ್ತಿಯ ದ್ಯೋತಕವಾಗಿದೆ. ಇದು ಸಂಬೋಧನಾ ರೂಪದಲ್ಲಿ ಭಕ್ತನನ್ನು ತನ್ನ ಪ್ರೇಮದಲ್ಲಿ ಸಂಪೂರ್ಣ ಲೀನಗೊಳಿಸುವ ಪರಮತತ್ತ್ವವಾಗಿ ಚಿತ್ರಣಗೊಂಡಿದೆ. ಇದು ಮಾಯಾಮೋಹವಲ್ಲ; ಬದಲಿಗೆ ಭಕ್ತಿಮೋಹ ಅಥವಾ ಪ್ರೇಮಮೋಹ. ಮಾಯೆಯು ಶಿವನಿಂದ ನಮ್ಮನ್ನು ದೂರ ಮಾಡಿದರೆ, ಅದೇ ಮೋಹವು ರೂಪವನ್ನು ಬದಲಿಸಿ, ಶಿವನಲ್ಲಿಯೇ ಲೀನವಾಗುವ, 'ನಿನ್ನ ಬಿಟ್ಟರೆ ನನಗೆ ಇನ್ನೇನೂ ಬೇಡ' ಎಂಬ ಸ್ಥಿತಿಯತ್ತ ಭಕ್ತನನ್ನು ಕರೆದೊಯ್ಯುತ್ತದೆ. ಶರಣಸಾಹಿತ್ಯದಲ್ಲಿ 'ಮಾಯಾಮೋಹ'ವೆಂಬದು ತ್ಯಜಿಸಲು ಅರ್ಹವಾದ ಸಂಗತಿ. ಆದರೆ 'ಶಿವಲಿಂಗಮೋಹ'ದ ಅಪ್ಪುಗೆಗೆ ಸೂಕ್ತ ಎಲ್ಲ ದೋಷಗಳಿಗೂ ಪತನಕ್ಕೂ ಅಂತಿಮ ಪರಿಹಾರವೇ ಶಿವನ ಪ್ರೇಮಮೋಹದಲ್ಲಿನ ಲೀನತೆ ಎಂಬ ತತ್ತ್ವವನ್ನು ಇಲ್ಲಿ ಸಾಂಕೇತಿಕವಾಗಿ ಸಾರಲಾಗಿದೆ.

ಅಹಂಕಾರ ಕರಗಿದಲ್ಲಿ ಅನುಭವ ಹೊಮ್ಮುತ್ತದೆ ;
ಅನುಭವ ನೆಲೆಯಾದಲ್ಲಿ ಶರಣಾಗತಿ ಸಂಪೂರ್ಣ:
ಇದೇ ಲಿಂಗಾನುಭವ –
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

□

ಭಕ್ತಿಯುಳ್ಳವಂಗೆ ನಿಷ್ಠುರದ ಮಾತೇಕೆಂಬರು
ನಾಲ್ಕರ ಮುಕ್ತಿಯ ಭಕ್ತರು
ನಿಷ್ಠೆವಂತರಿಗೆ ಇದೇ ಭಕ್ತಿ
ಅನಿತ್ಯವನರಿದ ನಿಶ್ಚಟಂಗೆ ಮಿಥ್ಯವನಾರಾದಡೂ ನುಡಿಯಲಿ
ಸತ್ಯವಿದ್ದ ಮತ್ತೆ
ಕಲ್ಲಿನ ಮನೆಯಲ್ಲಿದ್ದವಂಗೆ ದಳ್ಳುರಿ ಬಿದ್ದಡೇನು?
ಇವರೆಲ್ಲರ ಬಲ್ಲತನಕ್ಕಂಜಿ ನಾನೊಳ್ಳಿಹನೆಂದಡೆ
ಆತನು ಎಲ್ಲಿಗೆ ಯೋಗ್ಯ, ನಿಃಕಳಂಕ ಮಲ್ಲಿಕಾರ್ಜುನಾ?

**ಮೋಳಿಗೆ ಮಾರಯ್ಯ**

# ಮಾದಾರ ಚೆನ್ನಯ್ಯ: ಬಸವಣ್ಣ ಮತ್ತು ಹರಿಹರನ ದೃಷ್ಟಿಯಲ್ಲಿ...

**ಡಾ. ರಾಜಶೇಖರ ಜಮದಂಡಿ**

12ನೇ ಶತಮಾನವೆಂಬುದು ಸಮಾನತೆಯ ಮೂಲದಿಂದ ಸಮಾಜದ ಶಿಸ್ತಿನ ಪರಿಧಿಯಲ್ಲಿ ಪ್ರತಿಯೊಬ್ಬರೂ ಸುಖ, ಶಾಂತಿ, ಸಮೃದ್ಧಿ ಹೊಂದಬೇಕೆಂಬ ಅಭಿಲಾಷೆ ಹೊಂದಿದ್ದ ಶರಣರದ್ದಾಗಿತ್ತು. ಆದರೆ ಲಿಂಗ, ಜಾತಿ, ಮತ, ಭೇದ, ಶೋಷಣೆ, ಕಟ್ಟುಪಾಡುಗಳಂತಹ ಉಸಿರುಗಟ್ಟಿಸುವ ವಾತಾವರಣದಲ್ಲಿ ಸಮಾಜಸುಧಾರಣೆ ಅಷ್ಟೊಂದು ಸುಲಭವಾಗಿರಲಿಲ್ಲ. ಧರ್ಮ ಜಾತಿಗಳಿಂದ ಮನುಷ್ಯರಲ್ಲಿ ತಾರತಮ್ಯ ಹೆಚ್ಚಾಗಿ ಆತ್ಮಗೌರವ ಮತ್ತು ಆತ್ಮವಿಶ್ವಾಸಗಳು ಕುಸಿದಿದ್ದವು. ಒಂದೆಡೆ ವೈದಿಕ ಸನಾತನಿಗಳ ವರ್ಣಾಶ್ರಮದ ಚೌಕಟ್ಟು, ಇನ್ನೊಂದೆಡೆ ಇದಕ್ಕೆ ರಾಜಸತ್ತೆಯ ಬೆಂಬಲ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲೂ ಬಸವಾದಿ ಪ್ರಮಥರು ಧೈರ್ಯದಿಂದ ಸಮಾಜಸುಧಾರಣೆಗಾಗಿ ಮುನ್ನುಗ್ಗಿದ್ದು ಅವರ ದೂರದೃಷ್ಟಿಗೆ ಹಿಡಿದ ಕನ್ನಡಿಯಲ್ಲದೆ ಮತ್ತೇನು? ಶೋಷಣೆಗೊಳಗಾದವರನ್ನು ಮೇಲೆತ್ತುವ, ವ್ಯಕ್ತಿಸ್ವಾತಂತ್ರ್ಯವನ್ನು ದೊರಕಿಸುವ, ಎಲ್ಲರಿಗೂ ಸಮಾನ ಗೌರವ ಕೊಡಿಸುವ ನಿಟ್ಟಿನಲ್ಲಿ ವಚನಕಾರರ ಚಿಂತನೆ ಮೌಲಿಕವಲ್ಲದೆ ಇನ್ನೇನು?

ಬಸವಪೂರ್ವ ಕಾಲಕ್ಕೂ, ಬಸವಾದಿ ಪ್ರಮಥರ ಕಾಲಕ್ಕೂ ಈ ಜಾತಿ–ಧರ್ಮ ಮೇಲು–ಕೀಳುಗಳೆಂಬ ಭಿನ್ನತೆಗಳು ವಿಪರೀತವಾಗಿದ್ದವು. ಈ ಹಿನ್ನೆಲೆಯಲ್ಲಿ ದಲಿತವರ್ಗದಿಂದ ಬಂದ ಶರಣರಲ್ಲಿ ಪ್ರಮುಖವಾಗಿ ಕಂಡುಬರುವ ಮಾದಾರ ಚೆನ್ನಯ್ಯನ ಜೀವನವೃತ್ತಾಂತ ಎಷ್ಟು ನೋವಿನಿಂದ ಕೂಡಿರಬಹುದೆಂಬುದನ್ನು ನೋಡಬಹುದು. ಎಂದಿಗೂ ಈತ ಆಡಂಬರದಲ್ಲಿ ಬದುಕದೇ ಗುಪ್ತಭಕ್ತನಾಗಿದ್ದು, ಇತರರಿಗೆ ಮಾದರಿಯಾಗಿದ್ದಂತೂ ಆಶ್ಚರ್ಯ. ಇಂತಹ ಮಾನವೀಯ ಅನುಕಂಪ ಮತ್ತು ಗುಪ್ತಭಕ್ತಿಯನ್ನು ಹೊಂದಿದ್ದ ಕಾಯಕ–ದಾಸೋಹ ಜೀವಿಯಾಗಿದ್ದ ಮಾದಾರ ಚೆನ್ನಯ್ಯನನ್ನು ಕುರಿತಾಗಿ ಬಸವಣ್ಣನವರು ತಮ್ಮ ವಚನಗಳಲ್ಲಿ ಸಂದರ್ಭಾನುಸಾರವಾಗಿ ಬಾಂಧವ್ಯದ ಪ್ರೀತಿಯನ್ನು ವ್ಯಕ್ತಪಡಿಸುವುದರ ಮನಃಪೂರ್ವಕವಾಗಿ ನೆನೆದಿದ್ದಾರೆ. ಆದೇ ರೀತಿ ಹರಿಹರನು ತನ್ನ ರಗಳೆಗಳಲ್ಲಿಯೂ ಅತ್ಯಂತ ಆಪ್ತ ರೀತಿಯಲ್ಲಿ ಚಿತ್ರಿಸಿದ್ದಾನೆ.

**ಬಸವಣ್ಣನವರ ವಚನಗಳಲ್ಲಿ:** ಶರಣ ಮಾದಾರ ಚೆನ್ನಯ್ಯ ಬಸವಣ್ಣನವರ ಹಿರಿಯ ಸಮಕಾಲೀನನಾಗಿದ್ದನು. ಬಸವಣ್ಣನವರು ಈತನನ್ನು ಅತ್ಯಂತ ಪೂಜ್ಯ ಭಾವದಿಂದ ಕೊಂಡಾಡಿದ್ದಾರೆ. ಉತ್ತಮ ವಚನಕಾರರಾಗಿದ್ದು 'ನಿಜಾತ್ಮರಾಮ ರಾಮ

ರಾಮನಾ'(ವಸ್ತುವಿನಿಂದಲೇ ಚೈತನ್ಯದ ಹುಟ್ಟು ಎಂಬುದನ್ನು ಸಂಕೇತಾರ್ಥದಲ್ಲಿ ಆತನ ಅಂಕಿತವು ಸೂಚಿಸುತ್ತದೆ) ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಸದ್ಯಕ್ಕೆ ಈತನ 10 ವಚನಗಳು ಲಭ್ಯವಾಗಿವೆ. ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮನಾಥ ಇವರ ಗಣಸಹಸ್ರನಾಮದಲ್ಲಿ ಈತನ ಬಗೆಗೆ ಮಾಹಿತಿ ಸಿಗುತ್ತದೆ. ಅಬ್ಬಲೂರು, ಜಗಳೂರು ಶಿಲಾಶಾಸನಗಳಲ್ಲಿ ಈತನ ಕುರಿತು ಉಲ್ಲೇಖವಿದೆ. ವ್ಯವಸ್ಥೆಯ ಮೂಲಕ ಅಲ್ಪಮತಿಗಳು ಸೃಷ್ಟಿಸಿದ ಶ್ರೇಣೀಕೃತ ಸಮಾಜದಲ್ಲಿ ಕಟ್ಟಕಡೆಯ ಜಾತಿಯಲ್ಲಿ ಹುಟ್ಟಿದ್ದ ಚೆನ್ನಯ್ಯ ಅಂತ್ಯಜನಾಗಿದ್ದರೂ ಸತ್ಯಶುದ್ಧ ಕಾಯಕ–ದಾಸೋಹದಲ್ಲಿ ಪ್ರಸಿದ್ಧಿ ಪಡೆದಿದ್ದನು. ತನ್ನದೇ ಪ್ರಜ್ಞೆ ಮತ್ತು ತತ್ವಗಳಿಗೆ ಬದ್ಧನಾಗಿದ್ದು, ಅರಣ್ಯದಲ್ಲಿ ಹುಲ್ಲು ಕೊಯ್ಯುವ ಕಾಯಕದೊಂದಿಗೆ ತನ್ನ ಹೆಂಡತಿ ತಯಾರಿಸಿಕೊಟ್ಟ ಅಂಬಲಿಯನ್ನು ನಿತ್ಯವೂ ಇಷ್ಟಲಿಂಗಕ್ಕೆ ಅರ್ಪಿಸುತ್ತಿದ್ದನು. ಈ ಅಂಬಲಿಯ ಸವಿಯನ್ನು ಶಿವ ಪ್ರತ್ಯಕ್ಷನಾಗಿ ಸೇವಿಸುವಾಗ ಚೆನ್ನಯ್ಯನೂ ಶಿವನ ಜೊತೆಗೆ ಕುಳಿತು ಸೇವಿಸುತ್ತಿದ್ದನಂತೆ.

12ನೇ ಶತಮಾನದಲ್ಲಿ ಅಸ್ಪೃಶ್ಯರಿಗೆ ಅಭಿವ್ಯಕ್ತಿಯ ಧ್ವನಿ ಮತ್ತು ಸಮಾನತೆಯ ಅವಕಾಶಗಳಿರಲಿಲ್ಲ. ಸಂಪ್ರದಾಯ ವಿರುದ್ಧವಾಗಿ ಮಾತಾಡುವುದೆಂದರೆ ಧರ್ಮದ್ರೋಹದ ಕಾರ್ಯವೆಂದು ಭಾವಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಬಸವಣ್ಣ ಅನೇಕ ಬಾರಿ ಚನ್ನಯ್ಯನನ್ನು 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ' ಎಂದು ನೆನೆಯುತ್ತಾ, ತಂದೆ ಆತನನ್ನು ತನ್ನ ಬಂಧು ಎಂದೆಲ್ಲಾ ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ. ತನ್ನ ವ್ಯಕ್ತಿತ್ವಕ್ಕೆ, ಬದುಕಿನ ಉನ್ನತಿಗೆ. ಅಂತರಂಗ–ಬಹಿರಂಗ ಶುದ್ಧಿಗೆ ಚನ್ನಯ್ಯನ ನೆರಳಿದೆಯೆಂಬ ಅಭಿಪ್ರಾಯ ಸೂಚಿಸಿದ್ದಾರೆ. ಜಾತಿಯನ್ನು ಕುರಿತು ಅವಹೇಳನಕಾರಿಯಾಗಿ ಮಾತಾಡುವವರ ಬಾಯಿಗೆ ಬೀಗ ಹಾಕುವ ಸಂದರ್ಭದಲ್ಲಿ ಬಸವಣ್ಣನವರು ತಮ್ಮ ಜನನದ ಬಗೆಗೆ ಹೀಗೆ ಆರೋಪಿಸಿಕೊಂಡಿದ್ದಾರೆ:

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ

ಹುಟ್ಟಿನಿಂದ ಮಾದಾರ ಚೆನ್ನಯ್ಯನ ಪ್ರಭಾವ ಬಸವಣ್ಣನವರ ಮೇಲೆ ಎಷ್ಟಾಗಿತ್ತೆಂಬುದಕ್ಕೆ ಈ ವಚನವೇ ಸಾಕ್ಷಿ. ತಮ್ಮ ಹುಟ್ಟಿನ ಅಹಂಕಾರವನ್ನು ನಿರಾಕರಿಸಿಕೊಳ್ಳುವುದರಲ್ಲಿ ಯಾವ ಮಟ್ಟಕ್ಕೆ ಹೋಗಿದ್ದರೆಂದರೆ ಮೇಲೆ ತಿಳಿಸಿದಂತೆ ಇಬ್ಬರು ದಲಿತರ ಸಂಗದಿಂದ ತಾವು ಹುಟ್ಟಿದ್ದೇವೆಂದು ಹೇಳಿಕೊಂಡಿದ್ದಾರೆ. ಇಲ್ಲಿನ ತಾರ್ಕಿಕ ನಿರ್ಧಾರಗಳಿಗಿಂತಲೂ ಇದರ ಹಿಂದಿರುವ ಮನೋಧರ್ಮ ಊಹೆಗೂ ಮೀರಿದುದು. ಯಾರ ಯೋಗ್ಯತೆಯನ್ನೂ ಹುಟ್ಟಿನಿಂದ ಅಳೆಯಬಾರದು, ಅವರವರ ಪ್ರತಿಭೆಯೇ ಮುಖ್ಯ ಎಂಬ ಭಾವನೆ ಹಿರಿದಾದುದು. ಇಲ್ಲಿ ಬಸವಣ್ಣನವರ ಅಸಾಧಾರಣವಾದ ಮಾನವೀಯ

ವ್ಯಕ್ತವಾಗಿದೆ ಅನುಕಂಪ. ಅಲ್ಲದೆ ಈತನ ಮೂಲಕ ತಮ್ಮ ಹುಟ್ಟನ್ನು ಗುರುತಿಸಿಕೊಳ್ಳುವದರೊಂದಿಗೆ ಚಾಡಿಕೋರರ ಬಾಯಿಗೆ ಬೀಗ ಹಾಕಿದ್ದರು. ಜನಸಾಮಾನ್ಯರೊಡನೆ ಅದರಲ್ಲೂ ಅತ್ಯಂತ ಕೆಳಸ್ತರದಲ್ಲಿದ್ದು ತುಳಿತಕ್ಕೆ ಒಳಗಾದ ಅಸ್ಪೃಶ್ಯರೊಡನೆ ತಮ್ಮನ್ನು ಏಕೀಭವಿಸಿಕೊಂಡಿದ್ದು ಅವರ ಶ್ರೇಷ್ಠ ಚಿಂತನೆಗೆ ಒಂದು ಉದಾಹರಣೆ.

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ 'ಅಯ್ಯಾ ಅಯ್ಯಾ' ಎನ್ನಲಾರೆ
ಚನ್ನಯ್ಯನೆಮ್ಮಯ್ಯನು; ಚನ್ನಯ್ಯನ ಮಗ ನಾನು
ಕೂಡಲಸಂಗನ ಮಹಾಮನೆಯಲ್ಲಿ
ಧರ್ಮಸಂತಾನ ಭಂಡಾರಿ ಬಸವಣ್ಣನು!

ಬಸವಣ್ಣನವರನ್ನು ಛೇಡಿಸುವ ರೀತಿಯಲ್ಲಿ ಕೆಲವರು ನಿನ್ನ ತಂದೆ ಯಾರು? ಎಂದಾಗ "ಸೂಳೆಗೆ ಜನಿಸಿದ ಮಗು ಗೊತ್ತಿಲ್ಲದೆ ಅವರಿವರನ್ನು ತಂದೆಯೆಂದು ಹೇಳುವಂತೆ ನಾನು ಹೇಳಲಾರೆ. ಮಾದಾರ ಚೆನ್ನಯ್ಯನೇ ನನ್ನ ತಂದೆ" ಎಂದು ಹೆಮ್ಮೆಯಿಂದ ಹೇಳುತ್ತಾ ಧರ್ಮಸಂತಾನ ನನ್ನದೆಂದು ನಿಷ್ಠುರತೆಯನ್ನು ಮೆರೆದಿದ್ದಾರೆ.

ಹಿರಿಯಯ್ಯ ಶ್ವಪಚಯ್ಯ, ಕಿರಿಯಯ್ಯ ಡೋಹರ ಕಕ್ಕಯ್ಯ;
ಅಯ್ಯಗಳಯ್ಯನು ನಮ್ಮ ಮಾದಾರ ಚನ್ನಯ್ಯ
ಕೂಡಲಸಂಗಮದೇವಾ
ನಿಮ್ಮ ಶರಣರು ಎನ್ನ ಸಲಹುವರಾಗಿ

ವಚನದಲ್ಲಿ ಹೆಸರಿಸಿದಂತೆ ಅವರೆಲ್ಲರ ವಂಶಕ್ಕೆ ಸೇರಿದವನು ನಾನು. ಅವರೆಲ್ಲಾ ನನ್ನನ್ನು ಒಂದಲ್ಲ ಒಂದು ರೀತಿಯಿಂದ ಸಾಕಿ, ಸಲಹಿ ಭಕ್ತಿಮಾರ್ಗದಲ್ಲಿ ನಡೆಸುತ್ತಿದ್ದಾರೆ. ಅಂದರೆ ತಮ್ಮನ್ನು ಅತ್ಯಂತ ಕೆಳಗಿನ ಸ್ತರದ ತಿರಸ್ಕರಿಸಲ್ಪಟ್ಟವರ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿರುವ ಬಸವಣ್ಣನವರಿಗೆ ಅವರೆಲ್ಲ ಎಷ್ಟು ಪ್ರಿಯರಾಗಿದ್ದರೆಂಬುದು ತಿಳಿದುಬರುತ್ತದೆ. ಮತ್ತೆ ಮತ್ತೆ ತನ್ನನ್ನು ಉತ್ತಮ ಕುಲದಲ್ಲಿ ಹುಟ್ಟಿದವನೆಂದು ಹೇಳುವವರ ಬಾಯಿ ಮುಚ್ಚಿಸಲೆಂದು ಹಾಗೂ ಇದರಿಂದ ತನ್ನಲ್ಲಿ ಅಹಂಕಾರ ಮೊಳಕೆಯೊಡೆಯಬಹುದೆಂಬ ಭಯದಿಂದ ಬಸವಣ್ಣನವರು:

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ
ಕಕ್ಕಯ್ಯನೊಕ್ಕುದನಿಕ್ಕ, ನೋಡಯ್ಯಾ
ದಾಸಯ್ಯ ಶಿವದಾನವನೆರೆಯ ನೋಡಯ್ಯಾ
ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸು
ಉನ್ನತಮಹಿಮ ಕೂಡಲಸಂಗಮದೇವಾ, ಶಿವಧೋ! ಶಿವಧೋ!

ಈ ಕುಲಮದ ಸುಲಭವಾಗಿ ಗೆಲ್ಲುವಂತಹುದಲ್ಲ. ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೂ

ಯಾವಾಗಲೋ ಅದರಿಂದ ಹೊರಬಂದು ಪರಿಪರಿಯಾಗಿ ಅದನ್ನು ನಿವಾರಿಸಿಕೊಳ್ಳುವಲ್ಲಿ ಬಸವಣ್ಣನವರು ಬಹಳ ಹೆಣಗಾಡಿದ್ದಾರೆ. ಒಂದುವೇಳೆ ತಾನು ಉತ್ತಮ ಕುಲದಲ್ಲಿ ಹುಟ್ಟಿದನೆಂದು ಹೇಳಿಕೊಂಡರೆ ಕಕ್ಕಯ್ಯ ಪ್ರಸಾದ ಕೊಡಲಾರ, ದಾಸಯ್ಯ ಮಜ್ಜಿಗೆ ನೀಡಲಾರ. ಮಾದಾರ ಚನ್ನಯ್ಯ ನನ್ನನ್ನು ಯಾವುದಕ್ಕೂ ಮನ್ನಿಸಲಾರ. ಅಂದರೆ ಎಲ್ಲಕ್ಕಿಂತ ಮುಖ್ಯವಾಗಿ, ಚನ್ನಯ್ಯನ ಮನ್ನಣೆಯನ್ನು ಬಸವಣ್ಣನವರು ಬಯಸಿದ್ದಾರೆ. ಸಮಾಜದಲ್ಲಿ ಸಕಲ ಜಾತಿಯುವರೊಂದಿಗೆ ಹೆಜ್ಜೆ ಹಾಕುತ್ತಾ ತಮ್ಮ ಅಹಂಕಾರವನ್ನು ನಿರಸನಗೊಳಿಸಿಕೊಂಡು, ಎಲ್ಲರೊಡನೆ ತಮ್ಮನ್ನು ಗುರುತಿಸಿಕೊಳ್ಳುವ ಅವರ ಸಾಧನೆಯ ಔನ್ನತ್ಯವನ್ನು ಇಲ್ಲಿ ಕಾಣಬಹುದು. ಹಾಗೆಯೇ ಮುಂದುವರೆದು:

ಹರನು ಮೂಲಿಗನಾಗಿ, ಪುರಾತರೊಳಗಾಗಿ
ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯ
ಕಳೆದ ಹೊಲೆಯನೆಮ್ಮಯ್ಯ; ಜಾತಿಸೂಚಕ;
ಮಾದಾರನ ಮಗ ನಾನಯ್ಯಾ
ಪನ್ನಗಭೂಷಣ ಕೂಡಲಸಂಗಯ್ಯಾ
ಚನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ

ಹೊಲೆತನವೆಂಬುದು ಎಲ್ಲರಲ್ಲುಂಟು. ಹೊಲಸು ತಿಂಬುವವ ಹೊಲೆಯನೇ ಹೊರತು ಹುಟ್ಟಿನಿಂದ ಅದು ನಿರ್ಧಾರಕವಾಗಿ ಬಾರದು. ಯಾರನ್ನು ಕೀಳುಕುಲದವರೆಂದು ಕರೆಯುತ್ತಾರೆಯೋ ಆ ಮಾದಾರ ನನ್ನ ತಂದೆ. ಈತ ಹರನ ಮೂಲಪುರುಷನಾಗಿ ಪುರಾತನರ ವಂಶಪರಂಪರೆಯಲ್ಲಿ ಬಂದವನು. ಚನ್ನಯ್ಯ ನನ್ನ ಮುತ್ತಯ್ಯನ ಅಜ್ಜ ಎಂದು ಹೇಳುವ ಬಸವಣ್ಣನವರು ತಮ್ಮನ್ನು ಎಷ್ಟರಮಟ್ಟಿಗೆ ಅತ್ಯಂತ ಕೆಳಸ್ತರದವರೊಡನೆ ಸಮೀಕರಿಸಿಕೊಂಡಿದ್ದರೆಂದರೆ ಇದರಾಚೆಗೆ ಹೇಳಲು ಏನೂ ಉಳಿದಿರಲಿಲ್ಲ. ಹಾಗೆಯೇ ಬಸವಣ್ಣನವರನ್ನು 'ಭಕ್ತಿ ಭಂಡಾರಿ' ಎಂದು ಲೋಕ ಕರೆಯುತ್ತಿದ್ದರೂ 'ಎನ್ನ ಭಕ್ತನೆಂಬರು', 'ಭಕ್ತಿ ಎಳ್ಳನಿತಿಲ್ಲ;', 'ಭಕ್ತಿ ಇಲ್ಲದ ಬಡವ ನಾನಯ್ಯ', 'ಎನ್ನಲ್ಲಿ ಭಕ್ತಿ ಸಾಸಿವೆಯ ಷಡ್ಭಾಗದಿನಿತಿಲ್ಲ;' 'ಆನು ಭಕ್ತನಲ್ಲಯ್ಯಾ: ಆನು ವೇಷಧಾರಿಯಯ್ಯಾ' ಇತ್ಯಾದಿಯಾಗಿ ಹೇಳಿಕೊಂಡಿರುವ ಬಸವಣ್ಣನವರು ಭಕ್ತಿಯೆಂಬುದನ್ನು ಅಥವಾ ಭಕ್ತಿಶ್ರೀಮಂತಿಕೆಯನ್ನು 'ಕಕ್ಕಯ್ಯನ ಮನೆಯಲ್ಲು ಮತ್ತು ಚೆನ್ನಯ್ಯನ ಮನೆಯಲ್ಲೂ ಬೇಡಿದೆ' ಎಂದು ಮಾರ್ಮಿಕವಾಗಿ ಹೇಳಿಕೊಂಡಿದ್ದಾರೆ.

ಇಂತಹ ಪುರಾತನರಲ್ಲಿ ತನುಮನದಿಂದ ಭಕ್ತಿಯ ಭಿಕ್ಷೆ ಬೇಡಿದಾಗ ನನ್ನ ಪಾತ್ರೆಗೆ ಅವರು ಭಕ್ತಿಯನ್ನು ತುಂಬಿದರು. ಇದರಿಂದ ಎನ್ನಲ್ಲಿ ಅಹಂಕಾರವಳಿದು ಸಮಷ್ಟಿಚಿಂತನೆ ವಿಶಾಲವಾಯಿತು ಎಂದು ತಮ್ಮ ಬಗೆಗೆ ತಾವೇ ಹೇಳಿಕೊಂಡಿದ್ದಾರೆ. ಅಂದರೆ ಮಾದಾರ ಚನ್ನಯ್ಯನ ಜೊತೆ ಅತ್ಯಂತ ವಿನೀತಭಾವದಿಂದ ಸಮೀಕರಿಸಿಕೊಂಡು ತಮ್ಮ ನಿಲುವನ್ನು ಅನಾವರಣಗೊಳಿಸಿದ್ದಾರೆ. ಹೀಗೆ ಮುಂದುವರೆದು:

ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡಲ್ಲಿ ಚೆನ್ನ
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ
ಸವಿದು ನೋಡಿ ಅಂಬಲಿ ರುಚಿಯಾಯಿತ್ತೆಂದು
ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ

ಚನ್ನಯ್ಯನ ನಡೆನುಡಿ ಎಲ್ಲವೂ ಉತ್ತಮವಾದುದೆ. ಆತ ಭಕ್ತಿಯಿಂದ ಅರ್ಪಿಸಿದ ಅಂಬಲಿಯನ್ನು ಪ್ರತ್ಯಕ್ಷ ಶಿವನೇ ಬಂದು ಸ್ವೀಕರಿಸಿದ್ದನೆಂದರೆ ಅದು ಕಡಿಮೆ ಸಂಗತಿಯೇನಲ್ಲ. ಅಂದರೆ, ಅಂಬಲಿಯನ್ನು ತನಗಾಗಿ ತಯಾರಿಸದೇ ನಿತ್ಯವೂ ಶಿವನಿಗಾಗಿ ಮೀಸಲಿಟ್ಟು ನಂತರ ಉಳಿದದ್ದನ್ನು ಪ್ರಸಾದವೆಂದು ಸ್ವೀಕರಿಸುತ್ತಾ ಬಂದಿರುವುದು ನೋಡಿದರೆ, ಆತನ ಅಂತರಂಗದಲ್ಲಿ ಶಿವನ ಕುರಿತಾಗಿ ಎಂತಹ ಭಾವನೆಯಿತ್ತೆಂಬುದು ಅರಿವಾಗುತ್ತದೆ. ಪುರೋಹಿತಶಾಹಿಗಳಿಗಿದ್ದ ಮಡಿ, ಮೈಲಿಗೆ ಹುನ್ನಾರಗಳನ್ನು ನಿರಾಕರಿಸಿ ಪದಾರ್ಥ-ಪ್ರಸಾದ ಭೇದಗಳ ಆಚೆ ಬಸವಣ್ಣನವರು ನಿಂತಿದ್ದರು. ಜಾತಿಗಳ ಆಧಾರದ ಮೇಲೆ ಮನುಷ್ಯನ ವ್ಯಕ್ತಿತ್ವ ಅಳೆಯುವ ವ್ಯವಸ್ಥೆ ಅಂದು ಎಷ್ಟೊಂದು ಘೋರವಾಗಿತ್ತೆಂದರೆ ಊಹಿಸಿಕೊಳ್ಳಲೂ ಅಸಾಧ್ಯ. ಇದರ ಬೇರನ್ನು ಕಿತ್ತೆಸೆಯುವ ಸಾಹಸ ಬಸವಾದಿ ಪ್ರಮಥರು ಮಾಡಿದ ಕ್ರಾಂತಿ ಜಗತ್ತಿನ ಇತಿಹಾಸದಲ್ಲಿ ಹೊಸದು.

ಮಾದಾರ ಚೆನ್ನಯ್ಯನ ಕಾಯಕ-ದಾಸೋಹ ಕುರಿತು ಬಸವಣ್ಣನವರಿಗೆ ಎಷ್ಟು ಹೊಗಳಿದರೂ ತೃಪ್ತಿಯಿಲ್ಲ. ನೇರ ತಮ್ಮ ಭಕ್ತಿಭೂಮಿಕೆಗೆ ಅಡಕವಾಗಿರಿಸಿಕೊಂಡು ತಮ್ಮ ಉಸಿರಿಗೆ ಚೆನ್ನಯ್ಯ ಉಸಿರಾಗಿದ್ದ ಎಂಬುದನ್ನು ಸುಮಾರು ಮೂವತ್ತು ಸಲ ತಮ್ಮ ವಚನಗಳಲ್ಲಿ ಬಸವಣ್ಣನವರು ಸ್ಮರಿಸಿದ್ದಾರೆ. ಆತನ ಘನವ್ಯಕ್ತಿತ್ವದ ಬಣ್ಣನೆಗೆ, ಧ್ವನಿಪೂರ್ಣತೆಯಂಥ ಸಂಗತಿಗಳಿಗೂ ಅವರ ವಚನಗಳು ಸಾಕ್ಷಿಯಾಗಿವೆ. ಆತನ ಪ್ರಾಸಾದಿಕ ಜೀವನದ ಮಹಿಮೆಯನ್ನು ಹೃದಯತುಂಬಿ ಬಸವಣ್ಣನವರು "ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ" ಎಂದು ಹೇಳುವ ಮೂಲಕ ವಚನಸಾಹಿತ್ಯಕ್ಕೊಂದು ಗರಿ ಮೂಡಿಸಿದ್ದಾರೆ.

**ಹರಿಹರನ ರಗಳೆಯಲ್ಲಿ :** ಚನ್ನಯ್ಯನು 'ಮಾದಾರ' ವೃತ್ತಿಗೆ ಸೇರಿದವನು. ಈತ ತಮಿಳುನಾಡಿನ ಕಾಂಚಿನಗರದಲ್ಲಿ ಕರಿಕಾಲ ಚೋಳರಾಜನ (ಕ್ರಿ.ಶ. 1070-1120) ಕುದುರೆಗಳಿಗೆ ಹುಲ್ಲು ತಂದು ಹಾಕುವ ಕಾಯಕದಲ್ಲಿ ನಿರತನಾಗಿದ್ದವನು. ಈತನ ಹುಟ್ಟು, ಬೆಳವಣಿಗೆ ಕುರಿತಾಗಿ ಯಾವ ವಿಚಾರಗಳು ತಿಳಿದುಬಂದಿರುವುದಿಲ್ಲ. ತಮಿಳುನಾಡಿನ ಕಾಂಚಿನಗರ ಎಲ್ಲಿ? ಬಸವಕಲ್ಯಾಣದ ಅನುಭವಮಂಟಪವೆಲ್ಲಿ? ಎತ್ತಣಿಂದೆತ್ತ ಸಂಬಂಧವಯ್ಯಾ... ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ಕನ್ನಡ ಕಲಿತು ವಚನರಚನೆ ಮಾಡಿ ಇತರರಿಗೆ ಮಾದರಿಯಾಗಿ ಬದುಕಿದವನು. ಈತನನ್ನು ಕುರಿತ ಬಹಳ ಪ್ರಸಿದ್ಧವಾದ ಕತೆಯೊಂದನ್ನು 13ನೇ ಶತಮಾನದಲ್ಲಿ ಹಂಪೆಯಲ್ಲಿದ್ದ ಹರಿಹರನ ರಗಳೆಯಲ್ಲಿ

ಕಾಣಬಹುದು.

ವಚನಕಾರರ ಪರಂಪರೆಯನ್ನು ಅನಂತರ ಮುಂದುವರೆಸಿಕೊಂಡು ಬಂದವರಲ್ಲಿ ಹರಿಹರ ಪ್ರಮುಖನಾಗಿದ್ದಾನೆ. "ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪಾಮರರ ಮೇಲೆ ಇಂದ್ರಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ಕಾನನ ವರತಂ ಪೊಗಳು ಕೆಡ ಬೇಡೆಲೆ ಮಾನವ ನೀನಹರ್ನಿಶಂ ನನೆಮೊಗಳರ್ಚಿಸು ನಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳಂಪನ" ಎಂದು ತನ್ನ ಸೋದರಳಿಯನಿಗೆ ಹೇಳಿದಂತೆ, ತಾನು ಚನ್ನಯ್ಯನಂಥವರ ಕುರಿತು ರಗಳೆ ಬರೆದಿರುವೆನೆಂದು ಪ್ರತಿಪಾದಿಸಿದ್ದಾನೆ. ಚೆನ್ನಯ್ಯನ ವ್ಯಕ್ತಿತ್ವ ಕುರಿತು "ಚೆನ್ನನ ನಿಧಿ, ಚೆನ್ನನ ಸುಧೆ, ಚೆನ್ನನ ಸಕಳಾಯಂ, ಚೆನ್ನನಮೃತಮುದ್ರಂ ಚೆನ್ನ ರಕ್ಷಿಸುಗೆನ್ನಂ ಚೆನ್ನನ ಸುತನೆಂದು ಹಂಪೆಯ ವಿರೂಪಾಕ್ಷ" ಎಂದು ವಿರೂಪಾಕ್ಷನಲ್ಲಿ ಹರಿಹರ ಮಹಾಕವಿ ಬೇಡಿರುವುದನ್ನು ಗುರುತಿಸಬಹುದು.

ಕಾಂಚಿಪಟ್ಟಣದಲ್ಲಿ ರಾಜನಾಗಿದಂ ಕರಿಕಾಳಚೋಳ ಮಹಾನ್ ಶಿವಭಕ್ತ ನಾಗಿದ್ದುದಲ್ಲದೆ ನಿತ್ಯವೂ ಶಿವನಿಗೆ ಪಂಚಪಕ್ವಾನ್ನ ಭೋಜನ ಉಣಬಡಿಸುತ್ತಿದ್ದನು. ನಂತರ ತಾನು ಶಿವಪ್ರಸಾದವನ್ನು ಸ್ವೀಕರಿಸುತ್ತಿದ್ದನು. ಆತನ ದಿನನಿತ್ಯದ ಊಟೋಪಚಾರ ಹೇಗಿತ್ತೆಂದರೆ:

ರನ್ನದಡ್ಡಣಿಗೆಗಳ ಮೇಲೆ ಬೆಳಗಂ ಕರೆವ
ಮುನ್ನೂರು ಹೊನ್ನ ಹರಿವಾಣಂಗಳಿಂ ಮೆರೆವ
ಕೆಲದ ಬಟ್ಟಲನಿರಿಸಿ ನಲಿನಲಿದು ಸಡಗರಿಸಿ
ಒಲವೆ ಎನ್ನಯ ಬಲವೆ ಭಲವೆ ಎಂದುತ್ಸವಿಸಿ
ದೇವಾನ್ನ ದಿವ್ಯಾನ್ನ ಅಮೃತಾನ್ನಮಂ ಬಡಿಸಿ
ಹಪ್ಪಳಂ ಚಿಲುಪಾಲ ಘಟ್ಟಿಗಳನಲ್ಲಲ್ಲಿ
ತುಪ್ಪಮಂ ಕೆನೆಮೊಸರು ಸಕ್ಕರೆಯನಲ್ಲಲ್ಲಿ
ಒಪ್ಪುವಾ ಹಲ ಪತ್ರಶಾಕಂಗಳೊಪ್ಪುತ್ತಿವೆ
ಉಪ್ಪುಗಾಯಂ ಕೆಲದೊಳೊಪ್ಪಿ ಬಡಿಸುತ್ತಮಿರೆ

ನಾನಾ ವಿಧವಾದ ಅನ್ನ, ತುಪ್ಪ, ಕೆನೆಮೊಸರು, ಸಕ್ಕರೆ, ಹಪ್ಪಳ ಇತ್ಯಾದಿ ಆಹಾರ ಪದಾರ್ಥಗಳನ್ನು ಬಂಗಾರದ ಅಡ್ಡಣಿಗೆಯ ಮೇಲೆ ಬಂಗಾರದ ತಟ್ಟೆಯಲ್ಲಿ ಚೋಳನು ಶಿವನಿಗೆ ತೃಪ್ತಿಯಾಗುವಂತೆ ಬಡಿಸುತ್ತಿದ್ದನು. ನಂತರ ಭಕ್ತಿಯಿಂದ ಶಿವನನ್ನು ಪ್ರಸಾದ ಸ್ವೀಕರಿಸುವಂತೆ ಭಿನ್ನವಿಸಿಕೊಳ್ಳುತ್ತಿದ್ದನು. ಈ ರೀತಿ ತಪ್ಪದೆ ನಿತ್ಯನೈವೇದ್ಯ ಸಡಗರದಲ್ಲಿ ನಡೆದೇ ಇತ್ತು. ಆದರೆ ಒಂದು ದಿನ ಎಂದಿನಂತೆ ಚೋಳ ಶಿವನ ಮುಂದೆ ನೈವೇದ್ಯವನ್ನಿಟ್ಟು ಭಕ್ತಿಯಿಂದ ಎಷ್ಟೇ ಕರೆದರೂ ಶಿವನು ಬಾರಲೇ ಇಲ್ಲ. ಚೋಳನು ತೆರೆಮರೆಯಲ್ಲಿ ನಿಂತು ಶಿವನಿಗಾಗಿ ಭಕ್ತಿಯಿಂದ ಬೇಡಿಕೊಂಡರೂ ನೈವೇದ್ಯವನ್ನು ಶಿವ ಸ್ವೀಕರಿಸಲಿಲ್ಲ. ಶಿವ ತನ್ನ ಭಕ್ತಿಯನ್ನು ಪರೀಕ್ಷಿಸುತ್ತಿರಬಹುದೆ! ತನ್ನ ಭಕ್ತಿಯನ್ನು ಲೆಕ್ಕಿಸದೆ ಹಾಗೂ ಕಿವಿಗೊಡದೆ

ಸುಮ್ಮನಿದ್ದಾನೆಂದು ಬಹಳ ದುಃಖಿತನಾದ ಚೋಳನು ತನ್ನ ಭಕ್ತಿಯಲ್ಲಿ ಏನಾದರೂ ವ್ಯತ್ಯಾಸವಾಗಿರುವುದೆ ಎಂದು ಚಿಂತಿಸುತ್ತಾ, ಖಡ್ಗದಿಂದ ತನ್ನ ಶಿರವನ್ನು ಕಡಿದುಕೊಂಡು ಪ್ರಾಣತ್ಯಾಗಕ್ಕೂ ಸಿದ್ಧನಾದನು.

ಆಗ ಶಿವ ತಕ್ಷಣ ಪ್ರತ್ಯಕ್ಷನಾಗಿ 'ಕಂಡಯ್ಯ ಚೋಳ ನಿನಗಿನಿತು ಸೈರಣೆಯಿಲ್ಲ. ನನ್ನ ಮಾತನ್ನು ನಿಧಾನವಾಗಿ ಕೇಳು. ಏಕೆ ಪ್ರಾಣ ಕಳೆದುಕೊಳ್ಳುತ್ತೀಯಾ? ಇಂದು ನನಗೆ ಹಸಿವಿಲ್ಲ. ನಿನ್ನಂತೆ ಇರುವ ಮತ್ತೊಬ್ಬ ಭಕ್ತ ಚೆನ್ನಯ್ಯನ ಮನೆಯಲ್ಲಿ ಅಂಬಲಿ ಸೇವಿಸಿ ಬಂದಿದ್ದೇನೆ' ಎಂದು ಹೇಳುತ್ತಾನೆ. ಚೆನ್ನಯ್ಯನ ಅಂಬಲಿಯ ರುಚಿಯನ್ನು ಹರಿಹರ ಶಿವನ ಬಾಯಿಯಲ್ಲಿ ಹೀಗೆ ವಿವರಿಸಲ್ಪಟ್ಟಿದ್ದಾನೆ:

ಕೂತು ಮಾದರ ಚೆನ್ನನೊಡನುಂಡೆವೆಲೆ ಚೋಳ
ಕೇಳಂಬಕಳದ ಸವಿಯದನೇನ ಬಣ್ಣಿಪೆಂ
ಚೋಳಾದಿಗಲ್ಪಡೆಯರದನೇನ ಬಣ್ಣಿಪೆಂ
ಪಾಕದಿಂದಾದ ವಸ್ತುಗಳದಕೆ ಪಡಿಯಿಲ್ಲ
ಲೋಕದೊಳು ನಾ ಕಾಣೆ ಹೇಳುವಡೆ ಪ್ರತಿಯಿಲ್ಲ
ದೇವಾನ್ನವಮೃತಾನ್ನವೆಂದನಂ ಏಳಿಪುದು
ಭಾವಿಸುವಡಿನ್ನದಂ ಹೆಸರಿಡಲೆನಗರಿದು
ಕ್ಷೀರಮಧುವಿನ ರುಚಿಗಳಂತದಕೆ ಪಡಿಯಲ್ಲ
ಹಾರಯಿಸಿ ಸಿಹಿಯುಳ್ಳ ಸಕ್ಕರೆಯು ಸರಿಯಲ್ಲ
ಚೂತಫಲ ಜಂಬುಫಲ ದ್ರಾಕ್ಷಫಲ ರುಚಿಯಲ್ಲ

"ಮಾದಾರ ಚೆನ್ನಯ್ಯನ ಮನೆಯಲ್ಲಿನ ಆತನೊಂದಿಗೆ ಅಂಬಲಿಯನ್ನು ಸವಿದಿದ್ದೇನೆ. ಅದು ಯಾವ ಪಾಕಕ್ಕೂ, ಹಾಲಿನ ಬಂದಳತೆಗೂ ಸಮವಲ್ಲ. ಅದಕ್ಕೆ ಪ್ರತಿಯಾಗಿ ಯಾವ ಆಹಾರವೂ ಸಾಟಿಯಿಲ್ಲ. ದೇವಲೋಕದ ಅಮೃತಕ್ಕಿಂತಲೂ, ಸಿಹಿಯಾದ ಸಕ್ಕರೆಗಿಂತಲೂ, ಮಧುರವಾದ ದ್ರಾಕ್ಷಿಗಿಂತಲೂ ಮಿಗಿಲಾದುದು ಆ ರುಚಿ. ಆ ಅಂಬಲಿಗೆ ಏನು ಎಷ್ಟು ಹೇಗೆ ರುಚಿಯೆಂಬುದನ್ನು ವರ್ಣಿಸಲು ಸಾಧ್ಯವಿಲ್ಲ..." ಎಂದು ಶಿವ ಹೇಳುತ್ತಾ, ಹೇಳುತ್ತಾ "ಅಂತಹ ಅಪರೂಪದ ಭಕ್ತನೊಬ್ಬನ ಮನೆಯಲ್ಲಿ ಇದೇತಾನೆ ಅಂಬಲಿ ಕುಡಿದು ಬಂದಿದ್ದೇನೆ" ಎಂದು ಹೇಳಿದ. ಇದನ್ನು ಕೇಳಿದ ಚೋಳನಿಗೆ ಆತ ಯಾರು? ಎಂತಹ ಶಿವಭಕ್ತನಿರಬೇಕು? ನನಗಿಂತಲೂ ಶಿವಭಕ್ತಿಯಲ್ಲಿ ಮಿಗಿಲಾಗಿದ್ದಾನೆಂದರೆ ಆತನನ್ನು ನೋಡಲೇಬೇಕೆಂದು ಆಗಿಂದಾಗಲೇ ಆ ಭಕ್ತನ ಬಗೆಗೆ ತಿಳಿದುಕೊಳ್ಳಲು ಚೋಳನು ಅರಮನೆಯನ್ನು ತೊರೆದು ಹೊರಟೇಬಿಟ್ಟನು.

ಆತನ ಹೆಸರು ಮಾದಾರ ಚೆನ್ನಯ್ಯನೆಂದು ಚೋಳ ತಿಳಿದುಕೊಳ್ಳುತ್ತಲೇ ತಡಮಾಡದೆ ಆತ ಎಲ್ಲಿರುವನೆಂದು ಅರಸುತ್ತಾ ಅಲೆದಾಡತೊಡಗಿದನು. ಚೆನ್ನನನ್ನು ಎಷ್ಟು ಬೇಗ ಕಾಣುತ್ತೇನೋ ಎಂದು ಕಾತರಿಸುತ್ತಾ, ಕನವರಿಸುತ್ತಾ ಮಳೆ, ಗಾಳಿ, ಬಿಸಿಲನ್ನು ಲೆಕ್ಕಿಸದೇ

ಬರಿಗಾಲಲ್ಲಿ ನಡೆಯತೊಡಗಿದನು.

ತೋರಿರೇ ಚಂದ್ರಮೌಳಿಯ ಭಕ್ತ ಚೆನ್ನನಂ
ತೋರಿರೇ ಪರ್ದ್ವರ್ಣಕರ್ಣನಂ ಚೆನ್ನನಂ
ಚೆನ್ನನಂ ತೋರಿಯೆನ್ನಂ ಕಾಯ್ದುಕೊಳ್ಳದೇ
ಚೆನ್ನಯ್ಯನೆನ್ನಯ್ಯನಿರ್ದೆಡೆಯನರುಸಿಹಿರೆ
ಚೆನ್ನಯ್ಯನೆನ್ನಯ್ಯನಿರ್ದೆಡೆಯನರುಪಿರೇ
ಚೆನ್ನಯ್ಯನಿರ್ದ ಮನೆಯಾವುದೆಂದರಸುತಿರೆ

ಹೀಗೆ ರಾಜ ಬೇರೆಬೇರೆ ಕೇರಿ ಕೇರಿಗಳಲ್ಲಿ ಕಂಡಕಂಡವರನ್ನೆಲ್ಲಾ ಕೇಳುತ್ತಾ ಚೆನ್ನನಿದ್ದ ಕೇರಿಗೆ ಧಾವಿಸುತ್ತಾನೆ. ರಾಜನನ್ನು ನೋಡಿದ ಪರಿವಾರವೆಲ್ಲವೂ ಸಹ ಹಿಂದೆ ಹಿಂದೆ ಹೊರಟಿತು. ಇಡೀ ಊರಿಗೇ ಊರು ರಾಜನು ಎಲ್ಲಿಗೆ ಹೋಗುತ್ತಿದ್ದಾನೆಂದು ಅರಿಯಲು ಅವನನ್ನು ಹಿಂಬಾಲಿಸಿದರು. ಚೆನ್ನಯ್ಯ ಚೆನ್ನಯ್ಯ ಎಂದು ಕೂಗುತ್ತಾ, ಕೊನೆಗೆ ರಾಜ ಚೆನ್ನಯ್ಯನ ಗುಡಿಸಲಿಗೆ ಬಂದು ಆತನನ್ನು ನೋಡಿ ದೀರ್ಘದಂಡ ಸಾಷ್ಟಾಂಗ ನಮಸ್ಕಾರ ಮಾಡುತ್ತಾ, 'ಎನ್ನೊಡೆಯನಿದನಿದನೆ ಚೆನ್ನಯ್ಯನೆಂದೆನುತೆ ಎನ್ನಗುರುವಿದನಿದನೆ ಚೆನ್ನಯ್ಯನೆಂದೆನುತೆ ಎನ್ನ ಸುಧೆಯಿದನಿದನೆ ಚೆನ್ನಯ್ಯನೆಂದೆನುತೆ' ಚೆನ್ನಯ್ಯನ ಪಾದಗಳನ್ನು ಕೈಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಾನೆ. ತನ್ನ ಮನೆಗೆ ಆಗಮಿಸಿದ ಚೋಳಮಹಾರಾಜನನ್ನು ನೋಡಿದ ಮಾದಾರ ಚೆನ್ನ ಆಶ್ಚರ್ಯಚಕಿತನಾಗಿ ಏನೊಂದೂ ತಿಳಿಯದೆ ಕಕ್ಕಾಬಿಕ್ಕಿಯಾದನು. ಆತನ ಹೆಂಡತಿಯೂ ಸಹ ತಮ್ಮಿಂದ ಏನೋ ಅಚಾತುರ್ಯ ನಡೆದಿದೆ, ಅದಕ್ಕಾಗಿ ರಾಜನೇ ತಮ್ಮ ಮನೆಗೆ ಬಂದಿರುವನೆಂದು ಭಯಭೀತರಾದರು. ಮುಂದೇನು ಶಿಕ್ಷೆ ಕಾದಿದೆಯೋ? ಎಂದು ಮನದಲ್ಲಿ ಚಿಂತಿತರಾದರು. ಅನಂತರ ಧೈರ್ಯ ತಂದುಕೊಂಡು ಮಾದರ ಚೆನ್ನ ರಾಜನನ್ನು ಕುರಿತಾಗಿ:

ಏನಯ್ಯ ಜೋಳ ನೃಪನೀನಿಂತು ಬರ್ಪರೆ
ಭಾನುಕುಲದರ್ಪಣನೆ ನೀನಿಂತು ಬರ್ಪರೆ
ಎನ್ನ ಕುಲಮಂ ನೋಡದಿಂತು ಬರ್ಪರೆ ಚೋಳ
ಎನ್ನ ಜಾತಿಯನರಿಯದಿಂತು ಮಾಳ್ಪರೆ ಚೋಳ
ಎನುತೆ ಗದಗದಿಸಿ ಕಂಪಿಸಿ ಕಾಲು ಬಿಡು ಚೋಳ
ನಿನಗೆಯೆನ್ನಾಣೆ ಕಾಲು ಬಿಡು ಬಿಡು ಚೋಳ

ಚೆನ್ನಯ್ಯ ತನ್ನ ಆಳುದ್ದದ ದೇಹವನ್ನು ಗೇಣುದ್ದ ಮಾಡಿಕೊಂಡು ರಾಜನ ಮುಂದೆ ಬಾಗಿ "ದೊರೆಗಳೇ, ತಾವು ಸಾಮ್ರಾಜ್ಯವನ್ನು ಆಳುವವರು, ಸಾರ್ವಭೌಮರು, ಉತ್ತಮರು. ನಾನು ಹೀನಕುಲದವ, ನನಗೆ ನೀವು ನಮಸ್ಕಾರ ಮಾಡುವುದೆ? ನಾನು ನಿಮ್ಮ ಸೇವಕ, ಮೇಲಾಗಿ ಕೆಳವರ್ಗದವನಾದ ನನ್ನ ಕಾಲಿಗೆ ನೀವು ಬೀಳುವುದೆ? ನಮ್ಮನ್ನು ಯಾವ ಪಾಪಕ್ಕೆ ತಳ್ಳುವಿರಿ? ನೀವು ನನ್ನ ಪಾದಗಳನ್ನು ಬಿಡದಿದ್ದರೆ ಎನ್ನಾಣೆ" ಎಂದು ಭೀತನಾಗಿ

ಕಂಪಿಸುತ್ತಾ ಬೇಡಿಕೊಂಡನು. ಆಗ ಚೋಳರಾಜನು–

ಎನೆ ದೇವದೇವನೊಲಿದವನ ಕುಲವೇ ಸತ್ಕುಲಂ
ಘನ ಮಹಿಮನೊಲಿದ ಜಾತಿಯ ಜಾತಿ ನಿರ್ಮಲಂ
ಶರ್ವನೊಡನುಂಡ ನಿಮ್ಮ ಜಾತಿಗಾಂ ಸರಿಯೆ
ಸರ್ವಜ್ಞನಿಮ್ಮ ಕೆರ್ಪಿಂಗೆನ್ನ ಶಿವ ಸರಿಯೆ
ಬಿಡೆನಯ್ಯ ನಿಮ್ಮ ಪಾದವ ಬಿಟ್ಟು ಬಾಳ್ವೆನೇ

"ದೇವನೊಲಿದವನ ಕುಲವೇ ಸತ್ಕುಲ, ನಿನ್ನ ಜಾತಿಯೇ ನಿರ್ಮಲವಾದ ಜಾತಿ ಶಿವನೊಡನುಂಡ ನಿನ್ನ ಜಾತಿಗೆ ನನ್ನ ಜಾತಿ ಸಮನಾದೀತೇ?" 'ನಾನು ಎಷ್ಟೇ ದೊಡ್ಡ ಸಾಮ್ರಾಜ್ಯದ ಒಡೆಯನಾಗಿದ್ದರೂ ಪರಶಿವನು ನಿನ್ನ ಅಂಬಲಿಯ ರುಚಿ ಉಂಡಿದ್ದು ನೀನು ಈಗ ಶಿವನ ಒಡೆಯನಾಗಿದ್ದಿಯ...' 'ನಿನ್ನ ಭಕ್ತಿಯ ವಿಶೇಷತೆಯನ್ನು ಶಿವನಿಂದ ಕೇಳಿದೆನು'. 'ಚೆನ್ನಯ್ಯ ನಿನ್ನ ಪಾದರಕ್ಷೆಗಳಿಗೆ ಎನ್ನ ತಲೆ ಸರಿಬಾರದು' ಎನ್ನುತ್ತ ಚೋಳ ಮೈಮರೆತು "ನಿನ್ನ ಪಾದಗಳ ಬಿಟ್ಟು ನಾ ಬಾಳಲಾರೆ" ಎಂದು ಮತ್ತೆ ಮತ್ತೆ ಚೆನ್ನನಿಗೆ ನಮಸ್ಕರಿಸುತ್ತಾನೆ. ಚೋಳನಲ್ಲಿ ತಾನೇ ಶ್ರೇಷ್ಠ ಭಕ್ತನೆಂದುಕೊಂಡಿದು ಅಹಂಕಾರ ಮುರಿದು ಹೋಗಿ ಆ ಕ್ಷಣದಲ್ಲಿ ಜ್ಞಾನೋದಯವಾಯಿತು. 'ಹಲಕೆಲವು ಮಾತೇಕೆ? ನಡೆಯಿರಿ, ಶಿವನಲ್ಲಿಗೆ ಹೋಗೋಣ ನಿಮ್ಮ ಕುಲಗೋತ್ರದ ಇರುವನ್ನು ಅಲ್ಲಿಯೇ ಹೇಳಿರಿ' ಎನ್ನುತ್ತಾ ಚೋಳನು ಚೆನ್ನಯ್ಯನನ್ನು ಶಿವದೇವಾಲಯಕ್ಕೆ ಆನೆಯ ಮೇಲೆ ಕೂಡಿಸಿ ಮೆರವಣಿಗೆಯ ಮೂಲಕ ಸಕಲ ವಾದ್ಯವೃಂದ ಮತ್ತು ಗೌರವಾದರಗಳೊಂದಿಗೆ ಕರೆದೊಯ್ಯುತ್ತಾನೆ.

ಹಾಗೆ ದಾರಿಯುದ್ದಕ್ಕೂ ಚೋಳರಾಜನು ಮತ್ತೆ ಮತ್ತೆ ಚೆನ್ನಯ್ಯನನ್ನು ನೋಡಿ ನೋಡಿ ಕೈಮುಗಿಯುತ್ತಾನೆ. ಇದನ್ನೆಲ್ಲಾ ನೋಡಿದ ಚೆನ್ನಯ್ಯನಿಗೆ ದಿಗಿಲಾಯಿತು. "ತನಗೇಕೆ ಇಷ್ಟೊಂದು ಗೌರವ, ತನ್ನಿಂದ ಎಂತಹ ತಪ್ಪಾಗಿರಬಹುದು" ಎಂದು ಚಿಂತಿಸತೊಡಗಿದ. ಅಷ್ಟರಲ್ಲಿ ಶಿವದೇವಾಲಯ ಬರುತ್ತಿದ್ದಂತೆ ಚೋಳರಾಜನು ತಾನೇ ಮೊದಲು ಕುದುರೆಯಿಂದಿಳಿದು, ಚೆನ್ನಯ್ಯನನ್ನು 'ಆನೆಯಿಂದಿಳುಹಿ ಮೆಲ್ಲನೆ ಬಂದು ಕೈಗೊಟ್ಟು ದಾನನಿಧಿ ಚೆನ್ನನಂ ಸಂತಸದೆ ಮುಂತಿಟ್ಟು' ದೇವಾಲಯದೊಳಕ್ಕೆ ಕೈಹಿಡಿದು ಕರೆದೊಯ್ಯುತ್ತಾನೆ. ಶಿವದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ಶಿವನನ್ನು ನಮಸ್ಕರಿಸುತ್ತಾ ಮಾದಾರ ಚೆನ್ನಯ್ಯ:

ಚೋಳ ನೀಂ ಪಿಡಿತರಿಸಿದೇಂ ತಪ್ಪ ಮಾಡಿದೆನೆ
ಹೇಳಯ್ಯ ನಿಮ್ಮಲ್ಲಿ ಪದವಿಯಂ ಬೇಡಿದೆನೆ
ಅರಿಯದಂಬಲಿಯನರ್ಪಿಸಿದೊಡಿಂತಿರಿವರೆ
ಹೆರೆಸೂಡಿದನೆ ತೋರಿ ಮಾರಿ ನೆರೆ ದೂರುವರೆ
ಮೇದಿನಿಗೆ ಬೀರಿ ಗರವಾದುದೆನ್ನಯ ಭಕ್ತಿ

ಎಂದು ಶಿವನಲ್ಲಿ 'ನಾನೆಂತು ತಪ್ಪು ಮಾಡಿದೆನೆ ಹೇಳಯ್ಯಾ? ನಿನಗೆ ಅಂಬಲಿಯನ್ನು

ಅರ್ಪಿಸಿದ್ದೇ ತಪ್ಪಾಯ್ತು. ನೀನು ಹೀಗೆ ಮಾಡಬಹುದೆ? ರಾಜನೊಬ್ಬ ಯಕಃಶ್ಚಿತ್ ಹೀನಕುಲದವನಾದ ನನ್ನನ್ನು ಹೀಗೆ ನಿನ್ನ ಸನ್ನಿಧಾನಕ್ಕೆ ವೈಭವದಲ್ಲಿ ಮೆರವಣಿಗೆಯ ಮೂಲಕ ಕರೆದುಕೊಂಡು ಬರಬಹುದೆ? ನಾನಾವ ಪದವಿ ಬೇಡಿರುವೆ? ಏನೂ ಅರಿಯದ ನಾನು ಕೇವಲ ಅಂಬಲಿ ಪ್ರಸಾದವನ್ನು ಅರ್ಪಿಸಿದ್ದಕ್ಕೆ ಇಂತಹ ಬದಲಾವಣೆಯೆ' ಎಂದು ಚೆನ್ನಯ್ಯ ಪರಿತಪಿಸುತ್ತಾ "ಇನ್ನು ನಾನು ಶಿವನ ಮುಂದೆಯೇ ಪ್ರಾಣತ್ಯಾಗ ಮಾಡುತ್ತೇನೆ" ಎಂದು ಶಪಥ ಮಾಡುತ್ತಾನೆ. ಆಗ ಶಿವನು ಅವನನ್ನು ತಡೆದು, 'ಮೂರ್ಖತನದಲ್ಲಿ ಮಾತಾಡಬೇಡ. ನಿನ್ನ ಭಕ್ತಿ ಜಗತ್ತಿಗೆ ತಿಳಿಯಲೆಂದು ಈ ರೀತಿ ಮಾಡಿಹೆನೆಂದು' ಶಿವ ಸಮಾಧಾನದಲ್ಲಿ ನುಡಿಯುತ್ತಾನೆ.

ಆಡಂಬರವನುಳಿದ ಭಕ್ತಿಯಭಿಮಾನಿಯಂ<br>
ಭಾಪು ಮಾದರ ಚೆನ್ನ ಪೂತು ಮಾದರ ಚೆನ್ನ<br>
ಸೋಪಾಧಿಕಂ ಪುಗದ ಶೈವ ಮಾದರ ಚೆನ್ನ<br>
ಗುಪ್ತಪ್ರಜೆಯ ಚೆನ್ನ ಗುರುತರಾಜ್ಞೆಯ ಚೆನ್ನ<br>
ಆಪ್ತಗುಣನಿಧಿ ಚೆನ್ನ ಎನ್ನ ಭಕ್ತಿಯ ಚೆನ್ನ

ಎಂದು ಕೊಂಡಾಡುತ್ತಾನೆ. ಆ ಕ್ಷಣದಲ್ಲಿ ಮೋಡದಿಂದ ಹೂಮಳೆ ಸುರಿಯಲಾರಂಭಿಸಿತು. ಗಗನದಲ್ಲಿ ದುಂದುಭಿಗಳು ಮೊಳಗಿದವು. ನಂತರ ಶಿವನು ಮಾದಾರ ಚೆನ್ನಯ್ಯನನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಕರೆದುಕೊಂಡು ಹೋದನೆಂದು ಹರಿಹರ ವಿವರಿಸಿದ್ದಾನೆ. ಅಷ್ಟೇ ಅಲ್ಲ, ಕೈಲಾಸದಲ್ಲಿ ಚೆನ್ನಯ್ಯನಿಗೆ ಸಡಗರದಲ್ಲಿ ಗಣಪದವಿಯನ್ನು ದಯಪಾಲಿಸಿ ತನ್ನ ಪತ್ನಿಯಾದ ಗಿರಿಜೆಗೆ ಸಂತೋಷದಿಂದ ಚೆನ್ನನ ಪರಿಚಯ ಮಾಡಿದನೆಂದು ಚಿತ್ರಿಸಿದ್ದಾನೆ.

ಈ ರೀತಿ ಚೆನ್ನಯ್ಯನ ಗುಪ್ತಭಕ್ತಿ, ನಿಷ್ಕಾಮ ಕಾಯಕ, ನಿರಾಡಂಬರ ವ್ಯಕ್ತಿತ್ವ ಎಲ್ಲವೂ ಎಲ್ಲೆಡೆಗೂ ಹಬ್ಬುತ್ತದೆ. ಚೆನ್ನ ತನ್ನ 60 ವರ್ಷಗಳ ಜೀವಿತಾವಧಿಯುದ್ದಕ್ಕೂ ಸರ್ವಸ್ವವನ್ನೂ ಶಿವಾರ್ಪಣೆ ಮಾಡಿ ಉಳಿದದ್ದನ್ನು ತನ್ನ ಧರ್ಮಪತ್ನಿಯೊಂದಿಗೆ ಸೇವಿಸುತ್ತಿದ್ದನು. ಈತನ ಅಂಬಲಿಯ ಒಂದು ಸುರುಕಿನ ಸವಿರುಚಿ ನೋಡಿದ್ದ ಶಿವ ತನ್ನ ಪದವಿಯನ್ನೇ ಕೊಡಬಹುದೆಂದುಕೊಂಡ. ಇನ್ನೊಂದು ಸುರುಕಿನ ರುಚಿಗೆ ಇನ್ನೇನು ಕೊಡುವುದು? ಎಂದು ಶಿವನೇ ಅಂಜಿ ಚಿಂತಿಸಿದನಂತೆ.

ಅಂತಹ ಪರಮಭಕ್ತ ಶರಣ ಮಾದಾರ ಚೆನ್ನಯ್ಯ. ಹೀಗೆ ಮಾದಾರ ಚೆನ್ನಯ್ಯನ ಮನೆಯಲ್ಲಿ ಶಿವನು ಅಂಬಲಿ ಉಂಡಿದ್ದರಿಂದ ಆಗಮಗಳು ನಡುಗಿದವು. ಪುರಾಣ–ವೇದ–ಶಾಸ್ತ್ರಗಳು, ಜಪ–ತಪ–ಸಂಧ್ಯಾವಂದನೆಗಳು ಸಮಾಧಿಯಾದವು. ಸಾವಿರಾರು ವರ್ಷಗಳಿಂದ ನಡೆದು ಬಂದಿದ್ದ ಅರ್ಥಹೀನ ನಿಯಮಗಳೆಲ್ಲ ಸಡಿಲಗೊಂಡವು. ಹರಿಹರನು ತನ್ನ ರಗಳೆಯ ಮೂಲಕ ಒಂದೆಡೆ ಶ್ರಮಸಂಸ್ಕೃತಿಯ ಪರಿಚಯವನ್ನು ಎತ್ತಿಹಿಡಿಯುತ್ತ ಇನ್ನೊಂದೆಡೆ ಪ್ರಭುತ್ವದ ನಿರಾಕರಣೆಯನ್ನೂ ಸಮರ್ಥವಾಗಿ ಮಾಡಿದ್ದಾನೆ. □

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಜ್ಞಾನವನ್ನು ಆಚರಣೆಗೆ ತಂದಾಗ ಮಾತ್ರ ವ್ಯಕ್ತಿತ್ವ ವಿಕಾಸ**

ಪುಸ್ತಕದಿಂದ ಓದಿದ ಜ್ಞಾನವನ್ನು ಜೀವನದಲ್ಲಿ ಆಚರಣೆಗೆ ತಂದಾಗ ಮಾತ್ರ ವ್ಯಕ್ತಿತ್ವ ವಿಕಾಸಗೊಳ್ಳಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 25ರಂದು ದೇವೀರಮ್ಮನಹಳ್ಳಿಯಲ್ಲಿ ವಿಸ್ಡಂ ಟೆಕ್ನೋ ಶಾಲೆಯ ನವೀಕೃತ ಕಟ್ಟಡ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು.

ಗ್ರಂಥಾಲಯಕ್ಕಿಂತ ಮಿಗಿಲಾದ ಜ್ಞಾನ ಭಂಡಾರ ಮತ್ತೊಂದಿಲ್ಲ. ನಾವು ಓದಿದ ಪುಸ್ತಕಗಳ ಜ್ಞಾನವನ್ನು ನಮ್ಮ ಬದುಕಿನಲ್ಲಿ ಅನುಷ್ಠಾನಕ್ಕೆ ತಂದು ಉತ್ತಮ ಜೀವನ ರೂಪಿಸಿಕೊಳ್ಳಬೇಕು. ಜ್ಞಾನವಂತರಾಗಿ ಉತ್ತಮ ಜೀವನ ರೂಪಿಸಿಕೊಳ್ಳದಿದ್ದರೆ ಜ್ಞಾನದ ಸದುಪಯೋಗ ಆಗುವುದಿಲ್ಲ. ಅರಿವು, ಸಂಸ್ಕಾರ, ಸಾಮಾನ್ಯ ತಿಳಿವಳಿಕೆ ಸ್ವಗ್ರಹಿಕೆಯಿಂದಲೇ ಬರಬೇಕು. ಆಗ ಮಾತ್ರ ವ್ಯಕ್ತಿ ಪರಿಪೂರ್ಣನಾಗಿ ರೂಪುಗೊಳ್ಳಲು ಸಾಧ್ಯ. ಅಂತಹ ಶಿಕ್ಷಣ ಇಂದಿನ ಮಕ್ಕಳಿಗೆ ಅಗತ್ಯವಾಗಿದೆ ಎಂದು ಹೇಳಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್. ಸುರೇಶ್‌ಕುಮಾರ್‌ರವರು ವಿವೇಕವಿಲ್ಲದ ಜೀವನ ಅತ್ಯಂತ ಅಪಾಯಕಾರಿ. ಮಕ್ಕಳಿಗೆ ಪಠ್ಯಕ್ಕಿಂತ ಸಂಸ್ಕಾರ, ವಿವೇಕ, ಸಹನೆ, ಸಂಯಮದಂತಹ ಮೌಲ್ಯಗಳನ್ನು ಕಲಿಸುವ ನೈತಿಕ ಶಿಕ್ಷಣ ಪ್ರಸ್ತುತ ದಿನಮಾನದ ಅಗತ್ಯವಾಗಿದೆ. ಆ ನಿಟ್ಟಿನಲ್ಲಿ ವಿಸ್ಡಂ ಶಾಲೆ ಮಾದರಿ ಕಲಿಕಾ ಕ್ರಮ ಅಳವಡಿಸಿಕೊಂಡಿರುವುದು ಸ್ವಾಗತಾರ್ಹ. ಮಕ್ಕಳ ರಕ್ಷಣೆ ಹಾಗೂ ಮಾನವ ಹಕ್ಕುಗಳ ಕಾಯ್ದೆಗಳ ನಡುವೆ ಮಕ್ಕಳಿಗೆ ನೈತಿಕ ಶಿಕ್ಷಣ ನೀಡುವುದು ಸುಲಭದ ಮಾತಲ್ಲ. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಎರಡು ತಾಸಿಗೊಮ್ಮೆ ನೀರು ಕುಡಿಸಲು ಘಂಟೆ ಹೊಡೆಯುವ ಪದ್ಧತಿ ಪ್ರತಿ ಶಾಲೆಯಲ್ಲೂ ಜಾರಿಯಾಗಬೇಕು ಎಂದರು.

ಶಾಸಕರಾದ ದರ್ಶನ್ ಧ್ರುವನಾರಾಯಣರವರು ಮಕ್ಕಳು ಆನ್‌ಲೈನ್ ಹಾಗೂ ಮೊಬೈಲ್ ದಾಸರಾಗಿ ಅವರ ಕೈಬಲ ಹಾಗೂ ಕಣ್ಣಿನ ತೀಕ್ಷ್ಣತೆ ಕುಗ್ಗುತ್ತಿರುವುದರಿಂದ ಉತ್ತಮ ಕ್ರೀಡಾಪಟುಗಳಾಗಲು ಸಾಧ್ಯವಾಗುತ್ತಿಲ್ಲ ಎಂಬ ಆತಂಕಕಾರಿ ಅಂಶ ಬೆಳಕಿಗೆ ಬಂದಿದೆ. ಶಾಲೆಯಲ್ಲೂ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಶಿಕ್ಷಣ ಹಾಗೂ ಆರೋಗ್ಯ

ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈ ನಿಟ್ಟಿನಲ್ಲಿ ಅಧಿವೇಶನದಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯುತ್ತೇನೆ ಎಂದರು.

ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ ಮಾತನಾಡಿದರು. ವಿಸ್ಡಂ ಟೆಕ್ನೋ ಶಾಲೆಯ ಕಾರ್ಯದರ್ಶಿ ಶ್ರೀ ಮಂಜುನಾಥ್ ಸೋಮಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಲೆಯ ಅಧ್ಯಕ್ಷರಾದ ಶ್ರೀಮತಿ ಮಂಗಳ ಸೋಮಶೇಖರ್, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಶ್ರೀ ಕಳಲೆ ಕೇಶವಮೂರ್ತಿ, ಶ್ರೀ ಕುಂಬ್ರಹಳ್ಳಿ ಸುಬ್ಬಣ್ಣ, ಶ್ರೀ ಎಸ್. ಮಹದೇವಯ್ಯ, ಶ್ರೀ ಯು.ಎನ್. ಪದ್ಮನಾಭರಾವ್, ಶ್ರೀ ಎನ್.ವಿ. ವಿನಯಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ರಜನಿ ಸ್ವಾಗತಿಸಿದರು. ಶ್ರೀ ವಾಣಿ ವಂದಿಸಿದರು.

**ಜೆಎಸ್ಎಸ್ ವೈದ್ಯಕೀಯ ಶಾಲೆಯ ಸ್ಥಾಪನೆ ಮಾರಿಷಸ್‌ನ ಆರೋಗ್ಯ ಕ್ಷೇತ್ರದ ಮೈಲಿಗಲ್ಲು**

ಮಾರಿಷಸ್‌ನಲ್ಲಿ ಜೆಎಸ್ಎಸ್ ಸಂಸ್ಥೆ ವೈದ್ಯಕೀಯ ಶಾಲೆ ಸ್ಥಾಪಿಸಿರುವುದರಿಂದ ದೇಶದ ಆರೋಗ್ಯ ಕ್ಷೇತ್ರದಲ್ಲಿ ಮೈಲಿಗಲ್ಲು ಸ್ಥಾಪನೆಯಾದಂತಾಗಿದೆ ಎಂದು ಮಾರಿಷಸ್ ಗಣರಾಜ್ಯದ ಘನತೆವೆತ್ತ ಅಧ್ಯಕ್ಷರಾದ ಶ್ರೀ ಧರ್ಮಬೀರ್ ಗೋಖೂಲ್‌ರವರು ಫೆಬ್ರವರಿ 4ರಂದು ಮಾರಿಷಸ್‌ನಲ್ಲಿ ಸ್ಥಾಪಿಸಲಾಗಿರುವ ಜೆಎಸ್ಎಸ್ ಸ್ಕೂಲ್ ಆಫ್ ಮೆಡಿಸಿನ್ ಅನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಇಂತಹ ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರಿಂದ ಆರೋಗ್ಯ ರಕ್ಷಣಾ ಸಾಮರ್ಥ್ಯ ಜೊತೆಗೆ ಭಾರತ ಮತ್ತು ಮಾರಿಷಸ್ ದೇಶಗಳ ಶೈಕ್ಷಣಿಕ ಸಂಬಂಧಗಳನ್ನು ಬಲಪಡಿಸುತ್ತವೆ. ಜೆಎಸ್ಎಸ್ ವೈದ್ಯಕೀಯ ಕಾಲೇಜಿನ ಪ್ರಾರಂಭವು ಕೇವಲ ಶೈಕ್ಷಣಿಕ ಮೈಲಿಗಲ್ಲು ಮಾತ್ರವಲ್ಲ. ಇದು ಮಾರಿ?ಸ್‌ನಲ್ಲಿ ಆರೋಗ್ಯ ರಕ್ಷಣೆಯ ಶ್ರೇಷ್ಠತೆ ಮತ್ತು ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಬಲವಾದ ಅಡಿಪಾಯವನ್ನು ಹಾಕುತ್ತದೆ ಎಂದು ಹೇಳಿದರು.

ಪರಮಪೂಜ್ಯಗಳವರು ಆರೋಗ್ಯ ಶಿಕ್ಷಣವು ಜ್ಞಾನ, ಚಾರಿತ್ರ್ಯ, ಕರುಣೆ ಮತ್ತು ಸೇವೆಯ ಗುಣಗಳನ್ನು ಬೆಳೆಸಬೇಕಾದ ಪವಿತ್ರ ಜವಾಬ್ದಾರಿಯನ್ನು ಹೊಂದಿರುತ್ತದೆ. ಭಾರತ–ಮಾರಿಷಸ್ ಸಂಬಂಧಗಳನ್ನು ಬಲಪಡಿಸಲು ಮಾರಿಷಸ್‌ನಲ್ಲಿ ಭಾರತದ ಮಾಜಿ ಪ್ರಧಾನಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ದೃಷ್ಟಿಕೋನದಿಂದ ಪ್ರೇರಿತರಾಗಿ ಜೆಎಸ್ಎಸ್ ಶಿಕ್ಷಣ ಸಂಸ್ಥೆಯ ಪ್ರಯಾಣವು 2002ರಲ್ಲಿ ಪ್ರಾರಂಭಿಸಲಾಯಿತು. ಈಗ ವೈದ್ಯಕೀಯ ಶಾಲೆ ಪ್ರಾರಂಭವಾಗುತ್ತಿರುವುದು ಎರಡೂ ದೇಶಗಳ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದೆ ಎಂದು ತಿಳಿಸಿದರು.

ಆರೋಗ್ಯ ಮತ್ತು ಕಲ್ಯಾಣ ಸಚಿವರಾದ ಗೌರವಾನ್ವಿತ ಶ್ರೀ ಅನಿಲ್ ಕುಮಾರ್ ಬಚೂರವರು ಜೆಎಸ್ಎಸ್ ಸಂಸ್ಥೆಯು ಮಾರಿಷಸ್‌ನಲ್ಲಿ ಎಂಬಿಬಿಎಸ್ ಕೋರ್ಸ್ ಆರಂಭಿಸಿರುವುದು ಭವಿಷ್ಯದಲ್ಲಿ ದೇಶದ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಸಹಕಾರಿಯಾಗಲಿದೆ.

ವಿಶೇಷವಾಗಿ ಸಾಂಕ್ರಾಮಿಕವಲ್ಲದ ರೋಗಗಳು ಮತ್ತು ಮುಂಬರುವ ಆರೋಗ್ಯದ ಸವಾಲುಗಳನ್ನು ಪರಿಹರಿಸುವಲ್ಲಿ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

ಶಿಕ್ಷಣ, ವಿಜ್ಞಾನ ಮತ್ತು ಸಂಶೋಧನಾ ಸಚಿವರಾದ ಡಾ. ಕವಿರಾಜ್ ಶರ್ಮಾ ಸುಕೋನ್‌ರವರು ಈಗ ಆರಂಭಿಸಿರುವ ಕೋರ್ಸ್ ಅಂತಾರಾಷ್ಟ್ರೀಯ ಶಿಕ್ಷಣ ಕೇಂದ್ರವಾಗಿರುವ ಮಾರಿಷಸ್‌ನ ದೃಷ್ಟಿಕೋನಕ್ಕೆ ಹೊಂದಿಕೆಯಾಗುತ್ತದೆ. ಜೆಎಸ್‌ಎಸ್ ಎಹೆಚ್‌ಇಆರ್ ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಗಳನ್ನು ಹೊಂದಿರುವ ಅಂತಾರಾಷ್ಟ್ರೀಯ ಮಾನದಂಡವನ್ನು ಹೊಂದಿರುವ ಸಂಸ್ಥೆಯಾಗಿದೆ ಎಂದು ಶ್ಲಾಘಿಸಿದರು.

ಮಾರಿಷಸ್‌ನ ಭಾರತದ ಹೈಕಮಿಷನರ್‌ರಾದ ಶ್ರೀ ಅನುರಾಗ್ ಶ್ರೀವಾಸ್ತವರವರು ಮಾರಿಷಸ್ ದೇಶದಲ್ಲಿ ಜೆಎಸ್‌ಎಸ್ ಸಂಸ್ಥೆಯ ವೈದ್ಯಕೀಯ ಕಾಲೇಜಿನ ಸ್ಥಾಪನೆಯು ಎರಡೂ ದೇಶಗಳ ನಡುವಿನ ಆಳವಾಗಿ ಬೇರೂರಿರುವ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತದೆ. ಪ್ರಾದೇಶಿಕ ಶಿಕ್ಷಣ ಕೇಂದ್ರವಾಗಿ ಮಾರಿಷಸ್ ದೇಶವು ಹೊರಹೊಮ್ಮುತ್ತಿದೆ. ಶೈಕ್ಷಣಿಕ ಸಹಯೋಗ ಭಾರತದ ಹೈಕಮಿಷನ್‌ನ ನಿರಂತರ ಬೆಂಬಲವನ್ನು ನೀಡುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ "ಜೆಎಸ್‌ಎಸ್ ಎಹೆಚ್‌ಇಆರ್ ಮಾರಿಷಸ್ ವಿಷನ್ 2035" ಸಂಚಿಕೆಯನ್ನು ಬಿಡುಗೊಳಿಸಲಾಯಿತು. ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್‌ರವರುಗಳು ಮಾತನಾಡಿದರು. ಶ್ರೀಮತಿ ಬೃಂದಾ ಗೋಖೂಲ್, ಶ್ರೀ ಎಸ್.ಪಿ. ಮಂಜುನಾಥ್, ಮೊದಲಾದವರು ಉಪಸ್ಥಿತರಿದ್ದರು. ಮಾರಿಷಸ್ ಜೆಎಸ್‌ಎಸ್ ಎಹೆಚ್‌ಇಆರ್‌ನ ಕುಲಪತಿಗಳಾದ ಡಾ. ಪ್ರವೀಣ್ ಮೊಹದೇಬ್ ಸ್ವಾಗತಿಸಿದರು. ಕುಲಸಚಿವರಾದ ಶ್ರೀ ಕೆ.ಪಿ. ನವೀನ್ ವಂದಿಸಿದರು. ಶ್ರೀಮತಿ ಪ್ರಿಯಾ ಬನ್ಸಿ ಕಾರ್ಯಕ್ರಮ ನಿರೂಪಿಸಿದರು.

**ಆಕಾಶಕ್ಕೆ ಭರವಸೆ ತರುವ ವೈದ್ಯರು**

ಏರೋ ಮೆಡಿಕಲ್ ಸೈನ್ಸ್ ಶೈಕ್ಷಣಿಕ ಶ್ರೇಷ್ಠತೆಯನ್ನು ಮಾತ್ರವಲ್ಲದೆ ಮಾನವೀಯತೆಯ ಬಗ್ಗೆ ಆಳವಾದ ಬದ್ಧತೆಯನ್ನು ಸಹ ಒಳಗೊಂಡಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 13ರಂದು ಮೈಸೂರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಏರೋ ಮೆಡಿಕಲ್ ಸೈನ್ಸ್ ಫೆಲೋಶಿಪ್ ಪೂರ್ಣಗೊಳಿಸಿದ ಫೆಲೋಗಳ ಪದವಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪದವಿ ಪಡೆಯುವುದು ತರಬೇತಿಯ ಮುಕ್ತಾಯವಲ್ಲ, ಬದಲಾಗಿ ಉನ್ನತ ಕಲಿಕೆಯ ಆರಂಭ. ಜ್ಞಾನವು ಜವಾಬ್ದಾರಿಯಾಗಿ ರೂಪಾಂತರಗೊಳ್ಳುವ ಮತ್ತು ಕಲಿಕೆಯು ಸೇವೆಯಾಗಿ ವಿಕಸನಗೊಳ್ಳುವ ಮಹತ್ವದ ಕ್ಷಣ. ಹೆಲಿಕಾಪ್ಟರ್ ತುರ್ತು ವೈದ್ಯಕೀಯ ಸೇವೆಗಳಲ್ಲಿ ಸೇವೆ ಸಲ್ಲಿಸಲು ತಯಾರಿ ನಡೆಸುತ್ತಿರುವ ವೈದ್ಯರು ಅಪರೂಪದ ಮತ್ತು

ಬೇಡಿಕೆಯ ಹಾದಿಯನ್ನು ಪ್ರಾರಂಭಿಸಿದ್ದಾರೆ. ಸಮಯ ಮತ್ತು ಸಂಪನ್ಮೂಲಗಳು ಸೀಮಿತವಾಗಿರುವ ಮತ್ತು ಪ್ರತಿಯೊಂದು ನಿರ್ಧಾರವೂ ನಿರ್ಣಾಯಕವಾಗಿರುವ ಕೆಲವು ಅತ್ಯಂತ ಸವಾಲಿನ ಸಂದರ್ಭಗಳಲ್ಲಿ ನೀವು ಆರೈಕೆಯನ್ನು ನೀಡುತ್ತೀರಿ. ಜಗತ್ತು ನಿಮ್ಮನ್ನು 'ಹಾರುವ ವೈದ್ಯರು' ಎಂದು ಕರೆಯಬಹುದಾದರೂ, ನೀವು ಮೂಲಭೂತವಾಗಿ ಆಕಾಶಕ್ಕೆ ಭರವಸೆಯನ್ನು ತರುವ ವೈದ್ಯರು ಎಂದು ಹೇಳಿದರು.

ಐಸಿಎಟಿಟಿ ಸಂಸ್ಥಾಪಕ ನಿರ್ದೇಶಕರಾದ ಡಾ. ಶಾಲಿನಿ ನಲ್ವಾಡ್‌ರವರು ಐಸಿಎಟಿಟಿ ಏಷ್ಯಾದ ಅತಿದೊಡ್ಡ ಏರ್ ಆಂಬ್ಯುಲೆನ್ಸ್ ಸೇವಾ ಪೂರೈಕೆದಾರರಲ್ಲಿ ಒಂದಾಗಿದೆ. 2017ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯು ಬೆಂಗಳೂರು, ಹೈದರಾಬಾದ್, ಮುಂಬೈ, ದೆಹಲಿ ಮತ್ತು ಮೈಸೂರಿನಲ್ಲಿ ನೆಲೆಗಳನ್ನು ನಿರ್ವಹಿಸುತ್ತಿದೆ. ಇಲ್ಲಿಯವರೆಗೆ 2,600ಕ್ಕೂ ಹೆಚ್ಚು ಏರ್ ವರ್ಗಾವಣೆಗಳನ್ನು ಪೂರ್ಣಗೊಳಿಸಿದೆ ಎಂದರು

ಈ ಸಂದರ್ಭದಲ್ಲಿ ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಹೆಚ್. ಬಸವನಗೌಡಪ್ಪ, ಡಾ. ನೀಲ್ ದುರ್ಗೆ, ಡಾ. ರಾಹುಲ್ ಸಿಂಗ್, ಡಾ. ಡಿ. ನಾರಾಯಣಪ್ಪ ಉಪಸ್ಥಿತರಿದ್ದರು.

**ಭೀಮಣ್ಣ ಖಂಡ್ರೆ ವ್ಯಕ್ತಿ ಅಲ್ಲ ಶಕ್ತಿ**

ಶ್ರೀ ಭೀಮಣ್ಣ ಖಂಡ್ರೆಯವರು ಕೇವಲ ವ್ಯಕ್ತಿಯಾಗಿರಲಿಲ್ಲ ಅವರು ಸಮಾಜದ ಶಕ್ತಿಯಾಗಿ ಹೊರಹೊಮ್ಮಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 14ರಂದು ಬೆಂಗಳೂರಿನಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ಶಾಂತಿವರ್ಧಕ ಶಿಕ್ಷಣ ಸಂಸ್ಥೆಗಳ ವತಿಯಿಂದ ಏರ್ಪಡಿಸಿದ್ದ ನುಡಿನಮನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಶ್ರೀ ಭೀಮಣ್ಣ ಖಂಡ್ರೆಯವರ ಕೊಡುಗೆ ಅಪಾರ. ಪಕ್ಷ ನಿಷ್ಠೆ, ಆಡಳಿತದಲ್ಲಿ ದಕ್ಷತೆಯನ್ನು ಮೈಗೂಡಿಸಿಕೊಂಡಿದ್ದ ಅವರು, ಅತ್ಯುತ್ತಮ ನಾಯಕರಾಗಿದ್ದರು ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಬಸವಾದಿ ಶರಣರ ಆದರ್ಶಗಳನ್ನು ಖಂಡ್ರೆಯವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, 102 ವರ್ಷಗಳ ಕಾಲ ಸಾಮಾಜಿಕ ಚಿಂತನೆಯೊಂದಿಗೆ ಸಾರ್ಥಕ ಜೀವನ ನಡೆಸಿದರು. ಜಾತಿ ವರ್ಗ ಹಾಗೂ ಮೇಲುಕೀಳೆಂಬ ಭೇದಭಾವಗಳನ್ನು ಕಟುವಾಗಿ ಟೀಕಿಸಿ, 60ರ ದಶಕದಲ್ಲಿಯೇ ಅಸ್ಪೃಶ್ಯತೆಯ ವಿರುದ್ಧ ಧ್ವನಿ ಎತ್ತಿದ್ದರು. ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ಸಮಾಜ ನಿರ್ಮಾಣ ಮಾಡುವ ಕನಸನ್ನು ಕಂಡಿದ್ದವರು ಖಂಡ್ರೆಯವರು, ಬಡವ ಬಲ್ಲಿದರು ಗೌರವದ ಬದುಕನ್ನು ಜೀವಿಸಬೇಕೆಂದು ಹಂಬಲಿಸಿದ್ದರು. ಪರರ ಹಿತವೇ ಪರಮ ತಪ ಎಂದು ನಂಬಿದ್ದವರು ಭೀಮಣ್ಣ ಖಂಡ್ರೆಯವರು, ಜನಸೇವೆಯ ಸಂಕಲ್ಪವನ್ನು ತಮ್ಮ

ಜೀವನದ ಧ್ಯೇಯವಾಗಿಸಿಕೊಂಡಿದ್ದ ಸರಳ ಸಜ್ಜನಿಕೆಯ ಮೂರ್ತರೂಪವಾಗಿದ್ದರು ಎಂದರು.

ಸಮಾರಂಭದಲ್ಲಿ ಸಿರಿಗೆರೆ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಭಾಲ್ಕಿ ಶ್ರೀ ಹಿರೇಮಠದ ಶ್ರೀ ಬಸವಲಿಂಗ ಪಟ್ಟದ್ದೇವರು, ಶ್ರೀ ಗುರುಬಸವ ಪಟ್ಟದ್ದೇವರು, ಹುಲಸೂರು ಶ್ರೀಗಳು, ಬೆಲ್ದಾಳ ಶರಣರು, ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್, ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಬಸವರಾಜ ಬೊಮ್ಮಾಯಿ, ಕೇಂದ್ರದ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ, ಸಚಿವರುಗಳಾದ ಶ್ರೀ ಜಿ. ಪರಮೇಶ್ವರ, ಶ್ರೀ ಕೆ.ಹೆಚ್. ಮುನಿಯಪ್ಪ, ಶ್ರೀ ಎಂ.ಬಿ. ಪಾಟೀಲ್ ಶ್ರೀ ಬಿ.ಎಸ್. ಸುರೇಶ್, ಶ್ರೀ ಎನ್.ಎಸ್. ಭೋಸರಾಜು, ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಸತೀಶ್ ಜಾರಕಿಹೊಳಿ, ಶ್ರೀ ಡಿ. ಸುಧಾಕರ್, ಶ್ರೀ ಎಂ.ಸಿ. ಸುಧಾಕರ್, ಶ್ರೀ ಮಂಕಾಳ ವೈದ್ಯ, ಶ್ರೀ ಶಂಕರ್ ಎಂ. ಬಿದರಿ, ಶ್ರೀ ಅರವಿಂದ ಜತ್ತಿ, ಶ್ರೀ ಅಮರ್ ಖಂಡ್ರೆ, ಶ್ರೀ ಈಶ್ವರ್ ಖಂಡ್ರೆ ಹಾಗೂ ಮಾಜಿ ಸಚಿವರುಗಳು, ಶಾಸಕರುಗಳು ಉಪಸ್ಥಿತರಿದ್ದರು,

**ಪರಿಸರ ನಾಶ ಮಾಡದಿರಿ**

ಭಗವಂತನ ಸೃಷ್ಟಿಯ ನದಿ, ಸರೋವರ, ನೀರು, ಮಣ್ಣು, ಗಿಡಮರ, ಪರಿಸರ ಸೇರಿದಂತೆ ಸುಂದರವಾದ ಪ್ರಕೃತಿಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 19ರಂದು ಕುಶಾಲನಗರ ತಾಲ್ಲೂಕು ತೊರೆನೂರು ಶ್ರೀ ವಿರಕ್ತಮಠದ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳು ಹಾಗೂ ಶ್ರೀ ಮಹಾಂತ ಸ್ವಾಮಿಗಳ ಸಂಸ್ಮರಣೋತ್ಸವದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. 12ನೇ ಶತಮಾನದ ಶರಣರ ಚಿಂತನೆಗಳು ಕಾಲಘಟ್ಟಕ್ಕೂ ಪ್ರಸ್ತುತವಾಗಿವೆ. ಎಲ್ಲ ವಚನಗಳಲ್ಲಿ ವೈಜ್ಞಾನಿಕ ನೆಲೆಗಟ್ಟು ಇದೆ. ಅನುಭವ ಮಂಟಪದಲ್ಲಿ ಅಲ್ಲಮಪ್ರಭುದೇವರಷ್ಟೇ ಸಮಾನ ಅವಕಾಶಗಳು ಎಲ್ಲ ಶರಣರಿಗಿತ್ತು. ಭಗವಂತ ಮತ್ತು ಭಕ್ತನ ನಡುವಿನ ನೇರ ಒಡನಾಟವೇ ಇಷ್ಟಲಿಂಗದ ಪರಿಕಲ್ಪನೆಯಾಗಿದೆ. ಅಂತರಂಗ ಬಹಿರಂಗದ ಅಹಂ ದೂರವಾದರೆ ಮಾತ್ರ ಭಗವಂತನ ಬಳಿ ತೆರಳಲು ಸಾಧ್ಯ ಎಂದರು.

ಮಾಜಿ ಶಾಸಕರಾದ ಶ್ರೀ ಎ.ಟಿ. ರಾಮಸ್ವಾಮಿಯವರು ಆಧುನಿಕ ಜೀವನ ಪದ್ಧತಿಯಿಂದಾಗಿ ನೈತಿಕ ಮೌಲ್ಯಗಳು ನಶಿಸುತ್ತಿವೆ. ದ್ವೇಷ ಅಸೂಯೆಗಳಲ್ಲಿ ಜನ ಮುಳುಗಿದ್ದಾರೆ. ಇಂದಿನ ಮಕ್ಕಳಿಗೆ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಶಿಕ್ಷಣದ ಅಗತ್ಯವಿದೆ. ಈಗ ಮನುಷ್ಯನಿಗೆ ಎಲ್ಲವೂ ಇದೆ. ಪ್ರತಿಯೊಬ್ಬರೂ ನೆಮ್ಮದಿಯ ಹುಡುಕಾಟದಲ್ಲಿದ್ದಾರೆ.

ಬಹಳಷ್ಟು ಸಂಪಾದಿಸಿದರೂ ಬರಿಗೈಲಿ ಹೋಗುವ ಮನುಷ್ಯ ಪ್ರಕೃತಿ ಸಂಪತ್ತನ್ನು ನಾಶ ಮಾಡಿದ ಪರಿಣಾಮವೇ ಜಾಗತಿಕ ತಾಪಮಾನ ಏರಿಕೆ. ವಾಯುಭಾರ ಕುಸಿಯುತ್ತಿದೆ. ಹವಾಗುಣದ ತಾಳ ತಪ್ಪಿದೆ. ಭೂಮಿಯ ಮೇಲೆ ಪ್ರಾಣಿ ಪಕ್ಷಿಗಳಷ್ಟು ನೆಮ್ಮದಿಯ ಜೀವನ ಮನುಷ್ಯನಿಗೆ ಇಲ್ಲ. ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಹಾಗಾಗಿ ಇಂದು ಪರಿಸರ ಸಮತೋಲನದ ಸಮ್ಮೇಳನ ಅಗತ್ಯವಿದೆ ಎಂದು ಹೇಳಿದರು.

ಕೊಡಗು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಅಶೋಕ್ ಸಂಗಪ್ಪ ಆಲೂರರವರು ಸದ್ಭಾವನೆ, ಸತ್‌ಚಿಂತನೆ, ಸನ್ನಡತೆ ಪ್ರತಿಯೊಬ್ಬರಲ್ಲೂ ಅಂತರ್ಗತವಾಗಬೇಕು. ಬಹಳಷ್ಟು ಮಂದಿಯ ದುಃಖಕ್ಕೆ ಆಸೆಯೇ ಮೂಲವಾಗಿದೆ. 12ನೇ ಶತಮಾನದ ಮಹಾಶರಣೆ ಆಯ್ದಕ್ಕಿ ಲಕ್ಕಮ್ಮನ ಆದರ್ಶಗಳನ್ನು ಅರಿಯಬೇಕಿದೆ. ಸದ್ವಿಚಾರ, ಸನ್ನಡತೆ, ಅನುಭಾವದ ಚಿಂತನೆಗಳತ್ತ ತೆರೆದುಕೊಳ್ಳುವ ಮೂಲಕ ಮಾನಸಿಕ ತುಮುಲಗಳನ್ನು ದೂರ ಮಾಡಬೇಕಿದೆ. ಅಧಿಕಾರ, ಆಸ್ತಿ, ಅಂತಸ್ತುಗಳ ಹಿಂದೆ ಹೋಗಿ ನೆಮ್ಮದಿ ಹಾಳು ಮಾಡಿಕೊಳ್ಳಬಾರದು ಎಂದರು.

ಈ ಸಂದರ್ಭದಲ್ಲಿ ಶ್ರೀ ಎಸ್.ವಿ. ನಂಜುಂಡಪ್ಪ, ಶ್ರೀ ವಿರೂಪಾಕ್ಷಯ್ಯ, ಡಾ. ಜಿ.ಎಂ. ಹೇಮಲತಾರವರುಗಳನ್ನು ಸನ್ಮಾನಿಸಲಾಯಿತು.

ತೊರೆನೂರು ಮಠದ ಶ್ರೀ ಮಲ್ಲೇಶ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಬೆಟ್ಟದಪುರ, ಗಾವಡಗೆರೆ, ತಣ್ಣೀರುಹಳ್ಳ, ಚಿಲುಮೆ ಮಠ, ಅರಮೇರಿ, ಕಿರಿಕೊಡ್ಲಿ ಮಠಗಳ ಶ್ರೀಗಳು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಶ್ರೀ ಕೆ.ಎಸ್. ಮೂರ್ತಿ, ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಶ್ರೀ ಎಚ್.ವಿ. ಶಿವಪ್ಪ ಮೊದಲಾದವರು ಉಪಸ್ಥಿತರಿದ್ದರು.

**ಬಸವಣ್ಣನವರ ತತ್ವಾದರ್ಶಗಳು ಯುವಕರಿಗೆ ಮಾದರಿ**

ಮಹಾನ್ ಮಾನವತಾವಾದಿ ಬಸವಣ್ಣನವರ ತತ್ವಾದರ್ಶಗಳು ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 20ರಂದು ಪಿರಿಯಾಪಟ್ಟಣ ತಾಲ್ಲೂಕು ರಾವಂದೂರು ಶ್ರೀ ಮುರುಘಾಮಠದಲ್ಲಿ ಆಯೋಜಿಸಿದ್ದ ಬಸವತತ್ತ್ವ ಸಮಾವೇಶದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಗತ್ತಿಗೆ ವಚನ ಸಾಹಿತ್ಯಕ್ಕೆ ಬಸವಣ್ಣನವರ ಕೊಡುಗೆ ಅಪಾರವಾದುದು. ಬಸವಣ್ಣವರ ತತ್ವ ಆದರ್ಶಗಳನ್ನು ಬಹಳ ಮುಖ್ಯವಾಗಿ ವಿದೇಶಿಗರು ಅಧ್ಯಯನ ಮಾಡಿ ಅನುಸರಿಸುತ್ತಾ ಬರುತ್ತಿದ್ದಾರೆ. ಆದರೆ ನಮ್ಮವರು ವಿದೇಶಿ ಸಂಸ್ಕೃತಿಯನ್ನು ಅನುಸರಿಸುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಬಸವಣ್ಣನವರ ತತ್ವ ಆದರ್ಶಗಳು ಎಲ್ಲರಿಗೂ ಮಾದರಿಯಾಗಬೇಕು. ಅದರಲ್ಲೂ ಮನೆಯಲ್ಲಿ ತಂದೆತಾಯಂದಿರು ಮಕ್ಕಳಿಗೆ ಬಸವಣ್ಣನವರ ತತ್ವ ಆದರ್ಶಗಳ ಬಗ್ಗೆ ಹೆಚ್ಚು ಅರಿವು ಮೂಡಿಸಬೇಕು ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು, ಪಿಯುಸಿ ಮತ್ತು ಎಸ್ಸೆಸೆಲ್ಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶ್ರೀ ಮೋಕ್ಷಪತಿ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಹರವೆ, ಅರಕೆರೆ, ಶಿರಮಳ್ಳಿ, ಕರೋಹಟ್ಟಿ ಮಠಗಳ ಶ್ರೀಗಳು, ಶ್ರೀ ಎಂ. ಪ್ರದೀಪ್‌ಕುಮಾರ್, ಶ್ರೀ ಹೆಚ್. ಪರಮೇಶ್, ಶ್ರೀ ಆರ್.ಎಸ್. ಚಿಕ್ಕವೀರಪ್ಪ, ಶ್ರೀ ಆರ್.ಎಸ್. ಕುಮಾರ್ ವಿಜಯ್, ಶ್ರೀ ಆರ್.ಡಿ. ಸತೀಶ್, ಶ್ರೀ ಕೆ. ಹೋಳದಪ್ಪ, ಶ್ರೀ ಆರ್.ಟಿ. ಸತೀಶ್, ಶ್ರೀ ಆರ್.ಆರ್. ಶಶಿಧರ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಬಿ.ವಿ. ಮಂಜುನಾಥ್ ಉಪನ್ಯಾಸ ನೀಡಿದರು

**ಸಾಹಿತ್ಯ ರಚನೆ ಮನುಷ್ಯ ತನ್ನೊಳಗೆ ರೂಪಿಸಿಕೊಳ್ಳುವಂತಹ ಕಲೆ**

ಸಾಹಿತ್ಯ ರಚನೆ ಮನುಷ್ಯ ತನ್ನೊಳಗೆ ತಾನು ರೂಪಿಸಿಕೊಳ್ಳುವಂತಹ ಕಲೆಯಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 21ರಂದು ಮೈಸೂರಿನಲ್ಲಿ ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರ 'ಅಂತರಂಗದ ಅನಾವರಣ' ಕೃತಿ ಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಡಾ. ಮೃತ್ಯುಂಜಯಪ್ಪ ಹಾಗೂ ಶ್ರೀಮತಿ ಸುಧಾರವರು ಅತ್ಯಂತ ಸುಸಂಸ್ಕೃತ ಕುಟುಂಬದಿಂದ ಬಂದಂತಹವರು. ಆಧ್ಯಾತ್ಮಿಕ ಜೀವಿಗಳು. ಸಾಹಿತ್ಯದ ರಚನೆಯಲ್ಲಿ ತೊಡಗಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಜೀವನದಲ್ಲಿ ಯಾವುದೇ ಸಂದರ್ಭಗಳು, ಸಮಸ್ಯೆಗಳು ಎದುರಾದರೂ ಸಾಮರಸ್ಯದಿಂದ ಬದುಕುವ ಕಲೆಯನ್ನು ಹಾಗೂ ಪರಸ್ಪರ ಹೊಂದಾಣಿಕೆಯಲ್ಲಿ ಜೀವನ ಸಾಗಿಸುವ ಬಗೆಯನ್ನು ಈ 'ಅಂತರಂಗದ ಅನಾವರಣ' ಕೃತಿ ತಿಳಿಸುತ್ತದೆ. ಮೃತ್ಯುಂಜಯಪ್ಪ ಅವರು ರಚಿಸಿದ ಕೃತಿಗಳು ಬೇರೆ ಭಾಷೆಗಳಿಗೂ ಅನುವಾದವಾಗಿವೆ. ಅವರ ಹಾದಿಯಲ್ಲಿಯೇ ಅವರ ಪತ್ನಿ ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಅವರೂ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು 'ಅಂತರಂಗದ ಅನಾವರಣ' ಕೃತಿಯ ಮೂಲಕ ಬದುಕಿನ ಸಿಹಿ–ಕಹಿ ವಿಷಯಗಳನ್ನು ಓದುಗರ ಮುಂದಿಟ್ಟಿದ್ದಾರೆ ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಒಂದು ಕೃತಿಯನ್ನು ಓದಿ ಆಸ್ವಾದಿಸಿ ಅರ್ಥಮಾಡಿಕೊಳ್ಳುವುದು ಹೆಚ್ಚು ಮುಖ್ಯ. 'ಅಂತರಂಗದ ಅನಾವರಣ' ಕೃತಿ ಎಲ್ಲ ದೃಷ್ಟಿಯಿಂದಲೂ ಶ್ರೀಮಂತವಾದ ಕೃತಿ. ನಾವೆಲ್ಲರೂ ಇವತ್ತಿನ ಕಾಲಘಟ್ಟದಲ್ಲಿ ಬಹಿರಂಗದ ಶ್ರೀಮಂತಿಕೆಯನ್ನು ಮಾತ್ರ ಭಾವಿಸುತ್ತಿದ್ದೇವೆ. ಆದರೆ, ಅಂತರಂಗದ ಶ್ರೀಮಂತಿಕೆಯನ್ನು ಗಮನಿಸಲು ಪ್ರಯತ್ನಿಸಿದಾಗ ನಿಜವಾದ ಬದುಕಿನ ಉಜ್ವಲತೆಯನ್ನು ತೆರೆದಿಟ್ಟುಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್. ಇಂದುಮತಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಜೇಂದ್ರ ಮೃತ್ಯುಂಜಯಪ್ಪ ಸ್ವಾಗತಿಸಿದರು. ಶ್ರೀಮತಿ ಮಂಜುಳಾ ಪ್ರವೀಣ್ ಮತ್ತು ಶ್ರೀ ರಜಿನಿ ಆದೀಶ್ ಪ್ರಾರ್ಥಿಸಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ ವಂದಿಸಿದರು. ಶ್ರೀ ತ್ರಿಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಆಚರಣೆಯ ಸತ್ಯಾಸತ್ಯತೆಯನ್ನು ಅರ್ಥೈಸಿಕೊಳ್ಳಬೇಕು**

ಭಗವಂತನಿಗೆ ಯಾವುದೇ ರೂಪ ಇಲ್ಲ. ನಾವು ಹೇಗೆ ಭಗವಂತನನ್ನು ಗ್ರಹಿಸುತ್ತೇವೆಯೋ ಆ ಭಾವಕ್ಕೆ ತಕ್ಕಂತೆ ಭಗವಂತ ಇರುತ್ತಾನೆ. ಯಾವುದೇ ಆಚರಣೆಯಾಗಿರಲಿ ಅದರ ಹಿಂದಿನ ಸತ್ಯಾಸತ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 21ರಂದು ಚಾಮರಾಜನಗರ ತಾಲ್ಲೂಕು ಕೇತಹಳ್ಳಿಯಲ್ಲಿ ಶ್ರೀ ಹೊನ್ನಾದೇವಿ ದೇವಾಲಯ ಹಾಗೂ ಶ್ರೀ ಬಸವೇಶ್ವರ ದೇವಾಲಯದ ಕಳಶಾರೋಹಣದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸಂಸ್ಕಾರ ಎಂದರೆ ಸಂಸ್ಕೃತಿಯ ಪುನರುತ್ಥಾನ. ಆಚರಣೆಯನ್ನು ಅರ್ಥ ಮಾಡಿಕೊಂಡು ಆಚರಿಸದಿದ್ದರೆ ಅದು ಮೌಢ್ಯವಾಗುತ್ತದೆ. ಅರ್ಥ ಮಾಡಿಕೊಂಡರೆ ಮೌಢ್ಯಕ್ಕೆ ಜಾಗವಿಲ್ಲ. ಯಾರ ಬಗ್ಗೆಯೂ ದ್ವೇಷಾಸೂಯೆ ಪಡದೇ ಪ್ರೀತಿಯ ಮನೋಭಾವನೆಯನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು 12ನೇ ಶತಮಾನದ ಬಸವಾದಿ ಶರಣರಲ್ಲಿ ಧಾರ್ಮಿಕ ಚಿಂತನೆ, ಭಾವನೆ ಇತ್ತು. ಅಂದು ಹೆಚ್ಚು ದೇವಸ್ಥಾನಗಳಿರಲಿಲ್ಲ. ಇಂದು ಪ್ರತಿ ಗ್ರಾಮದಲ್ಲೂ ದೇವಾಲಯಗಳಿವೆ. ಅನ್ಯಾಯ, ಭ್ರಷ್ಟಾಚಾರ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ತೋರಿಕೆಯ ಭಕ್ತಿ ಇರಬಾರದು ಎಂದರು.

ಕನಕಪುರ ಶ್ರೀ ದೇಗುಲಮಠದ ಡಾ. ಶ್ರೀ ಚನ್ನಬಸವ ಸ್ವಾಮಿಗಳು ಭಾರತೀಯ ಸಂಸ್ಕೃತಿ, ಪರಂಪರೆಯಲ್ಲಿ ದೇವಾಲಯಗಳಿಗೆ ಪವಿತ್ರ ಸ್ಥಾನವಿದ್ದು, ಅವು ಮನುಷ್ಯನ ಆತ್ಮೋದ್ಧಾರಕ್ಕಿರುವ ಪವಿತ್ರ ತಾಣಗಳಾಗಿವೆ. ಗ್ರಾಮ ಚಿಕ್ಕದಾದರೂ ಗ್ರಾಮಸ್ಥರ ಮನಸ್ಸು ದೊಡ್ಡದೆಂಬುದಕ್ಕೆ ಶ್ರೀ ಹೊನ್ನಾದೇವಿ ದೇವಸ್ಥಾನ ನಿರ್ಮಾಣವೇ ಸಾಕ್ಷಿ. ಗ್ರಾಮದ ಜನ ಸುಖಸಮೃದ್ಧಿಯಿಂದ ಜೀವನ ನಡೆಸುತ್ತಿರುವುದರಿಂದಲೇ ದೇವಾಲಯ ನಿರ್ಮಾಣಕ್ಕೆ ಉದಾರ ಮನಸ್ಸಿನಿಂದ ದೇಣಿಗೆ ನೀಡಿದ್ದಾರೆ ಎಂದರು.

ಪಡುಗೂರು, ಕಬ್ಬಹಳ್ಳಿ, ಮರಿಯಾಲ, ಚಾಮರಾಜನಗರ. ಮೂಡುಗೂರು, ಹಂಗಳ, ಗೌಡಹಳ್ಳಿ, ಆಲಹಳ್ಳಿ, ಬೊಮ್ಮನಹಳ್ಳಿ, ಚಿಕ್ಕತುಪ್ಪೂರು ಮತ್ತು ಕುಂದೂರು ಮಠಗಳ ಶ್ರೀಗಳು. ಶಾಸಕರಾದ ಶ್ರೀ ಹೆಚ್.ಎಂ. ಗಣೇಶಪ್ರಸಾದ್‌ರವರು ಉಪಸ್ಥಿತರಿದ್ದರು.

**ಪದವಿ ಎಂಬುದು ಕಲಿಕೆಯ ಅಂತ್ಯವಲ್ಲ, ಹೊಣೆಗಾರಿಕೆಯ ಆರಂಭ**

ಪದವಿ ಎಂಬುದು ಕಲಿಕೆಯ ಅಂತ್ಯವಲ್ಲ, ಹೊಣೆಗಾರಿಕೆಯ ಆರಂಭ ಎಂದು ಆದರ್ಶ್ ಗ್ರೂಪ್ ಕಂಪನಿಯ ಅಧ್ಯಕ್ಷರಾದ ಶ್ರೀ ಬಿ.ಎಂ. ಜಯಶಂಕರ್‌ರವರು ಫೆಬ್ರವರಿ

25ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು. ಅಚ್ಚರಿಯ ವೇಗದಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಯುಗದಲ್ಲಿ ಎ?ು ಕೌಶಲವಿದ್ದರೂ ಸಾಲದು. ನಾವು ಬದುಕಿನುದ್ದಕ್ಕೂ ಅಧ್ಯಯನಶೀಲರಾಗಿರಬೇಕು. ಇಂದಿನ ಉದ್ಯೋಗಗಳು ನಾಳೆ ಇಲ್ಲದಿರಬಹುದು. ಇಂತಹ ಪರಿಸ್ಥಿತಿಯಲ್ಲಿ ತಾಂತ್ರಿಕ ಜ್ಞಾನ ಮಾತ್ರ ಸಾಕಾಗುವುದಿಲ್ಲ. ಹಾಗಾಗಿ ಕಲಿಯುವ, ಮರೆತುಬಿಡುವ ಮತ್ತು ಮರುಕಲಿಯುವ ಸಾಮರ್ಥ್ಯವೇ ಅತ್ಯಂತ ಮುಖ್ಯ ಎಂದರು. ಜಿಜ್ಞಾಸೆಯನ್ನು ಉಳಿಸಿಕೊಳ್ಳಬೇಕು. ಪ್ರಸ್ತುತತೆಯನ್ನು ಕಾಪಾಡಿಕೊಳ್ಳಬೇಕು. ನಿಮ್ಮ ಮೇಲೆ ಹೂಡಿಕೆ ಮಾಡುವುದನ್ನು ಎಂದಿಗೂ ನಿಲ್ಲಿಸಬೇಡಿ. ಪದವಿ ಎಂಬುದು ಭವಿಷ್ಯದ ಅಡಿಪಾಯವಷ್ಟೇ, ಅದೇ ಗೋಪುರದ ಮೇಲ್ಮಹಡಿ ಅಲ್ಲ. ಜ್ಞಾನಕ್ಕೆ ಹೊಸ ಮಹಡಿಗಳನ್ನು ಸೇರಿಸಿ, ನಿಮ್ಮ ಕೌಶಲಗಳನ್ನು ಬಲಪಡಿಸಿ, ನಿರಂತರವಾಗಿ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ಘಟಿಕೋತ್ಸವದಲ್ಲಿ ಒಟ್ಟು 1,832 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಪ್ರತಿಜ್ಞಾವಿಧಿ ಬೋಧಿಸಿದರು. ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಬಿ. ಸುರೇಶ್, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಪಿ. ನಂಜುಂಡಸ್ವಾಮಿ ಉಪಸ್ಥಿತರಿದ್ದರು. ಕುಲಪತಿಗಳಾದ ಡಾ. ಎ.ಎನ್. ಸಂತೋ?ಕುಮಾರ್ ಸ್ವಾಗತಿಸಿದರು. ಕುಲಸಚಿವರಾದ ಡಾ. ಎಸ್.ಎ. ಧನರಾಜ್ ವಂದಿಸಿದರು.

**ಮನೆಗಳಲ್ಲಿ ಸುಸ್ಥಿರತೆ ರೂಢಿಯಾದರೆ ಸಮಾಜದ ಚೇತರಿಕೆ ಸಾಧ್ಯ**

ಮನೆಗಳಲ್ಲಿ ಸುಸ್ಥಿರತೆಯನ್ನು ರೂಢಿಸಿಕೊಳ್ಳುತ್ತಾ ಬಂದರೆ ಸಮಾಜವು ನೈಸರ್ಗಿಕವಾಗಿ ಸುಸ್ಥಿರತೆಯೆಡೆಗೆ ಸಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 26ರಂದು ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳ ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗೃಹ ವಿಜ್ಞಾನ ಸಮ್ಮೇಳನ–2026 'ಸ್ಥಿತಿಸ್ಥಾಪಕ ಮತ್ತು ಪರಿವರ್ತಕ ಗೃಹ ವಿಜ್ಞಾನಕ್ಕಾಗಿ ಪರಿಸರ ವಿಧಾನಗಳು' ಕಾರ್ಯಕ್ರಮದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜ್ಞಾನ ಬುದ್ಧಿವಂತಿಕೆಯಾದಾಗ ಬದಲಾಗಿ, ಬುದ್ಧಿವಂತಿಕೆ ಕ್ರಿಯಾತ್ಮಕವಾಗುತ್ತದೆ. ಇದರಿಂದಾಗಿ ಸಮಾಜಕ್ಕೆ ಸಾಕಷ್ಟು ಅನುಕೂಲಗಳು ದೊರೆಯುತ್ತವೆ. ಆಹಾರ ವಿಜ್ಞಾನ ಈ ಎಲ್ಲ ಬದಲಾವಣೆಯಲ್ಲಿ ಹೆಚ್ಚು ಪರಿಣಾಮಾತ್ಮಕ ಪಾತ್ರವಹಿಸಿದೆ. ವಿಜ್ಞಾನದ ಮೂಲಕ ಎಲ್ಲವನ್ನೂ ಕೂಡಿಸುವ, ಪುನರುಜ್ಜೀವನಗೊಳಿಸುವ ಕೆಲಸ ಮಾಡುತ್ತದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್‌ರವರು ಸುಸ್ಥಿರತೆ ಎಂಬುದು ಒಂದು ಆಯ್ಕೆಯಲ್ಲ, ಅದು ಒಂದು ಜವಾಬ್ದಾರಿ. ಸ್ಥಿತಿಸ್ಥಾಪಕತ್ವದ ಪರಿಕಲ್ಪನೆಯೂ ಅವಶ್ಯಕವಾಗಿದೆ. ಬದಲಾವಣೆಯೆಡೆಗೆ ಪ್ರಪಂಚವು ನಿತ್ಯವೂ ಸಾಗುತ್ತಿದ್ದು, ಶಿಕ್ಷಣ ಸಂಸ್ಥೆಗಳು ನಮ್ಮ ಸಮುದಾಯಗಳ ದೈನಂದಿನ ಜೀವನದಲ್ಲಿ ಬದಲಾವಣೆ ತರುವ ಕೇಂದ್ರಗಳಾಬೇಕು ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ, ಕೊಡಗು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಅಶೋಕ್ ಎಸ್. ಅಲೂರು, ಕೊಯಮತ್ತೂರಿನ ಅವಿನಾಶಿಲಿಂಗಂ ಗೃಹವಿಜ್ಞಾನ ಮತ್ತು ಉನ್ನತ ಶಿಕ್ಷಣ ಸಂಸ್ಥೆ ಮಹಿಳಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿ. ಭಾರತಿ ಹರಿಶಂಕರ್, ಸಿಎಫ್‌ಟಿಆರ್‌ಐ ನಿವೃತ್ತ ನಿರ್ದೇಶಕರಾದ ಡಾ. ವಿ. ಪ್ರಕಾಶ್, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಎಸ್.ಕೆ. ನವೀನ್‌ಕುಮಾರ್, ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ. ಕಮಲ, ಸಹಾಯಕ ಪ್ರಾಧ್ಯಾಪಕರಾದ ಡಾ. ಸಿ. ಅನಿತಾರವರುಗಳು ಉಪಸ್ಥಿತರಿದ್ದರು.

**ವ್ಯೋಮಮೂರುತಿ ಅಲ್ಲಮಪ್ರಭುಗಳು ಮಹಾನ್ ದಾರ್ಶನಿಕರು**

ಅಲ್ಲಮಪ್ರಭುಗಳು ಈ ಲೋಕ ಕಂಡ ಮಹಾನ್ ದಾರ್ಶನಿಕರು ಎಂದು ಒರಿಸ್ಸಾ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ದೀಕ್ಷಿತ್ ಕೃಷ್ಣ ಶ್ರೀಪಾದ್‌ರವರು ಬೆಂಗಳೂರಿನಲ್ಲಿ ಫೆಬ್ರವರಿ 28ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ "Vachanas of Allamaprabhu – Commenatry" (Vol. I & II) ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡುತ್ತಾ ತಿಳಿಸಿದರು.

ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಜೀವನದ ಉದ್ದೇಶವೇ ಸತ್ಯದರ್ಶನ ವಾಗಿತ್ತು. ಅಲ್ಲಮಪ್ರಭುಗಳ ಹಾಗೆಯೇ ಪೂಜ್ಯ ಸಿದ್ಧೇಶ್ವರ ಶ್ರೀಗಳೂ ಸಹ ಬದುಕಿದವರು. ಅಲ್ಲಮಪ್ರಭುಗಳು ವೇದ, ಉಪನಿಷತ್ತು ಮತ್ತು ಪುರಾಣಗಳನ್ನು ಮೀರಿ ನಿಲ್ಲುವಂಥ ವ್ಯಕ್ತಿತ್ವವುಳ್ಳವರಾಗಿದ್ದರು. ಅವರೊಬ್ಬ ಮಹಾನ್ ದಾರ್ಶನಿಕರು. ಭಾರತ ಸಂವಿಧಾನದ ಹಲವಾರು ಅಂಶಗಳನ್ನು ವಚನಕಾರರು 12ನೇ ಶತಮಾನದಲ್ಲೇ ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ವಚನಕಾರರ ಹಲವಾರು ಚಿಂತನೆಗಳು ಸಂವಿಧಾನದಲ್ಲಿ ಅಡಕವಾಗಿದೆ. ಈಗಿನ ಸಂಸತ್ ವ್ಯವಸ್ಥೆಯನ್ನು 12ನೇ ಶತಮಾನದಲ್ಲಿಯೇ ಬಸವಣ್ಣನವರು ಅನುಭವ ಮಂಟಪದ ಮೂಲಕ ಪ್ರಾರಂಭಿಸಿದರು.

ತರ್ಜುಮೆಯು ಯಾವಾಗಲೂ ಬಹಳ ಕಷ್ಟದ ಕೆಲಸ. ಒಂದು ಭಾಷೆಯ ಚಿಂತನೆ, ಭಾವನೆಗಳನ್ನು ಇನ್ನೊಂದು ಭಾಷೆಗೆ ಅನುವಾದ ಮಾಡುವುದು ದುಸ್ಸಾಹಸ. ಭಾರತೀಯ ಭಾಷೆಗಳ ಸಾಹಿತ್ಯ ಮತ್ತು ಚಿಂತನೆಯನ್ನು ಇಂಗ್ಲಿಷ್ ಸೇರಿದಂತೆ ಪಾಶ್ಚಾತ್ಯ ದೇಶಗಳ ಭಾಷೆಗಳಿಗೆ ತರ್ಜುಮೆ ಮಾಡುವುದು ಇನ್ನೂ ಕಷ್ಟ. ಆ ಮಟ್ಟದ ಶಬ್ದಭಂಡಾರ ಸಿಗುವುದಿಲ್ಲ, ಪರಕೀಯ ಭಾಷೆಯಲ್ಲಿ ನಮ್ಮ ಭಾವನೆಗಳನ್ನು ಸಮರ್ಥವಾದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದು ಸಾಧ್ಯವಿಲ್ಲ. ಆದರೂ, ನಮ್ಮ ಸಾಹಿತ್ಯವನ್ನು ಪ್ರಪಂಚಕ್ಕೆ ಪರಿಚಯಿಸುವ ದೃಷ್ಟಿಯಿಂದ ಎಷ್ಟು ಸಾಧ್ಯವೋ ಅಷ್ಟನ್ನಾದರು ತರ್ಜುಮೆ ಮಾಡುವುದು ಅನಿವಾರ್ಯ. ಸಂವಿಧಾನದ ಪುಸ್ತಕದಲ್ಲಿ ವೇದ, ಉಪನಿಷತ್ತು, ರಾಮಾಯಣ ಮತ್ತು ಮಹಾಭಾರತ ಮುಂತಾದವುಗಳಿಗೆ ಸಂಬಂಧಿಸಿದಂತೆ 22 ಚಿತ್ರಗಳಿವೆ. ಆದರೆ ಅವುಗಳಲ್ಲಿ ಎಲ್ಲಿಯೂ ಬಸವಣ್ಣನವರು, ಅಲ್ಲಮಪ್ರಭುಗಳ ಚಿತ್ರಗಳಿಲ್ಲ. ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಮೂಲಕ ವಚನಕಾರರ ಚಿತ್ರಗಳನ್ನು ಸೇರ್ಪಡೆ ಮಾಡಬೇಕು, ಈ ನಿಟ್ಟಿನಲ್ಲಿ ಪ್ರಯತ್ನ ಆಗಬೇಕಾದುದು ಅಗತ್ಯ ಎಂದು ನುಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ಎಂ.ಬಿ. ಪಾಟೀಲ್‌ರವರು ಹನ್ನೆರಡನೇ ಶತಮಾನದಲ್ಲಿ ಆದ ಸಾಮಾಜಿಕ ಕ್ರಾಂತಿಯ ರೂವಾರಿಗಳು ಬಸವಣ್ಣನವರು. ಆ ಕ್ರಾಂತಿಗೆ ಆಧ್ಯಾತ್ಮಿಕ ಉನ್ನತಿಯನ್ನು ಒದಗಿಸಿದವರು ಅಲ್ಲಮಪ್ರಭುಗಳು. ಅಲ್ಲಮಪ್ರಭುಗಳವರದು ಚಲನಶೀಲ ಬದುಕು, ಅವರು ನಿರಂತರವಾಗಿ ಲೋಕಸಂಚಾರ ಮಾಡಿದವರು. ಅಲ್ಲಮಪ್ರಭುಗಳ ಹಾಗೇ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರೂ ಲೋಕಸಂಚಾರವನ್ನು ಮಾಡಿದವರು. ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಮ್ಮ ಅಂತಿಮ ಪತ್ರದಲ್ಲಿ ಅಲ್ಲಮಪ್ರಭುಗಳ ವಚನವನ್ನು ಉಲ್ಲೇಖಿಸಿದ್ದಾರೆ. ಇವರು ಶತಮಾನದ ಸಂತರು, ಕೊನೆಯ ಉಸಿರಿನ ತನಕ ಅಲ್ಲಮಪ್ರಭುಗಳನ್ನು ಕುರಿತು ಧ್ಯಾನಿಸಿದವರು.

ಅಲ್ಲಮಪ್ರಭುಗಳ ವಚನಗಳನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡುವುದು ಬಹಳ ಕಷ್ಟದ ಕೆಲಸ, ಆದರೆ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಂಕಲ್ಪವನ್ನು ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಸಾಕಾರಗೊಳಿಸಿದ್ದಾರೆ. ಇಂತಹ ಕಠಿಣವಾದ ಕೆಲಸವನ್ನು ಅವರಲ್ಲದೆ ಬೇರೆ ಯಾರೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಶರಣರ ವಚನಗಳು ಜಾಗತಿಕ ಮಟ್ಟದಲ್ಲಿ ಪ್ರಚಾರ ಆಗಬೇಕು ಎಂಬ ಸುತ್ತೂರು ಶ್ರೀಗಳ ಆಶಯದಿಂದ ಈ ಕೃತಿ ರಚಿತವಾಗಿದೆ. ಇದು ಎಲ್ಲಾ ಕಡೆಯೂ ಲಭ್ಯವಾಗುವಂತಾಗಬೇಕು ಎಂದು ತಿಳಿಸಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳವರು, ನಾಗರಹೊಳೆಯ ಸುಂಕದಕಟ್ಟೆ ಅರಣ್ಯ ಅತಿಥಿಗೃಹದಲ್ಲಿ ಬಸವಣ್ಣನವರ ವಚನಗಳ ಬಗ್ಗೆ ನಡೆದ ಚರ್ಚೆಯ


ಪರಿಣಾಮವಾಗಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರಿಂದ "ಬಸವೇಶ್ವರ ವಚನ ದೀಪಿಕೆ" ಕೃತಿ ರಚಿತವಾಯಿತು. ಇದರ ಮುಂದುವರಿದ ಭಾಗವಾಗಿ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಅಲ್ಲಮಪ್ರಭುದೇವರ ವಚನ–ನಿರ್ವಚನ ಕೃತಿಯನ್ನು ರಚಿಸಿದರು. ಈ ಕೃತಿಯ ಸ್ವರೂಪ ಬಹಳ ವಿಶಿಷ್ಟವಾಗಿದ್ದು, ಇದು ಕನ್ನಡೇತರರಿಗೂ ಲಭ್ಯವಾಗಲೆಂಬ ಉದ್ದೇಶದಿಂದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಇದನ್ನು ವಿದ್ವಾಂಸರ ತಂಡ ಅನುವಾದಿಸಿದೆ. ಇದು ಬರಿಯ ಭಾವಾನುವಾದವಲ್ಲ, ಬ್ರಹ್ಮಸೂತ್ರಗಳಿಗೆ ವ್ಯಾಖ್ಯೆಗಳನ್ನು ಬರೆದ ರೀತಿಯಲ್ಲೇ ಈ ಕೃತಿಯ ವ್ಯಾಖ್ಯೆಯೂ ವಿಶೇಷವಾಗಿ ಮೂಡಿಬಂದಿದೆ. ಅಲ್ಲಮಪ್ರಭುಗಳ ಭಾಷೆ ಬೆಡಗಿನ ಭಾಷೆಯಾಗಿದ್ದು, ಸುಲಭವಾಗಿ ಅರ್ಥವಾಗುವಂಥದಲ್ಲ. ಅವುಗಳನ್ನು ಅರಿಯಲು, ಅರ್ಥೈಸಿಕೊಳ್ಳಲು ಪ್ರಯತ್ನಿಸಬೇಕು. ಈ ಜಗತ್ತಿನಲ್ಲಿ ಕೊನೆಗೆ ಏನೂ ಉಳಿಯುವುದಿಲ್ಲ ಎಂಬ ಆತ್ಯಂತಿಕ ಸತ್ಯವನ್ನು ಅಲ್ಲಮಪ್ರಭುಗಳು ಬಲ್ಲವರಾಗಿದ್ದರು, ಇದನ್ನು ಜನರೂ ಅರ್ಥಮಾಡಿಕೊಂಡಾಗ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಕೃತಿಯ ಪರಿಚಯವನ್ನು ಮಾಡಿದರು. ಸಂಪಾದಕೀಯ ಸಮಿತಿಯವರ ಪರವಾಗಿ "ಅಮರ ಚಿತ್ರಕಥಾ" ಮಾಲಿಕೆಯ ನಿವೃತ್ತ ಸಹಾಯಕ ಸಂಪಾದಕರಾದ ಶ್ರೀ ಸುಬ್ಬರಾವ್‌ರವರು ಕೃತಿ ಮೂಡಿಬಂದ ರೀತಿಯನ್ನು ವಿವರಿಸಿದರು. ವಿಜಯಪುರ ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮಿಗಳು ಕೃತಿ ಬಿಡುಗಡೆಯಾಗಿದುದಕ್ಕೆ ಕೃತಜ್ಞತೆ ತಿಳಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರರಾದ ಶ್ರೀ ಗೊ.ರು. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ಪಾಟೀಲ್‌ರವರು ಸಹ ಮಾತನಾಡಿದರು.

ಶ್ರೀಮತಿ ಆಕಾಂಕ್ಷ ಬಾದಾಮಿಯವರು ಪ್ರಾರ್ಥಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಸ್ವಾಗತಿಸಿದರು. ಶ್ರೀ ಶ್ರದ್ಧಾನಂದ ಸ್ವಾಮಿಗಳು ಕವನ ವಾಚಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ವಂದಿಸಿದರು. ಶ್ರೀಮತಿ ಸವಿತಾ ಶಿವಕುಮಾರ್‌ರವರು ಕಾರ್ಯಕ್ರಮ ನಿರೂಪಿಸಿದರು.

□

# ಪ್ರಸಾದ



## ಕೃತಿ–ಸ್ವೀಕೃತಿ

**ಹೀಗಿದ್ದರು ಮುಕುಂದೂರು ಸ್ವಾಮಿಗಳು**
**(ತತ್ತ್ವಪದ–ಜೀವನಚಿತ್ರ – ಅನುಭವ ಕಥನ)**
ಶ್ರೀ ಬಸವಲಿಂಗಯ್ಯ
ಪ್ರ: ಸಿದ್ಧಪುರುಷ ಶ್ರೀ ಮುಕಂದೂರು
ಸ್ವಾಮಿಗಳು, ಚಿದಾನಂದಾಶ್ರಮ
ಮಾರಗೊಂಡನಹಳ್ಳಿ
ಅರಸೀಕರೆ ತಾ., ಹಾಸನ ಜಿ.
ಪು : 188, ಬೆಲೆ : 200/–

**ಸಾಹಿತ್ಯ ಡಿಂಡಿಮ**
ಶ್ರೀ ಎಸ್. ರಾಮಪ್ರಸಾದ್
ಪ್ರ: ಎಂ.ಆರ್. ಆನಂದ್
ವಿವೇಕಾನಂದ ನಗರ, ಮೈಸೂರು
ಪು : 294, ಬೆಲೆ : 290/–

**ಆಯುರ್ವೇದದಿಂದ ಅಲೋಪತಿಯವರೆಗೆ**
ಡಾ. ಎಚ್.ಆರ್. ಮಣಿಕರ್ಣಿಕಾ
ಪ್ರ: ಹಿಮಾಲಯ ಪ್ರತಿಷ್ಠಾನ
ಕುವೆಂಪುನಗರ, ಮೈಸೂರು
ಪು : 128, ಬೆಲೆ : 130/–

**ದೇವರೇ ನೀನು ಯೋಚಿಸಲೇಬೇಕಿತ್ತು**
**(ಕವನ ಸಂಕಲನ)**
ನಂದಿನಿ ಪ್ರಮೋದ್ (ದನಿ)
ಪ್ರ: ಭೂಮಿ ಪ್ರಕಾಶನ
ಉತ್ತರಾದಿ ಮಠದ ರಸ್ತೆ, ಮೈಸೂರು
ಪು : 98, ಬೆಲೆ : 120/–

**ಪ್ರತಿಬಿಂಬ**
**(ಲೇಖನಗಳು–ಕೃತಿ ಪರಿಚಯ–ಕವನಗಳು)**
ಶ್ರೀ ನಗರ್ಲೆ ಶಿವಕುಮಾರ
ಪ್ರ: ಅ.ಭಾ.ವೀ.ಲಿ. ಮಹಾಸಭಾ (ರಿ)
ಮೈಸೂರು ಜಿಲ್ಲಾ ಘಟಕ, ಮೈಸೂರು
ಪು : 215, ಬೆಲೆ : 100/–

**ವಿಜ್ಞಾನ ವಿನೋದ**
ಶ್ರೀ ಎಸ್. ರಾಮಪ್ರಸಾದ್
ಪ್ರ: ನಂ.655
ಕಾಶಿಪತಿ ಅಗ್ರಹಾರ, ಮೈಸೂರು
ಪು : 92, ಬೆಲೆ : 100/–

**ಸಜ್ಜನ ಕನ್ನಡ ಕವಿಗಳು**
**(ಕನ್ನಡ ಕವಿ ಕೃತಿ ಪರಿಚಯ)**
ಹೊ.ರಾ. ಪರಮೇಶ್ ಹೊಡೆನೂರು
ಪ್ರ: ಮಾಣಿಕ್ಯ ಪ್ರಕಾಶನ
ಕೆಂಪೇಗೌಡ ನಗರ, ಹಾಸನ
ಪು : 130, ಬೆಲೆ : 150/–

**ನಾವು ಕೂಗುವಾ ಕೂಗು**
ಡಾ. ಕೃಷ್ಣಮೂರ್ತಿ ಹನೂರು
ಪ್ರ: ನಿರ್ದೇಶಕರು
ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು
ಪು : 544, ಬೆಲೆ : 978/–

**ಧರೆಗೆ ದೊಡ್ಡವರ ಕಾವ್ಯದ ಏಳು ಪಠ್ಯಗಳು**
ಡಾ. ಕೃಷ್ಣಮೂರ್ತಿ ಹನೂರು
ಪ್ರ: ಪ್ರೊ. ಎಂ. ನಂಜಯ್ಯ ಹೊಂಗನೂರು
ನಿರ್ದೇಶಕರು, ಪ್ರಸಾರಾಂಗ, ಮೈಸೂರು
ಪು : 192, ಬೆಲೆ : 380/–

**ಮಹಾಯಾನ (ಡಾ. ಬಿ.ಆರ್. ಅಂಬೇಡ್ಕರ್**
**ಜೀವನಾಧಾರಿತ ಕಾದಂಬರಿ)**
ಪ್ರೊ. ಎಚ್.ಟಿ. ಪೋತೆ
ಪ್ರ: ಸಪ್ನ ಬುಕ್ ಹೌಸ್
ಗಾಂಧಿನಗರ, ಬೆಂಗಳೂರು
ಪು : 691, ಬೆಲೆ : 750/–

**ನಮ್ಮ ಸಂವಿಧಾನ ನಮ್ಮ ಹೆಮ್ಮೆ**
ಶ್ರೀ ಸೋಮಲಿಂಗ ಗೆಣ್ಣೂರ
ಪ್ರ: ಕವಿತ ಪ್ರಕಾಶನ
ಚಾಮರಾಜಪುರಂ, ಮೈಸೂರು
ಪು : 160, ಬೆಲೆ : 200/–

**ವಿಜ್ಞಾನ ಡಿಂಡಿಮ**
ಶ್ರೀ ಎಸ್. ರಾಮಪ್ರಸಾದ್
ಪ್ರ: ಸಂವಹ, ಶಿವರಾಂ ಪೇಟೆ, ಮೈಸೂರು
ಪು : 400, ಬೆಲೆ : 400/–

# ಲೇಖಕರ ವಿಳಾಸ

**ಡಾ. ಎ. ನಿರಂಜನ**
ನಂ.1140, 4ನೇ ಮುಖ್ಯ ರಸ್ತೆ
ವಿವೇಕಾನಂದನಗರ
ಮೈಸೂರು 570 023
ಮೊ: 99865 67700

**ಡಾ. ರಾಜಶೇಖರ ಜಮದಂಡಿ**
ನಂ.364, ಬ್ಯಾಂಕರ್ಸ್ ಕಾಲೋನಿ
ಬಾಪೂಜಿನಗರ ರಸ್ತೆ
ಬೋಗಾದಿ ಸ್ನೇಹಕಿರಣ ಶಾಲೆ ಎದುರು
ಮೈಸೂರು 570 026
ಮೊ: 94484 41471

ಹಿಂಬದಿ ಪುಟದ ಚಿತ್ರ

ಬೆಂಗಳೂರಿನ ಶಿವರಾತ್ರೀಶ್ವರ ಕೇಂದ್ರದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ Vachanas of Allamaprabhu – Commenatry (Vol. I & II) ಕೃತಿಯನ್ನು ಒರಿಸ್ಸಾ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ದೀಕ್ಷಿತ್ ಕೃಷ್ಣ ಶ್ರೀಪಾದ್‌ರವರು ಲೋಕಾರ್ಪಣೆ ಮಾಡಿದರು. ಶ್ರೀ ಶಿವಾನಂದ ಶಹಾಪುರ, ಡಾ. ಸಿ. ಸೋಮಶೇಖರ್, ಶ್ರೀ ಡಿ.ಆರ್. ಪಾಟೀಲ್, ಶ್ರೀ ಎಂ.ಬಿ. ಪಾಟೀಲ್, ಶ್ರೀ ಬಸವಲಿಂಗ ಸ್ವಾಮಿಗಳು, ಶ್ರೀ ಗೊ.ರು. ಚನ್ನಬಸಪ್ಪ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಶ್ರೀ ಎನ್.ಜಿ. ಮಹಾದೇವಪ್ಪ ಹಾಗೂ ಶ್ರೀ ಸುಬ್ಬರಾವ್‌ರವರುಗಳಿದ್ದಾರೆ. (28 ಫೆಬ್ರವರಿ 2026)




ಗುಂಡ್ಲುಪೇಟೆ ತಾಲ್ಲೂಕು ಕಡಬೂರಿನಲ್ಲಿ ಶ್ರೀ ಶಿವಲಿಂಗ ಮತ್ತು ಶ್ರೀ ಗಣಪತಿ ದೇವರುಗಳ ಪ್ರತಿಷ್ಠಾಪನೆ ಹಾಗೂ ಕಳಶಾರೋಹಣದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್‌ರವರು ಉದ್ಘಾಟಿಸಿದರು. ಹಂಗಳ, ಮರಿಯಾಲ, ಚಾಮರಾಜನಗರ, ಕನಕಪುರ, ಪಡುಗೂರು, ಮೂಡುಗೂರು, ಕಬ್ಬಹಳ್ಳಿ ಮತ್ತು ಬೊಮ್ಮನಹಳ್ಳಿ ಶ್ರೀಗಳಿದ್ದಾರೆ (27 ಫೆಬ್ರವರಿ 2026)



ಬೆಂಗಳೂರು ಸುತ್ತೂರು ಸದನಕ್ಕೆ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (24 ಫೆಬ್ರವರಿ 2026)



ಮೈಸೂರಿನಲ್ಲಿ ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರ 'ಅಂತರಂಗದ ಅನಾವರಣ' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀಮತಿ ಪ್ರತಿಭಾ ರಾಜೇಂದ್ರ, ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಪ್ರೊ. ಎಸ್. ಇಂದುಮತಿ, ಪ್ರೊ. ಮೊರಬದ ಮಲ್ಲಿಕಾರ್ಜುನ ಹಾಗೂ ಶ್ರೀ ರಾಜೇಂದ್ರ ಮೃತ್ಯುಂಜಯಪ್ಪನವರುಗಳಿದ್ದಾರೆ (21 ಫೆಬ್ರವರಿ 2026)



ಬೆಂಗಳೂರಿನಲ್ಲಿ ಕದಳಿ ಮಹಿಳಾ ವೇದಿಕೆ ಹಾಗೂ ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಗೀತಾ ಮಹದೇವಪ್ರಸಾದ್‌ರವರಿಗೆ ಕದಳಿ ಪ್ರಶಸ್ತಿ ಪ್ರದಾನ ಮಾಡಲಾಯಿತು ಹಾಗೂ ಪದ್ಮಶ್ರೀ ಪುರಸ್ಕೃತರಾದ ಶ್ರೀಮತಿ ಎಸ್.ಜಿ. ಸುಶೀಲಮ್ಮನವರುಗಳನ್ನು ಸನ್ಮಾನಿಸಲಾಯಿತು. ಶ್ರೀಮತಿ ಪ್ರೇಮಾ ಸೋಮಸುಂದರ್, ಡಾ. ಎಂ.ಎಸ್. ಆಶಾದೇವಿ, ಡಾ. ಸಿ. ಸೋಮಶೇಖರ್, ಶ್ರೀ ಗೊ.ರು. ಚನ್ನಬಸಪ್ಪ, ಶ್ರೀ ಕೆ.ವಿ. ನಾಗರಾಜಮೂರ್ತಿ, ಶ್ರೀ ಸುನೀಲ್ ಶಾಸ್ತ್ರೀ, ಶ್ರೀ ಎಲ್. ರೇವಣಸಿದ್ಧಯ್ಯ, ಶ್ರೀಮತಿ ಮಹಾಲಕ್ಷ್ಮೀ ಹಾಗೂ ಶ್ರೀಮತಿ ಪ್ರಮೀಳಾ ಗರಡಿಯವರುಗಳಿದ್ದಾರೆ (24 ಫೆಬ್ರವರಿ 2026)




ಬೆಂಗಳೂರಿನಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯಿಂದ ಪರಮಪೂಜ್ಯ ಜಗದ್ಗುರುಗಳು, ಸಿರಿಗೆರೆ ಜಗದ್ಗುರುಗಳು, ಹುಲಸೂರು, ಸಿದ್ಧಗಂಗಾ, ಭಾಲ್ಕಿ ಶ್ರೀಗಳು ಮತ್ತು ಬೆಲ್ದಾಳ ಶರಣರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಶ್ರೀ ಭೀಮಣ್ಣ ಖಂಡ್ರೆಯವರ ನುಡಿನಮನ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಲಾಯಿತು. ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಸಿದ್ದರಾಮಯ್ಯ, ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಈಶ್ವರ್ ಖಂಡ್ರೆ ಹಾಗೂ ಶ್ರೀ ಸಾಗರ್ ಖಂಡ್ರೆ ಮೊದಲಾದವರುಗಳಿದ್ದಾರೆ (14 ಫೆಬ್ರವರಿ 2026)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 2, February 2026



ISSN 2583-7648

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org